ಶ್ರೀ ಶಂಕರಚರಿತಾಮೃತಮ್



ವಿದ್ವಾನ್ ಎನ್. ರಂಗನಾಥ ಶರ್ಮಾ

ಶ್ರೀ ಶಂಕರಚರಿತಾಮೃತಮ್

ಮೂಲ ಮತ್ತು ಅನುವಾದ

ವಿದ್ವಾನ್ ಎನ್. ರಂಗನಾಥ ಶರ್ಮಾ

ಉದಯ ಪ್ರಕಾಶನ

984, 11ನೇ 'ಎ' ಮುಖ್ಯರಸ್ತೆ, 3ನೇ ವಿಭಾಗ
ರಾಜಾಜಿನಗರ, ಬೆಂಗಳೂರು – 560 010
ದೂರವಾಣಿ : 2338 9143

Sri Shankaracharitamritam : A short epic poem in Sanskrit on ther life and achievements of Adya Shankaracharya with its Kannada rendering by Vidwan N. Ranganatha Sharma, 102, 7th main Road, Avalahalli Layout, B.S.K. III Stage, Bangalore - 560085

© N. Ranganatha Sharma

Page . xviii + 52

Price 30/-

Third Edition 2007

Published by
UDAYA PRAKASHANA
984, 11th 'A' Main Road, 3rd Block
Rajaji Nagar, Bangalore - 560 010
Phone 2338 9143

LAKSHMI MUDRANALAYA
ISO 9001-2000
Chamarajpet, Bangalore - 560 018
Phone 2661 3123

श्री श्री जगद्गुरु शङ्कराचार्य महासंस्थानम्, दक्षिणाम्नाय श्री शारदापीठम्, शृङ्गेरी

दक्षिणाम्नाय शृङ्गगिरि शारदापीठाधीश्वराणां जगद्गुरु
शङ्कराचार्याणाम् अनन्तश्रीविभूषितानां

श्री श्री भारतीतीर्थमहास्वामिनाम्

अनुग्रहसन्देशः

पाणिनीयादितन्त्रेषु परं पाण्डित्यमास्थिता ।
श्रीरङ्गनाथशर्माण विद्याविनयभूषिता ॥

आद्यश्रीशङ्कराचार्यचरितं देवभाषया ।
लोकानां सुखबोधाय विलिख्य कलुषापहम् ॥

अस्मानश्रावयंस्तच्च रुचिरं काव्यमुत्तमम् ।
श्रुत्वास्माक महानासीदानन्दातिशयो हृदि ॥

भक्तिश्च शङ्करार्येषु रक्तिस्तद्गुणवर्णने ।
शक्तिश्च काव्यरचने त्रयमत्रेक्ष्यते स्फुटम् ॥

भाषान्तरानुवादोऽपि बहूनुपकरिष्यति ।
भगवत्पादपादाब्जमधुपानिति मन्महे ॥

काव्यमेतत्कटाक्षेण शारदाचन्द्रचूडयो ।
प्रसारमेतु सर्वत्र सज्जनैरादृतं सदा ॥

श्रीशङ्करचरितामृतकाव्यस्य ग्रन्थितार एतस्य ।
श्रीरङ्गनाथविबुधाःश्रेय·पारम्परीमवाप्नुवताम् ॥

इति नारायणस्मरणम्

शृङ्गगिरिः
विक्रम चैत्रकृष्ण द्वितीया गुरुवासर.
२०-४-२०००

ಪ್ರಸ್ತಾವನೆ

ಈ ಗ್ರಂಥವನ್ನು ರಚಿಸುವುದಕ್ಕೆ ಒಂದು ನಿಮಿತ್ತವು ದೇವದತ್ತವಾಗಿ ಒದಗಿ ಬಂದಿತು. ಈ ಹಿಂದೆ ಮಾಧವೀಯ ಶ್ರೀಶಂಕರದಿಗ್ವಿಜಯವನ್ನು ಶೃಂಗೇರಿ ಶ್ರೀ ಶ್ರೀ ಜಗದ್ಗುರು ಭಾರತೀತೀರ್ಥ ಮಹಾಸ್ವಾಮಿಗಳವರ ಆಜ್ಞೆಯಂತೆ ಕನ್ನಡಕ್ಕೆ ಅನುವಾದಿಸಿದ್ದೇನೆ. ಅದನ್ನು ಮೂಲ ಶ್ಲೋಕಸಹಿತವಾಗಿ ಶ್ರೀಮಠದವರು ಎರಡು ಭಾಗಗಳಲ್ಲಿ ಮುದ್ರಿಸಿ ಪ್ರಕಟಿಸಿದ್ದಾರೆ. ಅದು ಪ್ರೌಢವೂ ನಾನಾ ವಸ್ತು ವರ್ಣನೆಗಳಿಂದ ವಿಸ್ತೃತವೂ ಆಗಿದೆ. ಶ್ರೀ ಶಂಕರ ಭಗವತ್ಪಾದರ ದಿವ್ಯಚರಿತೆಯನ್ನು ಸರ್ವರೂ ಓದಿ ತಿಳಿದಿರಬೇಕೆಂದು ನನಗೆ ಅನ್ನಿಸಿತು. ಆ ಉದ್ದೇಶವು ನನಗೆ ತಲೆದೋರಿದಾಗ ನನ್ನ ಮಾನ್ಯಮಿತ್ರರೂ ಶ್ರೀ ಶಂಕರಾಚಾರ್ಯರ ಭಕ್ತರೂ ಆದ ಶ್ರೀ ಎಸ್.ವಿ. ನಾರಾಯಣ್ ಅವರು ಆಚಾರ್ಯರ ಚರಿತೆಯನ್ನು ಸಂಸ್ಕೃತ ಶ್ಲೋಕಗಳಲ್ಲಿ ಬರೆಯಬೇಕೆಂದೂ ಈ ಪವಿತ್ರಚರಿತೆಯನ್ನು ಪಾರಾಯಣ ಮಾಡತಕ್ಕವರಿಗೆ ಅದು ಉಪಯುಕ್ತವಾಗುವುದೆಂದೂ ಸಲಹೆಯನ್ನಿತ್ತರು. ಅದು ಯುಕ್ತವೆಂದು ಅಂಗೀಕರಿಸಿ, ಸರಳವಾದ ಅನುಷ್ಟುಪ್ ಶ್ಲೋಕಗಳಲ್ಲಿ ಈ ಗ್ರಂಥವನ್ನು ರಚಿಸಿ, ಎಲ್ಲ ಕನ್ನಡಿಗರಿಗೆ ಉಪಯುಕ್ತವಾಗಲೆಂದು ಕನ್ನಡಕ್ಕೆ ಅನುವಾದಿಸಿದ್ದೇನೆ. ಶ್ರೀ ಶಂಕರಾಚಾರ್ಯರ ಜೀವನ ವಿಷಯದಲ್ಲಿ ಐತಿಹಾಸಿಕವಾಗಿ ತಿಳಿದು ಬಂದಿರುವ ಸಂಗತಿ ಅತ್ಯಲ್ಪವಾದದ್ದು. ಅದೆಲ್ಲವೂ ಇಲ್ಲಿ ಸಂಗೃಹೀತವಾಗಿದೆ. ಆದರೆ ಶ್ರೀಭಗವತ್ಪಾದರ ಲೋಕೋತ್ತರವಾದ ಪ್ರಜ್ಞಾಶಕ್ತಿ ಅವರ ಗ್ರಂಥಗಳ ಮಹಿಮೆ, ಅವರಿಂದ ಭಾರತದೇಶಕ್ಕಾದ ಲೋಕೋಪಕಾರ–ಇವು ಅತಿವಿಸ್ತೃತವಾದವು. ಅವನ್ನು ವರ್ಣಿಸಲು ನನ್ನ ಲೇಖನಿಗೆ ಶಕ್ತಿ ಇಲ್ಲ.

ಹಿಂದೆ ಪ್ರಸ್ತುತವಾದ ಮಾಧವೀಯ ಶ್ರೀಶಂಕರ ದಿಗ್ವಿಜಯದ ಅನುವಾದ ಗ್ರಂಥಕ್ಕೆ ನಾನು ಬರೆದಿರುವ ಪ್ರಸ್ತಾವನೆಯಿಂದ ಕೆಲವು ವಾಕ್ಯಗಳನ್ನು ಸಂಗ್ರಹಿಸಿ, ಪ್ರಕೃತೋಪಯುಕ್ತ ವಾಗುತ್ತವೆಯೆಂದು ನಡು ನಡುವೆ ಸೇರಿಸಿ, ಮುಂದೆ ಬರೆಯುತ್ತಿದ್ದೇನೆ.

ಆಚಾರ್ಯರ ಕಾಲ

ಈ ವಿಚಾರದಲ್ಲಿ ಸಂಶೋಧಕರು ವಿಪುಲವಾದ ಚರ್ಚೆಯನ್ನು ನಡೆಸಿದ್ದಾರೆ. ಆಚಾರ್ಯರ ಜೀವಿತದ ಕಾಲ ಕೇವಲ ಮೂವತ್ತೆರಡು ವರ್ಷಗಳೆಂಬುದು ಸರ್ವಸಂಮತ. ಇದುವರೆಗೆ ದೊರಕಿದ ಪ್ರಮಾಣಗಳಿಂದ ಶ್ರೀಶಂಕರಾಚಾರ್ಯರ ಸಮಯವು ಕ್ರಿಸ್ತೀಯ 7–8 ನೆಯ ಶತಕಗಳೆಂದು ಸ್ವೀಕರಿಸುವುದು ನ್ಯಾಯಸಂಮತವೆಂದು ಸಂಶೋಧಕರ ನಿರ್ಣಯವಾಗಿದೆ. ಅಂತೂ ಭಗವತ್ಪಾದರು ಇಂದಿಗೆ ಸುಮಾರು 1300 ವರ್ಷಗಳಷ್ಟು ಪ್ರಾಚೀನರೆಂದು ಹೇಳಬಹುದು.

ಜನ್ಮಸ್ಥಳ

ಈಗ ಕೇರಳರಾಜ್ಯದಲ್ಲಿರುವ ಕಾಲಟಿ (ಕಾಲಡಿ) ಗ್ರಾಮವು ಆಚಾರ್ಯರ ಜನ್ಮಸ್ಥಳ. ಬಳಿಯಲ್ಲಿ ಪೂರ್ಣಾನದಿ ಹರಿಯುತ್ತಿದೆ. ಕೆಲವು ವರ್ಷಗಳ ಹಿಂದೆ ಈ ಭಾಗವು ಕಾಡಾಗಿತ್ತು. ಕ್ರಿ.ಶ. 1879ರಿಂದ 1912ರವರೆಗೂ ಶ್ರೀಶೃಂಗೇರಿ ಜಗದ್ಗುರು ಪೀಠದಲ್ಲಿ ವಿರಾಜಮಾನ ರಾಗಿದ್ದ ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವನೃಸಿಂಹಭಾರತೀ ಮಹಾಸ್ವಾಮಿಗಳು ಆಚಾರ್ಯರ ಮನೆಯಿದ್ದ ಸ್ಥಳವನ್ನು ಮಹಾಪ್ರಯತ್ನದಿಂದ ಸಪ್ರಮಾಣವಾಗಿ ಗುರುತಿಸಿ, ಆ ಸ್ಥಳದಲ್ಲಿ ಒಂದು ಭವ್ಯವಾದ ಶ್ರೀಮಠವನ್ನು ನಿರ್ಮಿಸಿದರು. ಅಲ್ಲದೆ ಶ್ರೀಶಂಕರರ ತಾಯಿ ಆರ್ಯಾಂಬೆಯ ವೃಂದಾವನವನ್ನು ಕಟ್ಟಿಸಿದರು.

ಆಚಾರ್ಯರ ಜನನವಾದದ್ದು ಸಂಪ್ರದಾಯದ ಪ್ರಕಾರ ವೈಶಾಖ ಶುದ್ಧಪಂಚಮೀ. ಅವರು ನಂಬೂದರೀ ಬ್ರಾಹ್ಮಣವರ್ಗದವರು. ತೈತ್ತಿರೀಯ ಶಾಖೆಯ ಕೃಷ್ಣಯಜುರ್ವೇದಿಗಳೆಂದೂ ಅತ್ರಿಗೋತ್ರದವರೆಂದೂ ಪ್ರಸಿದ್ಧಿ ಇದೆ. ಇದುವರೆಗೆ ಉಪಲಬ್ಧವಾದಷ್ಟು ಅವರ ಜೀವನ ಚರಿತ್ರೆ ಈ ಗ್ರಂಥದಲ್ಲಿದೆ. ಮಾಧವೀಯದಲ್ಲಿ ವರ್ಣಿಸಿರುವಂತೆ ಕೆಲವು ಪವಾಡಗಳನ್ನೂ ಆಚಾರ್ಯರು ವಿಶ್ವರೂಪನ ಗೃಹಕ್ಕೆ ವಾದಾರ್ಥವಾಗಿ ಹೋದಾಗ ಅವರೀರ್ವರಿಗೆ ನಡೆದ ವಿಚಿತ್ರ ಸಂಭಾಷಣೆಯನ್ನೂ ಕೈಬಿಟ್ಟಿದ್ದೇನೆ. ಹೀಗೆಯೇ ಕೆಲವು ಸಂನಿವೇಶಗಳಲ್ಲಿ ಸ್ವಲ್ಪ ಪರಿವರ್ತನೆ ಈ ಕೃತಿಯಲ್ಲಿದೆ. ಆದಷ್ಟು ಸತ್ಯವೃತ್ತಾಂತದ ಕಡೆಗೆ ಹೋಗಬೇಕೆಂಬುದು ನನ್ನ ಉದ್ದೇಶ. ಪವಾಡಸದೃಶವಾದ ಪ್ರತ್ಯಕ್ಷ ಕೃತಿಗಳೇ ಶ್ರೀ ಶಂಕರಭಗವತ್ಪಾದರ ಲೋಕೋತ್ತರ ಮಹಿಮೆಯನ್ನು ಸಾರಲು ಸಮರ್ಥವಾಗಿವೆ.

ಜೀವನಚರಿತೆಯ ಸಂಕ್ಷಿಪ್ತ ಪರಾಮರ್ಶ

ಆಚಾರ್ಯರ ಜೀವನಚರಿತೆಯನ್ನು ಅವಲೋಕಿಸಿದಾಗ ಇವರೊಬ್ಬ ಕರ್ತೃತ್ವಶಕ್ತಿಯುಳ್ಳ ಮಹಾಪುರುಷರೆಂದು ಯಾರಿಗಾದರೂ ಹೊಳೆಯದಿರದು. ಆ ಕಾಲದಲ್ಲಿ ಭರತಖಂಡದ ಆದ್ಯಂತವೂ ಕಾಲ್ನಡಿಗೆಯಿಂದಲೇ ಸಂಚರಿಸಿ ವೈದಿಕಧರ್ಮವನ್ನು ಪುನರುದ್ಧರಿಸಿರುವುದು ಸಾಮಾನ್ಯ ಕಾರ್ಯವಲ್ಲ. ವೈದಿಕಧರ್ಮದ ತವರು ಮನೆಯಾಗಿದ್ದ ಈ ದೇಶವು ಅವೈದಿಕ ಮತ ಗಳಿಂದ ತುಂಬಿ ಹೋಗುತ್ತಿರುವುದೂ ಪರಿಶುದ್ಧವಾದ ಔಪನಿಷದ ದರ್ಶನವು ಸಾಂಖ್ಯಾದಿ ದ್ವೈತದರ್ಶನಗಳಿಂದ ಕ್ಷೀಣಿಸಿ ಕಣ್ಮರೆಯಾಗುತ್ತಿರುವುದೂ ಅವರಿಗೆ ಅಪಾರವಾದ ಚಿಂತೆ ಯನ್ನುಂಟುಮಾಡಿರಬೇಕು. ಈ ಸಮಯದಲ್ಲಿ ಯುಗಮಹಿಮೆಯೆಂಬ ನೆವದಲ್ಲಿ ಸುಮ್ಮನಿರು ವುದು ಆ ಮಹಾಚೇತನಕ್ಕೆ ಒಗ್ಗಲಿಲ್ಲ. ಶುದ್ಧವಾದ ವೈದಿಕಧರ್ಮವನ್ನು ಮೊದಲಿನ ಉನ್ನತ ಸ್ಥಾನಕ್ಕೆ ಏರಿಸಬೇಕೆಂದು ನಿಶ್ಚಯಿಸಿ, ಮಾನಸಶ್ರಮವನ್ನೂ ದೈಹಿಕವಾದ ಆಯಾಸವನ್ನೂ ಲೆಕ್ಕಿಸದೆ ಆವಿಷ್ಟರಾದವರಂತೆ ಆಸೇತು ಹಿಮಾಚಲಪರ್ಯಂತವಾಗಿ ಮತ್ತೆ ಮತ್ತೆ ಸಂಚರಿಸಿದರು. ಅಷ್ಟು ಚಿಕ್ಕ ವಯಸ್ಸಿನಲ್ಲಿ ಗಳಿಸಿದ ವಿದ್ಯೆ ಎಲ್ಲ ವೇದಗಳ ಅಧ್ಯಯನ, ಶಾಸ್ತ್ರಪಾಂಡಿತ್ಯ, ವೈದಿಕ

ಅವೈದಿಕದರ್ಶನಗಳಲ್ಲಿ ಸಹ ತಲಸ್ಪರ್ಶಿಯಾದ ವೈದುಷ್ಯ, ಅಪಾರ ಗ್ರಂಥಗಳ ರಚನೆ, 'ಕರತಲಭಿಕ್ಷಸ್ತರುತಲವಾಸ' ಗಳೊಡನೆ ದೇಶಪರ್ಯಟನೆ – ಇವೆಲ್ಲವನ್ನೂ ಪರಿಶೀಲಿಸಿ ಆಶ್ಚರ್ಯಚಕಿತರಾದ ವಿದ್ವಾಂಸರು ಭಗವಾನ್ ಶಂಕರನೇ ಶ್ರೀಶಂಕರಾಚಾರ್ಯರೂಪದಿಂದ ಅವತರಿಸಿದನೆಂದು ಭಾವಿಸಿರುವುದು ಆಶ್ಚರ್ಯವೇನಲ್ಲ.

ಅಷ್ಟವರ್ಷೇ ಚತುರ್ವೇದೀ ದ್ವಾದಶೇ ಸರ್ವಶಾಸ್ತ್ರವಿತ್ ।
ಷೋಡಶೇ ಕೃತವಾನ್ ಭಾಷ್ಯಂ ದ್ವಾತ್ರಿಂಶೇ ಮುನಿರಭ್ಯಗಾತ್ ॥

''ಶ್ರೀ ಶಂಕರಯತಿಗಳು ತಮ್ಮ ಎಂಟನೆಯ ವರ್ಷದಲ್ಲಿ ನಾಲ್ಕು ವೇದಗಳಲ್ಲಿ ಪಾರಂಗತರಾಗಿ ಹನ್ನೆರಡನೆಯ ವಯಸ್ಸಿನಲ್ಲಿ ಸರ್ವಶಾಸ್ತ್ರಗಳನ್ನು ಬಲ್ಲವರಾಗಿದ್ದರು. ಹದಿನಾರನೆಯ ವರ್ಷದಲ್ಲಿ ಸೂತ್ರಭಾಷ್ಯವನ್ನು ರಚಿಸಿದರು. ಮೂವತ್ತೆರಡು ವರ್ಷಗಳ ವಯಸ್ಸಿನಲ್ಲಿ ನಿರ್ವಾಣವನ್ನೈದಿದರು'' ಎಂಬುದೂ ಅತಿಶಯೋಕ್ತಿಯಲ್ಲ. ಏಕಸಂಧಿಗ್ರಾಹಿಗಳೂ ಲೋಕವಿಲಕ್ಷಣ ಪ್ರತಿಭೆಯುಳ್ಳವರೂ ಈಗಲೂ ಅಲ್ಲಲ್ಲಿ ಕಂಡು ಬರುತ್ತಾರೆ.

ಅದ್ವೈತ ಸಿದ್ಧಾಂತ

ಉಪನಿಷತ್ತುಗಳಿಗೆ ವೇದಾಂತವೆಂದು ಹೆಸರಿದೆ. ಆದ್ದರಿಂದ ಉಪನಿಷತ್ ಪ್ರತಿಪಾದ್ಯವಾದ ಅಧ್ಯಾತ್ಮ ಶಾಸ್ತ್ರವು ವೇದಾಂತ ಶಾಸ್ತ್ರವೆಂದು ಪ್ರಸಿದ್ಧವಾಯಿತು. ವೇದಾಂತಿಗಳನ್ನು ಉಪನಿಷದ್ವಾದಿಗಳೆಂದೂ ಔಪನಿಷದರೆಂದೂ ವ್ಯವಹರಿಸುವುದುಂಟು. ನಾನು ನಾನು – ಎಂದುಕೊಳ್ಳುವ ಜೀವ, ಸುತ್ತಲೂ ಕಾಣುವ ಜಗತ್ತು, ಇವುಗಳಿಗೆ ನಿಯಾಮಕನಾದ ಈಶ್ವರ–ಈ ಮೂರುವಸ್ತುಗಳ ವಿಚಾರವೇ ಅಧ್ಯಾತ್ಮ ಶಾಸ್ತ್ರದ ತಿರುಳು. ಸಾಂಖ್ಯಾದಿ ವೈದಿಕ ದರ್ಶನಗಳೂ ಬೌದ್ಧಜೈನಾದಿ ದರ್ಶನಗಳೂ ಈ ಮೂರನ್ನೇ ಮುಖ್ಯವಾಗಿ ವಿಚಾರಿಸುತ್ತವೆ. ಇವುಗಳಲ್ಲಿ ಅದ್ವೈತವನ್ನು ಪ್ರತಿಪಾದಿಸತಕ್ಕದ್ದು ವೇದಾಂತ ಒಂದೇ ಉಳಿದವೆಲ್ಲ ದ್ವೈತವನ್ನು ಹೇಳತಕ್ಕವು.

ದ್ವೈತವೇದಾಂತ, ವಿಶಿಷ್ಟಾದ್ವೈತವೇದಾಂತ – ಮುಂತಾದ ಭೇದಗಳು ಆಚಾರ್ಯರ ಕಾಲದಲ್ಲಿರಲಿಲ್ಲ. ಆದ್ದರಿಂದಲೇ ''ಸರ್ವೋಪನಿಷತ್ಸು ಹಿ ವಿಜ್ಞಾನಾತ್ಮನಃ ಪರಮಾತ್ಮನಾ ಏಕತ್ವಪ್ರತ್ಯಯೋ ವಿಧೀಯತ ಇತ್ಯವಿಪ್ರತಿಪತ್ತಿಃ ಸರ್ವೇಷಾಮುಪನಿಷದ್ವಾದಿನಾಮ್'' (ಬೃಹ 2–1–20) ಎಂದು ಶ್ರೀ ಶಂಕರಾಚಾರ್ಯರು ಬರೆದಿದ್ದಾರೆ. ಸಕಲೋಪನಿಷತ್ತುಗಳಲ್ಲಿಯೂ ವಿಜ್ಞಾನಾತ್ಮನಾದ ಜೀವನಿಗೂ ಪರಮಾತ್ಮನಿಗೂ ಅಭೇದವೇ ಪ್ರತಿಪಾದಿತವಾಗಿದೆ ಯೆಂಬುದರಲ್ಲಿ ಸಮಸ್ತ ವೇದಾಂತಿಗಳಿಗೂ ಮತಭೇದವೇನೂ ಇಲ್ಲ–ಎಂದು ಈ ವಾಕ್ಯದ ಅಭಿಪ್ರಾಯ. ಸಾಂಖ್ಯಾದಿ ಸಕಲ ದರ್ಶನಕಾರರೂ ತಮ್ಮ ಗ್ರಂಥಗಳಲ್ಲಿ ಅದ್ವೈತಿಗಳನ್ನು ಮಾತ್ರ ವೇದಾಂತಿಗಳೆಂದು ವ್ಯವಹರಿಸಿದ್ದಾರೆ. ವೇದಾಂತದಲ್ಲಿ ಅನೇಕ ಪ್ರಕ್ರಿಯಾ

ಭೇದಗಳಿದ್ದವು. ಅವುಗಳಲ್ಲಿ ಶ್ರೀ ಗೌಡಪಾದರ ಹೇಳಿಕೆಯೊಂದೇ ಸಂಪ್ರದಾಯದಿಂದ ಬಂದದ್ದೆಂದೂ ಅದೇ ಪ್ರಾಮಾಣಿಕವೆಂದೂ ಆಚಾರ್ಯರ ನಿರ್ಣಯವಾಗಿದೆ.

ಆಚಾರ್ಯರ ಗುರುಪರಂಪರೆಯು ಶ್ರೀಮನ್ನಾರಾಯಣನಿಂದ ಆರಂಭವಾಗುತ್ತದೆಯೆಂದು ಈ ಪ್ರಾಚೀನ ಶ್ಲೋಕಗಳು ತಿಳಿಸುತ್ತವೆ.

ನಾರಾಯಣಂ ಪದ್ಮಭುವಂ ವಸಿಷ್ಠಂ
ಶಕ್ತಿಂ ಚ ತತ್ಪುತ್ರಪರಾಶರಂ ಚ ।
ವ್ಯಾಸಂ ಶುಕಂ ಗೌಡಪದಂ ಮಹಾಂತಂ
ಗೋವಿಂದಯೋಗೀಂದ್ರಮಥಾಸ್ಯ ಶಿಷ್ಯಮ್ ॥
ಶ್ರೀಶಂಕರಾಚಾರ್ಯಮಥಾಸ್ಯ ಪದ್ಮ
ಪಾದಂ ಚ ಹಸ್ತಾಮಲಕಂ ಚ ಶಿಷ್ಯಮ್ ।
ತಂ ತೋಟಕಂ ವಾರ್ತಿಕಕಾರಮನ್ಯಾನ್
ಅಸ್ಮದ್ ಗುರೂನ್ ಸಂತತಮಾನತೋಽಸ್ಮಿ ॥

ಸರ್ವಮತ ಸಾಮರಸ್ಯ

ಲೋಕದಲ್ಲಿ ನಾನಾಗುಣಸ್ವಭಾವದವರಿರುತ್ತಾರೆ. ಮಂದಾಧಿಕಾರಿಗಳೂ ಮಧ್ಯಮಾಧಿಕಾರಿಗಳೂ ಇರುತ್ತಾರೆ. ಅವರಿಗೆ ಅದ್ವಯಾತ್ಮ ದರ್ಶನವು ತಲೆಗೆ ಹತ್ತುವುದಿಲ್ಲ. ದ್ವೈತವೇ ಅವರಿಗೆ ಹಿತವೆನಿಸುತ್ತದೆ. ಅವರನ್ನೂ ಸಹ ಸೋಪಾನಕ್ರಮದಿಂದ ಮೇಲಕ್ಕೆ ಏರಿಸುವುದಕ್ಕಾಗಿ ಸಾಂಖ್ಯಾದಿ ದರ್ಶನಗಳನ್ನು ಋಷಿಗಳು ನಿರೂಪಿಸಿದರು. ಅವರೇನೂ ಅಜ್ಞಾನಿಗಳಲ್ಲ. ಆದರೆ ಅವರ ಸಿದ್ಧಾಂತವೇ ಪರಮಾರ್ಥಸತ್ಯವಲ್ಲವೆಂದೂ ಅದ್ವೈತವೇ ವೇದೋಕ್ತವಾದ ಸಮ್ಯಗ್ ದರ್ಶನವೆಂದೂ ಉತ್ತಮಾಧಿಕಾರಿಗಳಿಗೆ ತಿಳಿಸಿಕೊಡುವುದಕ್ಕಾಗಿ ಆಚಾರ್ಯರು ಇತರ ದರ್ಶನಗಳನ್ನು ಖಂಡಿಸಿದ್ದಾರೆ.

ದ್ವೈತವು ಹೇಯವಲ್ಲ. ಅದಿಲ್ಲದೆ ಲೋಕ ವ್ಯವಹಾರವೇ ನಡೆಯದು. ದ್ವೈತವಿದ್ದಾಗಲೇ ಗುರುಶಿಷ್ಯೋಪದೇಶಗಳೂ ಸಕಲ ವಿಧಿನಿಷೇಧಾತ್ಮಕ ಶಾಸ್ತ್ರಗಳೂ ಅರ್ಥವತ್ತಾಗುತ್ತವೆ. ಆಚಾರ್ಯರೇ ಇದಕ್ಕೆ ನಿದರ್ಶನ. ವಿದ್ಯಾಭ್ಯಾಸ, ಗ್ರಂಥರಚನೆ, ಶಿಷ್ಯೋಪದೇಶ, ಮಠಗಳ ಸ್ಥಾಪನೆ, ದೇವತಾ ಸ್ತುತಿ, ತಾಯಿಗೆ ನಡೆಸಿದ ಉತ್ತರಕ್ರಿಯೆ, ಅನ್ಯಮತ ಖಂಡನೆ – ಮೊದಲಾದ ಕ್ರಿಯೆಗಳು ದ್ವೈತಾವಲಂಬನದಿಂದಲೇ ಸಾಧ್ಯವಾಗತಕ್ಕವು. ಈಶ್ವರಾನುಗ್ರಹ ದಿಂದ ಚಿತ್ತಶುದ್ಧಿಯನ್ನೂ ಸದ್ಗುರುವಿನ ಉಪದೇಶವನ್ನೂ ಪಡೆಯುವುದಕ್ಕಾಗಿ ದ್ವೈತವು ಅತ್ಯಾವಶ್ಯಕವಾದದ್ದು. 'ಈಶ್ವರಾನುಗ್ರಹಾದೇವ ಪುಂಸಾಮದ್ವೈತವಾಸನಾ' ಎಂದು ಅವಧೂತಗೀತೆಯು ಬೋಧಿಸಿದೆ.

ಆಚಾರ್ಯರಿಂದಾದ ಲೋಕೋಪಕಾರಗಳು

ನಮ್ಮ ಋಷಿಗಳು ಕಷ್ಟಪಟ್ಟು ತಪಸ್ಸು ಮಾಡಿ ದಿವ್ಯದೃಷ್ಟಿಯನ್ನು ಪಡೆದು ಪರಮಾತ್ಮನ ಅನುಗ್ರಹದಿಂದ ಪರಮಾರ್ಥ ಸತ್ಯವನ್ನು ಉಪನಿಷತ್ತುಗಳ ರೂಪದಲ್ಲಿ ಗಾನ ಮಾಡಿದರು. ಅವರೆಲ್ಲರೂ ಕಂಡ ಸತ್ಯ ಒಂದೇ. ಅದೇ ಔಪನಿಷದದರ್ಶನ. ಅದು ವಿವಿಧಕಾರಣಗಳಿಂದ ಕ್ಷೀಣಿಸುತ್ತ ಕಣ್ಮರೆಯಾಗುತ್ತಿರುವಾಗ ಅದಕ್ಕೆ ಅಮೃತಸೇಚನವನ್ನು ಮಾಡಿ ಕಾಯಕಲ್ಪದಿಂದಲೋ ಎಂಬಂತೆ ನವಚೇತನವನ್ನು ತುಂಬಿ ಉಜ್ಜೀವನಗೊಳಿಸಿದವರು ಶ್ರೀಶಂಕರಭಗವತ್ಪಾದರು. ಉಪನಿಷತ್ತುಗಳು, ಬ್ರಹ್ಮಸೂತ್ರ, ಭಗವದ್ಗೀತೆ – ಎಂಬ ಪ್ರಸ್ಥಾನತ್ರಯಕ್ಕೆ ವಿಸ್ತೃತವಾದ ಭಾಷ್ಯಗಳನ್ನು ರಚಿಸಿರುವುದು ಸಾಧಾರಣ ಕಾರ್ಯವಲ್ಲ. ಈ ಭಾಷ್ಯಗಳಲ್ಲದೆ ಸಾಮಾನ್ಯಜನರಿಗೆ ಸುಲಭಗ್ರಾಹ್ಯವಾಗುವಂತೆ ವಿವೇಕ ಚೂಡಾಮಣಿ, ಉಪದೇಶಸಾಹಸ್ರಿ – ಮುಂತಾದ ಪ್ರಕರಣ ಗ್ರಂಥಗಳನ್ನು ರಚಿಸಿದರು. ಭಕ್ತಜನರಿಗೆ ವೇದಾಂತ ತತ್ತ್ವಗಳನ್ನೊಳಗೊಂಡ ರಮಣೀಯವಾದ ಸ್ತೋತ್ರಸಾಹಿತ್ಯವನ್ನು ನಿರ್ಮಿಸಿದರು. 'ಸರ್ವಂ ದುಃಖಂ ದುಃಖಂ' ಎಂಬ ವೈರಾಗ್ಯವನ್ನು ಅವರು ಬೋಧಿಸಲಿಲ್ಲ. ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿದ ಕರ್ಮಸಿದ್ಧಾಂತವನ್ನು ಗೀತಾ ಭಾಷ್ಯದಲ್ಲಿ ಎತ್ತಿ ಹಿಡಿದು ''ದುಡಿ ದುಡಿ, ಕೆಲಸಮಾಡು, ಈಶ್ವರ ಸೇವೆಯೆಂದು ತಿಳಿದು ಸ್ವಧರ್ಮಾನುಸಾರವಾದ ಕರ್ಮವನ್ನು ಮಾಡುತ್ತಿರು. ಫಲಾಭಿಲಾಷೆಯಿಲ್ಲದೆ ಜನಸೇವೆ ಮಾಡು, ಚಿತ್ತಶುದ್ಧಿಗಾಗಿ ಕರ್ಮವನ್ನು ಮಾಡು, ನೀತಿ ಮಾರ್ಗದಿಂದ ಸಂಪಾದಿಸು, ಭಕ್ತಿಮಾರ್ಗವನ್ನವಲಂಬಿಸು'' ಎಂದು ಮತ್ತೆ ಮತ್ತೆ ಆಚಾರ್ಯರು ಉಪದೇಶಿಸಿದ್ದಾರೆ. ಕಾಯಕವೇ ಕೈಲಾಸ ಎಂಬ ಘೋಷಣೆ ಹೊಸದಲ್ಲ. ಭಜಗೋವಿಂದಂ ಭಜಗೋವಿಂದಂ, ಅವಿನಯ ಮಪನಯ ವಿಷ್ಣೋ ಮೊದಲಾದ ಭಕ್ತಿಭಾರದಿಂದ ಬಳುಕುವ ಆಚಾರ್ಯರಚಿತ ಸ್ತೋತ್ರಗಳನ್ನು ಓದಿದವರು 'ಭಕ್ತಿಯ ಭಾಂಡಾಗಾರ ಶ್ರೀಶಂಕರಾಚಾರ್ಯರು' ಎಂದು ಉದ್ಗಾರ ಮಾಡದೆ ಇರುವುದಿಲ್ಲ.

ಈಶ್ವರನು ಒಬ್ಬನೇ

ವೇದಾಂತವು ಪರಮಾತ್ಮನನ್ನು ಬ್ರಹ್ಮ ಆತ್ಮ ಎಂಬ ಶಬ್ದಗಳಿಂದ ವ್ಯವಹರಿಸುತ್ತದೆ. ಸಾಂಖ್ಯಾದಿದರ್ಶನಗಳು ಈಶ್ವರ ಎಂಬ ಶಬ್ದವನ್ನು ಬಳಸುತ್ತವೆ. ಶಿವನೇ ಸರ್ವೋತ್ತಮ, ವಿಷ್ಣುವೇ ಸರ್ವೋತ್ತಮ ಇತ್ಯಾದಿ ವಾದಗಳು ಅನಂತರ ಹುಟ್ಟಿಕೊಂಡವು. ತಂತ್ರಾಗಮಗಳ ಪ್ರಭಾವದಿಂದ ಅನೇಕ ನಾಮರೂಪಗಳ ಕಲ್ಪನೆಯುಳ್ಳ ಉಪಾಸನಾಭೇದಗಳು ತಲೆದೋರಿದವು. ವೇದೋಕ್ತವಾದ ಏಕೇಶ್ವರವಾದವು ಎಂದರೆ ಅದ್ವೈತಸಿದ್ಧಾಂತವು ಮರೆಯಾಯಿತು.

ಮತನಿಮಿತ್ತಕವಾದ ಅಂತಃಕಲಹಗಳಿಂದ ಸಮಾಜವು ವಿಚ್ಛಿದ್ರವಾಗುತ್ತಿದೆಯೆಂದೂ

ವೇದೋಕ್ತವಾದ ಏಕಾತ್ಮತಾ ಸಿದ್ಧಾಂತದಿಂದಲೇ ಸರ್ವಮತಗಳ ಸಾಮರಸ್ಯವನ್ನು ಬೋಧಿಸಿ ರಾಷ್ಟ್ರದ ಏಕತೆ ಮತ್ತು ಸಮಗ್ರತೆಗಳನ್ನುಳಿಸಬೇಕೆಂದೂ ಕಾರ್ಯಪ್ರವೃತ್ತರಾದ ವಿಭೂತಿ ಪುರುಷರು ಶ್ರೀಶಂಕರಾಚಾರ್ಯರು. ಅಖಂಡ ಭಾರತದಲ್ಲಿ ಸಂಚರಿಸಿ ಜನತೆಯಲ್ಲಿ ಪ್ರಸಿದ್ಧರಾಗಿದ್ದ ಪಂಚದೇವತೆಗಳನ್ನು ಆರಿಸಿಕೊಂಡು ಪಂಚಾಯತನ ಪೂಜಾಪದ್ಧತಿಯನ್ನು ಆಚರಣೆಗೆ ತಂದರು. ಶಿವ, ವಿಷ್ಣು ಗಣಪತಿ, ಸೂರ್ಯ, ಅಂಬಿಕಾ (ಪಾರ್ವತಿ, ಶಕ್ತಿ) – ಇವೇ ಪಂಚದೇವತೆಗಳು. ಇವರೆಲ್ಲರೂ ಒಬ್ಬ ಪರಮಾತ್ಮನ ವಿವಿಧ ಸ್ವರೂಪಗಳು. ಯಾರನ್ನು ಪೂಜಿಸಿದರೂ ಜಗದೀಶ್ವರನೊಬ್ಬನಿಗೇ ಸಲ್ಲುವುದು. ಇವನು ಅಧಿಕ. ಇವನು ಕೀಳು ಎಂಬ ಭೇದವು ಬೇಡವೆಂದು ಉಪದೇಶಿಸಿದರು.

ಆಚಾರ್ಯರ ಸ್ತೋತ್ರಗ್ರಂಥಗಳಲ್ಲಿ ಎಲ್ಲ ದೇವತೆಗಳ ಸ್ತುತಿಯೂ ಇದೆ. ದುರ್ಗಾ, ಲಕ್ಷ್ಮೀ, ಶಾರದಾ ಸ್ತುತಿಗಳೂ ಇವೆ. ವಿಷ್ಣುವಿನ ದಶಾವತಾರಗಳನ್ನು ಸ್ತುತಿಸಿದ್ದಾರೆ. ಶಿವಾನಂದ ಲಹರಿಯೂ ಅವರದೇ. ದೇವೀ ಸ್ತೋತ್ರವಾದ ಸೌಂದರ್ಯಲಹರಿಯೂ ಅವರದೇ. ಬುದ್ಧನನ್ನೂ ಸ್ತುತಿಸಿದ್ದಾರೆ. ಸರ್ವವೂ ಬ್ರಹ್ಮವೆಂದೂ ಸರ್ವರೂ ಪರಮಾತ್ಮಸ್ವರೂಪರೆಂದೂ ನಿರ್ಣಯಿಸಿದ ತತ್ತ್ವಜ್ಞಾನಿಗೆ ಭೇದಬುದ್ಧಿ ಎಲ್ಲಿಂದ ಬಂದೀತು?

ಆಚಾರ್ಯರು ಯಾವ ಹೊಸ ಮತವನ್ನೂ ಸ್ಥಾಪಿಸಲಿಲ್ಲ. ಈ ರಾಷ್ಟ್ರದ ಪ್ರಾಚೀನ ವೈದಿಕ ಸಿದ್ಧಾಂತವನ್ನು ಎತ್ತಿ ಹಿಡಿದರು. ಸರ್ವವರ್ಣದವರಿಗೂ ಸಂಬಂಧಿಸಿದ ಸಿದ್ಧಾಂತವಿದು. ಮೊದಲಿಂದಲೂ ಇದ್ದ ಸಮಾಜವನ್ನೊಡೆದು 'ಶಾಂಕರರು' ಎಂಬ ಇನ್ನೊಂದು ಗುಂಪನ್ನು ಇವರು ಸ್ಥಾಪಿಸಲಿಲ್ಲ. ಅದ್ವೈತಿಗಳಲ್ಲಿ ಹೊಸದೀಕ್ಷೆ ಇಲ್ಲ. ನೂತನ ವೇಷಭೂಷಣಗಳಿಲ್ಲ. ಅದ್ವೈತವು ಒಂದು ದರ್ಶನವೇ ಹೊರತು ಒಂದು ಮತವಲ್ಲ. ಮತಾಂತರೀಕರಣದ ಪ್ರಶ್ನೆಯೇ ಇದರಲ್ಲಿ ಹುಟ್ಟುವುದಿಲ್ಲ. ''ನಿಮ್ಮ ಧರ್ಮಶಾಸ್ತ್ರವು ಬೋಧಿಸಿದಂತೆ ನೀವು ಆಚರಿಸಿರಿ. ನಿಮಗೆ ಇಷ್ಟವಾದ ದೇವತೆಯನ್ನು ಪೂಜಿಸಿರಿ. ಎಲ್ಲವೂ ಶ್ರೇಯೋಮಾರ್ಗಗಳೇ. ಪರಮಸತ್ಯವು ಯಾವುದೆಂಬ ತತ್ತ್ವವನ್ನು ಮಾತ್ರ ನಾನು ತಿಳಿಸಿದ್ದೇನೆ. ಯಾವ ಜಾತಿಯವರಾದರೂ ಈ ತತ್ತ್ವವನ್ನರಿತು ಶ್ರದ್ಧೆಯಿಂದ ಹೃದಯದಲ್ಲಿ ಧರಿಸಬಹುದು. ತತ್ತ್ವಜ್ಞಾನಕ್ಕೂ ಬಾಹ್ಯವಾದ ಮತಾಚಾರಗಳಿಗೂ ಯಾವ ವಿರೋಧವೂ ಇಲ್ಲ'' ಎಂಬುದು ಶ್ರೀ ಶಂಕರಾಚಾರ್ಯರ ಉಪದೇಶದ ಸಾರ.

ವಿಶ್ವಕುಟುಂಬ

ಅಣ್ಣತಮ್ಮಂದಿರಲ್ಲಿ ತಂದೆಯ ಒಂದೇ ರಕ್ತವು ಹರಿಯುವುದರಿಂದ ಅವರು ಜಗಳವಾಡದೆ ಭ್ರಾತೃವಾತ್ಸಲ್ಯದಿಂದ ಬಾಳಬೇಕೆಂಬುದು ಯುಕ್ತವಾದ ಉಪದೇಶ. ಆಚಾರ್ಯರು ಇನ್ನೂ ಮುಂದೆ ಹೋಗಿ ''ಈ ಪೃಥ್ವಿಯಲ್ಲಿರುವ ಸಕಲರೂ ಅಣ್ಣತಮ್ಮಂದಿರೇ. ನೀವೆಲ್ಲರೂ

ಪರಮಾತ್ಮನ ಮಕ್ಕಳೇ. ಪರಮಾತ್ಮನ ಪ್ರತಿಬಿಂಬಗಳೇ. ವಾಸ್ತವದಲ್ಲಿ ಪರಮಾತ್ಮಸ್ವರೂಪರೇ ಆಗಿದ್ದೀರಿ. ಎಲ್ಲರಿಗೂ ತಾನು – ತನ್ನ ಆತ್ಮನು ತನಗೆ ಪ್ರಿಯತಮನಾಗಿರುತ್ತಾನೆ. ಎಲ್ಲರೂ ನಿಮ್ಮ ಆತ್ಮನೇ ಆಗಿರುವಾಗ ಜಗಳವೇತಕ್ಕೆ? ತಾನೇ ತನ್ನ ಕೈ ಕಾಲುಗಳೊಡನೆ ಕಲಹವಾಡಿದಂತೆ ಇದು ಹಾಸ್ಯಾಸ್ಪದ'' ಎಂದು ಬೋಧಿಸುತ್ತಾರೆ.

ದ್ವೈತಸಿದ್ಧಾಂತದಲ್ಲಿ ದೇವರಿಗೂ ಮಾನವನಿಗೂ ಇರುವುದು ಸ್ವಾಮಿಭೃತ್ಯಸಂಬಂಧ. ತಂದೆ ಮಕ್ಕಳ ಸಂಬಂಧವೂ ಅಲ್ಲ. ಅದ್ವೈತಸಿದ್ಧಾಂತದಲ್ಲಾದರೋ ನಾನು, ನೀನು, ಅವನು, ಅವಳು, ಅದು ಎಂಬ ಭೇದವೇ ಇಲ್ಲ; ಶ್ರೀ ಶಂಕರರ ಬೋಧನೆಯನ್ನು ಜನರು ಸರಿಯಾಗಿ ಅರ್ಥ ಮಾಡಿಕೊಂಡರೆ ಯಾವ ಕಲಹಕ್ಕೂ ನಿಮಿತ್ತವೇ ಇರುವುದಿಲ್ಲ. ವಿಶ್ವವೇ ನನ್ನ ಕುಟುಂಬವೆಂಬ ಭಾವವು ದೃಢವಾಗುತ್ತದೆ. 'ಯತ್ರ ವಿಶ್ವಂ ಭವತ್ಯೇಕ ನೀಡಮ್' (ನಾರಾಯಣೋಪನಿಷತ್ – 3) ಎಂಬ ವಾಣಿಯು ಸತ್ಯವಾಗಿ ವಿಶ್ವವೇ ನಮ್ಮ ಒಂದು ಮನೆಯಾಗಿ ಬಿಡುತ್ತದೆ.

ವೈದಿಕ ಸಿದ್ಧಾಂತದ ಪುನರುಜ್ಜೀವನ

ಮಾನವಕುಲದ ಶ್ರೇಯಸ್ಸಿಗಾಗಿ ಆವಿರ್ಭವಿಸಿದ ವೇದಗಳಿಗೆ ಭಾರತವು ತವರುಮನೆ. ಅನಾದಿಕಾಲದಿಂದ ಈ ರಾಷ್ಟ್ರದಲ್ಲಿ ಪ್ರಚಾರವಾಗಿದ್ದ ವೈದಿಕ ಸಿದ್ಧಾಂತಕ್ಕೆ ಹಲವಾರು ಕಾರಣಗಳಿಂದ ಕ್ಷೀಣ ಸ್ಥಿತಿಯು ಪ್ರಾಪ್ತವಾದಾಗ ಅದಕ್ಕೆ ಪುನಶ್ಚೈತನ್ಯವನ್ನು ನೀಡುವುದಕ್ಕಾಗಿ ಕುಮಾರಿಲ ಭಟ್ಟರೇ ಮೊದಲಾದ ವಿದ್ವಾಂಸರು ಪ್ರಯತ್ನಿಸಿದರು. ಅವರ ಪ್ರಯತ್ನ ವೇನಿದ್ದರೂ ವೇದಪ್ರಾಮಾಣ್ಯ, ಕರ್ಮಕಾಂಡದ ಪುನರುಜ್ಜೀವನ – ಇವುಗಳಿಗೆ ಮೀಸಲಾಗಿತ್ತು. ಜ್ಞಾನಕಾಂಡದ ಸಮ್ಯಗ್‌ದರ್ಶನದ ಕಡೆಗೆ ಅವರು ಗಮನವನ್ನು ನೀಡಲಿಲ್ಲ. ಅಲ್ಲದೆ ಅವರ ಪಾಂಡಿತ್ಯವು ಪಂಡಿತರ ವಾದಗೋಷ್ಠಿಗೆ ಸೀಮಿತವಾಗಿತ್ತು. ಅವರ ಪ್ರಚಾರವು ಜನಸಾಮಾನ್ಯರನ್ನು ಮುಟ್ಟಲಿಲ್ಲ. ಅಖಂಡ ಭಾರತದ ವ್ಯಾಪ್ತಿಯನ್ನೂ ಗಳಿಸಿಕೊಳ್ಳಲಿಲ್ಲ.

ಮಾನವಹಿತಕ್ಕಾಗಿ ವೇದಬೋಧಿತವಾದವು ಮೂರು–ಕರ್ಮ, ಉಪಾಸನೆ, ಆತ್ಮಜ್ಞಾನ. ಈ ಮೂರನ್ನೂ ಅಧಿಕಾರಾನುರೋಧವಾಗಿ ಸಮಸ್ತ ಭಾರತೀಯರಿಗೂ ತಿಳಿಸಿಕೊಟ್ಟರೆ ಮಾತ್ರ ವೈದಿಕಧರ್ಮವು ಈ ರಾಷ್ಟ್ರದಲ್ಲಿ ಪ್ರತಿಷ್ಠಿತವಾಗುವುದೆಂದು ಶ್ರೀ ಶಂಕರಾಚಾರ್ಯರು ನಿಶ್ಚಯಿಸಿದರು. ಅದರಂತೆ ವಿಜಯಯಾತ್ರೆಯನ್ನು ಕೈಗೊಂಡು ಈ ರಾಷ್ಟ್ರದ ನಾಲ್ಕು ಎಲ್ಲೆಗಳವರೆಗೂ ಸಂಚರಿಸಿ, ವೇದವೃಕ್ಷವು ಶಾಖೋಪಶಾಖೆಗಳಾಗಿ ಚಿಗುರುವಂತೆ ನವಚೈತನ್ಯವನ್ನು ಅದರಲ್ಲಿ ತುಂಬಿದರು. ಅವರು ಹೋದ ಕಡೆಯಲ್ಲಿ ಶ್ರೋತೃವೃಂದವೇ ಬಂದು ನೆರೆಯುತ್ತಿತ್ತು. ಇದರಿಂದ ಸಾಮಾನ್ಯಜನರಿಗೂ ವೇದ ಸಂದೇಶವು ಮುಟ್ಟಿ ವೇದವೇ ಪ್ರಮಾಣ ಗ್ರಂಥವೆಂಬ ಬುದ್ಧಿಯು ದೃಢವಾಯಿತು.

ಆಚಾರ್ಯರಿಗೆ ಅಷ್ಟರಿಂದ ತೃಪ್ತಿಯಾಗಲಿಲ್ಲ. ಈ ವೇದವೃಕ್ಷದ ಪಾತಿಗೆ ನೀರೆರೆದು ಒಣಗದಂತೆ ನೋಡಿಕೊಳ್ಳುವ ಒಂದು ಶಾಶ್ವತ ವ್ಯವಸ್ಥೆ ಇರಬೇಕೆಂದು ಅವರ ದೂರದೃಷ್ಟಿಗೆ ಹೊಳೆಯಿತು. ಅದರ ಫಲವಾಗಿ ಮಠಗಳ ಸ್ಥಾಪನೆಯಾಯಿತು. ಭಾರತವು ವಿಶಾಲವಾದ ರಾಷ್ಟ್ರವಾದ್ದರಿಂದ ಎಲ್ಲೆಡೆಯೂ ವೈದಿಕಧರ್ಮಪ್ರವಾಹವು ಹರಿಯುತ್ತಿರಲೆಂದು ಧರ್ಮರಕ್ಷಾಕವಚಗಳಂತೆ ಭಾರತದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದರು. ಪೂರ್ವದಿಕ್ಕಿಗೆ ಜಗನ್ನಾಥ(ಪುರೀ), ದಕ್ಷಿಣದಲ್ಲಿ ಶೃಂಗೇರಿ, ಪಶ್ಚಿಮದಲ್ಲಿ ದ್ವಾರಕಾ, ಉತ್ತರದಲ್ಲಿ ಬದರೀನಾಥ–ಎಂಬ ನಾಲ್ಕು ಮಠಗಳನ್ನು ಸ್ಥಾಪಿಸಿದರು. ಆಚಾರ್ಯರ ಪ್ರಧಾನಶಿಷ್ಯರಾದ ಹಸ್ತಾಮಲಕ, ಸುರೇಶ್ವರ, ಪದ್ಮಪಾದ, ತೋಟಕಾಚಾರ್ಯರು ಕ್ರಮವಾಗಿ ಈ ನಾಲ್ಕು ಮಠಗಳಿಗೆ ಅಧ್ಯಕ್ಷರಾದರು. ಆಚಾರ್ಯರ ಆದರ್ಶವನ್ನೂ ಆದೇಶವನ್ನೂ ಮನ್ನಿಸಿ ಅವರ ಶಿಷ್ಯರು ದೇಶದ ಇತರ ಸ್ಥಳಗಳಲ್ಲಿಯೂ ಹಲವಾರು ಮಠಗಳನ್ನು ಸ್ಥಾಪಿಸಿದರು.

ರಾಷ್ಟ್ರೈಕತಾ ದೃಢೀಕರಣ

ನಮ್ಮ ಭಾರತದೇಶದಲ್ಲಿ ನೂರಾರು ಭಾಷೆಗಳನ್ನಾಡುವ ಪ್ರಜೆಗಳಿದ್ದರೂ ನೂರಾರು ಜಾತಿಭೇದಗಳಿದ್ದರೂ ''ಭಾರತವು ಒಂದು ರಾಷ್ಟ್ರ' ಎಂಬ ಏಕತಾಭಾವನೆಯು ಅನಾದಿಕಾಲ ದಿಂದಲೂ ಇದೆ. ಇದಕ್ಕೆ ನಿಮಿತ್ತವೇನು? ರಾಜಕೀಯವಾದ ಏಕತೆಯಂತೂ ಅಲ್ಲ. ಈ ದೇಶ ದಲ್ಲಿ ಬೇರೆ ಬೇರೆ ಸ್ವತಂತ್ರರಾಜರು ಹಿಂದಿನಿಂದಲೂ ಇದ್ದರು. ಅವರಲ್ಲಿ ಪರಸ್ಪರ ಯುದ್ಧಗಳೂ ನಡೆಯುತ್ತಿದ್ದವು. ಕುರು, ಕೇಕಯ, ಮಗಧ–ಎಂದು ರಾಜ್ಯಗಳ ಹೆಸರುಗಳು ಬೇರೆಯಾದರೂ ನಾವೆಲ್ಲರೂ ಭಾರತೀಯರು ಎಂಬ ವಿಶ್ವಾಸವು ಉಳಿದುಕೊಂಡೇ ಇತ್ತು. ಏಕೆಂದರೆ, ಆಸೇತು ಹಿಮಾಚಲಪರ್ಯಂತವಾಗಿ ವ್ಯಾಪಿಸಿಕೊಂಡಿರುವ ಒಂದೇ ಸಂಸ್ಕೃತಿಯು ಏಕರಾಷ್ಟ್ರತಾನಿಬಂಧನ ವಾಗಿದೆ. ವೇದಗಳಿಂದಲೂ ಸಂಸ್ಕೃತ ಭಾಷಾಸಾಹಿತ್ಯದಿಂದಲೂ ನಿರ್ಮಿತವಾದ ಸಂಸ್ಕೃತಿಯೇ ಅದು. ಶಿವ, ವಿಷ್ಣು ಗಣಪತಿ–ಮುಂತಾದ ದೇವತೆಗಳ ಆರಾಧನೆ, ವಿಗ್ರಹಪೂಜೆ, ಪುನರ್ಜನ್ಮ ವಿಶ್ವಾಸ, ರಾಮೇಶ್ವರ ಕಾಶೀ ಮೊದಲಾದ ತೀರ್ಥಕ್ಷೇತ್ರಗಳ ಯಾತ್ರೆ, ವಿವಾಹಾದಿ ಸಂಸ್ಕಾರಗಳು, ರಾಮಾಯಣ ಮಹಾಭಾರತ ಮೊದಲಾದವು ಪುಣ್ಯಗ್ರಂಥಗಳೆಂಬ ವಿಶ್ವಾಸ–ಇವೆಲ್ಲವೂ ಈ ಸಂಸ್ಕೃತಿಯ ವಿವಿಧ ಮುಖಗಳು. ಪುಷ್ಪಮಾಲೆಯಲ್ಲಿ ನೂಲಿನಂತೆ ಭಾರತೀಯರನ್ನು ಒಟ್ಟುಗೂಡಿಸಿದ ಏಕಸೂತ್ರವೇ ಸಂಸ್ಕೃತ ಭಾಷೆ. ಬೌದ್ಧಜೈನಾದಿ ಸಾಹಿತ್ಯಗಳೂ ಸಂಸ್ಕೃತ ಭಾಷೆಯಲ್ಲಿ ನಿರ್ಮಿತವಾದವು. ಭಾರತವು ಏಕರಾಷ್ಟ್ರವೆಂಬ ಏಕತಾಭಾವನೆಗೆ ಈ ಸಂಸ್ಕೃತ ಸಾಹಿತ್ಯದಿಂದ ನಿರ್ಮಿತವಾಗಿರುವ ವಿಶಾಲಸಂಸ್ಕೃತಿಯೇ ನಿಜವಾದ ಕಾರಣವಾಗಿರುತ್ತದೆ. ಈ ವೈದಿಕ ಸಂಸ್ಕೃತಿಯನ್ನು ರಾಷ್ಟ್ರದ ತುಂಬ ಪ್ರಚಾರ ಮಾಡಿ ನಾನಾ ಸಂಸ್ಕೃತ ಗ್ರಂಥಗಳನ್ನು ರಚಿಸಿ ಅವುಗಳ ಅಧ್ಯಯನವನ್ನು ಪ್ರೋತ್ಸಾಹಿಸಿ ಈ ರಾಷ್ಟ್ರದ ಏಕತೆಯನ್ನೂ ಸಮಗ್ರತೆಯನ್ನೂ ದೃಢಗೊಳಿಸಿದವರು ಶ್ರೀಶಂಕರಾಚಾರ್ಯರು.

ಉಪದೇಶದ ವ್ಯಾಪ್ತಿ

ಲೋಕದಲ್ಲಿ ಸೌಖ್ಯ, ಶಾಂತಿ, ಸಂತೃಪ್ತಿಗಳು ನೆಲೆಸಬೇಕಾದರೆ ಧರ್ಮದ ಪರಿಪಾಲನೆ ಅತ್ಯಾವಶ್ಯಕವಾದದ್ದು. ಧರ್ಮಕ್ಕೆ ಅಧ್ಯಾತ್ಮದ ಬಲವಿಲ್ಲದಿದ್ದರೆ ಅದು ನಿಃಸತ್ತ್ವವಾಗುತ್ತದೆ. ಆಚಾರ್ಯರು ಅಧಿಕಾರಾನುರೋಧವಾಗಿ ಪ್ರವೃತ್ತಿನಿವೃತ್ತಿಧರ್ಮಗಳೆರಡನ್ನೂ ಎತ್ತಿಹಿಡಿದಿದ್ದಾರೆ. ಪ್ರವೃತ್ತಿಧರ್ಮವು ಸಾರ್ವತ್ರಿಕವಾದದ್ದು. ನಿವೃತ್ತಿಧರ್ಮವು ವೈಯಕ್ತಿಕವಾದದ್ದು. ಈ ನಿವೃತ್ತಿ ಧರ್ಮವೂ ಎಲ್ಲರಿಗೂ ಅಲ್ಲ "ಬ್ರಹ್ಮಕ್ಷತ್ರೇ ಹಿ ಸಮ್ಯಕ್‌ಪರಿಪಾಲಿತೇ ಜಗತ್ ಪರಿಪಾಲಯಿತುಮಲಂ" ಎಂಬ ಅವರ ಧೀರವಾಣಿಯನ್ನು ಗಮನಿಸಬೇಕು. "ಬ್ರಾಹ್ಮಣ ಧರ್ಮ, ಕ್ಷತ್ರಿಯ ಧರ್ಮ ಇವೆರಡನ್ನು ಸರಿಯಾಗಿ ಪರಿಪಾಲಿಸುತ್ತಿದ್ದರೆ, ಅವು ಜಗತ್ತನ್ನೇ ಸಂರಕ್ಷಿಸಬಲ್ಲವು" ಎಂದು ಈ ವಾಕ್ಯದ ಅಭಿಪ್ರಾಯ. ಆಚಾರ್ಯರು ಹೇಳಿದುದು ಜಗತ್‌ಪರಿಪಾಲನೆಯ ವಿಷಯ. ಒಂದು ಗುಂಪಿನ ಪರಿಪಾಲನೆಯಲ್ಲ. ಆಚಾರ್ಯರ ದೃಷ್ಟಿ ಎಷ್ಟು ವಿಶಾಲವಾಗಿತ್ತೆಂಬುದಕ್ಕೆ ಇದು ಸಾಕ್ಷಿ.

ಭಗವತ್ಪಾದರ ಕಾಲದಲ್ಲಿ ಸಂಸ್ಕೃತ ಭಾಷೆಯು ರಾಷ್ಟ್ರವ್ಯಾಪಿಯಾಗಿದ್ದು ಎಲ್ಲ ಪ್ರಾಂತದ ಜನರಿಗೂ ಅರ್ಥವಾಗುತ್ತಿತ್ತು. ಆದ್ದರಿಂದಲೇ ಅವರು ತಮ್ಮ ಗ್ರಂಥಗಳನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದರು. ಆದ್ದರಿಂದಲೇ ಅವರಿಗೆ ರಾಷ್ಟ್ರದ ಎಲ್ಲೆಡೆಯೂ ಸಂಚರಿಸಿ ಧರ್ಮೋಪದೇಶ ಮಾಡಲು ಸಾಧ್ಯವಾಯಿತು. ಅದ್ವೈತದರ್ಶನವು ರಾಷ್ಟ್ರದ ಮೂಲೆ ಮೂಲೆಯಲ್ಲಿಯೂ ಪುನರುಜ್ಜೀವನವನ್ನು ಪಡೆದು ವಿಚಾರಶೀಲರ ಮೇಲೆ ಮಹತ್ತರವಾದ ಪ್ರಭಾವವನ್ನು ಬೀರಿತು. ಸಿಖ್‌ಮತವನ್ನು ಸ್ಥಾಪಿಸಿದ ಮಹಾತ್ಮ ನಾನಕನ ಉಪದೇಶವಿದು

ಈಶ–ಜೀವಮೇಂ ಭೇದ ನ ಜಾನೋ
ಸಾಧು, ಚೋರ ಸಬ ಬ್ರಹ್ಮ ಪಹಚಾನೋ ।
ವಾಸುದೇವ ಬಿನ ಅವರ ನ ಕೋ ಊ
ನಾನಕ್ ಓಂ ಸೋಽಹಂ ಆತಮ ಸೋಽಹಮ್ ॥

"ಜೀವಾತ್ಮ ಪರಮಾತ್ಮರಲ್ಲಿ ಭೇದವಿದೆಯೆಂದು ತಿಳಿಯಬೇಡ. ಸಜ್ಜನ, ಕಳ್ಳ ಎಲ್ಲವೂ ಬ್ರಹ್ಮವೇ ಎಂದು ಅರಿತುಕೊ. ವಾಸುದೇವನನ್ನು ಬಿಟ್ಟು ಇನ್ನೊಂದು ವಸ್ತುವೇ ಇಲ್ಲ. ಓಂ ಎಂಬುದೇ ಸತ್ಯ. ಸೋಽಹಂ ಸೋಽಹಂ ಅವನೇ ನಾನು ಅವನೇ ನಾನು!"

ಕ್ರಿ.ಶ. 636ರ ಸಮಯದಲ್ಲಿ ಮುಸ್ಲಿಂ ವ್ಯಾಪಾರಿಗಳು ಮೊದಲನೆಯ ಬಾರಿಗೆ ಭಾರತದೇಶದ ಕೇರಳ ಪ್ರಾಂತದಲ್ಲಿ ಕಾಲಿಟ್ಟರು. ಅವರು ಕೇವಲ ವ್ಯಾಪಾರದ ಉದ್ದೇಶದಿಂದ ಬಂದ ಪ್ರಯುಕ್ತ ಶ್ರೀಶಂಕರರು ಅವರ ಮತವಿಚಾರವನ್ನು ತಮ್ಮ ಗ್ರಂಥಗಳಲ್ಲಿ ಪ್ರಸ್ತಾವಿಸಲಿಲ್ಲ. ಭಾರತಕ್ಕೆ ಬಂದ ಅರಬ್ ಚಿಂತಕರಿಂದ ಅರೇಬಿಯಾದಲ್ಲಿ ಪ್ರವೇಶಿಸಿದ ಅದ್ವೈತವೇದಾಂತವು

'ಸೂಫಿ' ಎಂಬ ಮುಸ್ಲಿಂ ಪಂಥದವರ ಮೇಲೆ ವಿಶೇಷ ಪರಿಣಾಮವನ್ನು ಬೀರಿತು. ವಿಖ್ಯಾತನಾದ ಒಬ್ಬ ಸೂಫಿಯು ಅನ –ಅಲ್–ಹಕ್ (ಅಹಂ ಬ್ರಹ್ಮಾಸ್ಮಿ) ಎಂದು ಘೋಷಿಸಿದ್ದಾನೆ. ಕೇವಲ ಸಮಾಧಿಸ್ಥಿತಿಯನ್ನು 'ಫನಾ' ಎಂದು ಕರೆದಿದ್ದಾನೆ. ಅದ್ವೈತಕ್ಕೆ 'ಟವ್ ಹೀದ್' ಎಂಬುದು ಪರ್ಯಾಯಪದ.

ಅಪಶೂದ್ರಾಧಿಕರಣ

ಶ್ರೀ ಶಂಕರಾಚಾರ್ಯರು ಶೂದ್ರನಿಗೆ ವೇದಾಧಿಕಾರವಿಲ್ಲವೆಂದು ಬರೆದಿದ್ದಾರೆ. ಇದು ಜಗದ್ಗುರುವಿನಲ್ಲಿರಬೇಕಾದ ಸಮದೃಷ್ಟಿಯೆ? ಇದು ಪಕ್ಷಪಾತವಲ್ಲವೆ? ಎಂದು ಕೆಲವರು ಆಕ್ಷೇಪಿಸುತ್ತಾರೆ. ಇದಕ್ಕೆ ಉತ್ತರವನ್ನು ಸಾವಧಾನವಾಗಿ ಆಲಿಸಬೇಕು. ಚಾತುರ್ವರ್ಣ್ಯ ವ್ಯವಸ್ಥೆಯನ್ನು ಆಚಾರ್ಯರು ಸ್ಥಾಪಿಸಲಿಲ್ಲ. ಈ ದೇಶದಲ್ಲಿ ವೇದಸಂಮತವಾದ ಅನಾದಿ ಪದ್ಧತಿ ಇದು. ಸಕಲಧರ್ಮಶಾಸ್ತ್ರಗಳೂ ಪುರಾಣಗಳೂ ಈ ಪದ್ಧತಿಯನ್ನು ಪುರಸ್ಕರಿಸಿವೆ. ಆ ಕಾಲದ ಸಮಾಜವು ಇದನ್ನು ನಿಷ್ಠೆಯಿಂದ ಅಂಗೀಕರಿಸಿತ್ತು. ಸಮಸ್ತರಾಜರೂ ಈ ವ್ಯವಸ್ಥೆಯನ್ನು ಪಾಲಿಸಿಕೊಂಡು ಬಂದಿದ್ದಾರೆ. ಶಾರೀರಕಮೀಮಾಂಸೆಯ ಅಪಶೂದ್ರಾಧಿ ಕರಣದಲ್ಲಿ (1ನೆಯ ಅಧ್ಯಾಯ 34–38ನೆಯ ಸೂತ್ರಗಳು) ಸೂತ್ರಕಾರರಾದ ಬಾದರಾಯಣರೇ ಈ ವಿಚಾರವನ್ನೆತ್ತಿ ಶೂದ್ರರಿಗೆ ವೇದಾಧಿಕಾರವಿಲ್ಲವೆಂದು ತಿಳಿಸಿದ್ದಾರೆ. ಸೂತ್ರಾರ್ಥವನ್ನು ಆಚಾರ್ಯರು ಬರೆದಿದ್ದಾರೆ. ಶ್ರೀ ಶಂಕರಾಚಾರ್ಯರು ಮಾತ್ರವಲ್ಲ, ಶ್ರೀ ರಾಮಾನುಜಾಚಾರ್ಯರೂ ಶ್ರೀ ಮಧ್ವಾಚಾರ್ಯರೂ ಇತರ ವ್ಯಾಖ್ಯಾನಕಾರರೂ ಸರ್ವರೂ ಸೂತ್ರಾರ್ಥವನ್ನು ವಿವರಿಸಿ ಶೂದ್ರರಿಗೆ ವೇದಾಧಿಕಾರವಿಲ್ಲವೆಂದೇ ಬರೆದಿದ್ದಾರೆ: ಸೂತ್ರಕ್ಕೆ ವಿರುದ್ಧವಾದ ಅರ್ಥವನ್ನು ಇವರು ಬರೆಯಬೇಕಾಗಿತ್ತೆ? ಹೀಗಿರುವಾಗ ಆಚಾರ್ಯರ ಮೇಲೆ ಈ ಆಕ್ಷೇಪವನ್ನೆತ್ತಲು ಕಾರಣವೇನು?

ಉಪನಯನವಿಲ್ಲದ್ದರಿಂದ ಶೂದ್ರನಿಗೆ ವೇದಾಧಿಕಾರವಿಲ್ಲ. ಕ್ಷತ್ರಿಯರಿಗೂ ವೈಶ್ಯರಿಗೂ ಅಧಿಕಾರವಿದ್ದೇ ಇದೆ. ಅದೇ ಪ್ರಕರಣದಲ್ಲಿ ಆಚಾರ್ಯರು ''ಶೂದ್ರನಿಗೆ ವೇದಾಧಿಕಾರವಿಲ್ಲವೇ ಹೊರತು ಇತಿಹಾಸ ಪುರಾಣಾದಿಗ್ರಂಥಗಳಿಂದ ಜ್ಞಾನಿಯಾಗಿ ಶ್ರೇಯಸ್ಸನ್ನು ಪಡೆಯಬಹುದು. ಸಮಸ್ತಮಾನವರಿಗೂ ವಿದ್ಯೆಯಲ್ಲಿ ಅಧಿಕಾರ ಉಂಟು'' ಎಂದು ತಿಳಿಸಿದ್ದಾರೆ. ''ಸರ್ವೇಷಾಂ ಚಾಧಿಕಾರೋ ವಿದ್ಯಾಯಾಂ – ಸಮಸ್ತಜಾತಿಯವರಿಗೂ ವಿದ್ಯೆಯಲ್ಲಿ ಅಧಿಕಾರವಿದೆ'' ಎಂದು ಘೋಷಿಸಿದವರು ಭಗವತ್ಪಾದರು (ತೈತ್ತಿ. ಭಾಷ್ಯ–ಶಿಕ್ಷಾ–11). ಭಗವದ್ಗೀತೆ, ವಿವೇಕಚೂಡಾಮಣಿ – ಮುಂತಾದ ಆಧ್ಯಾತ್ಮಿಕಗ್ರಂಥಗಳಿಂದ ಇತರರೂ ಜ್ಞಾನಾರ್ಜನೆ ಮಾಡಿ ವಿದ್ಯಾವಂತರಾಗಲು ಯಾರು ಅಡ್ಡಿಪಡಿಸಿದ್ದಾರೆ? ವಿದ್ಯೆಯ ಹಂಬಲ ಇಲ್ಲದವರು ವಿದ್ಯಾವಂತರಾಗಲು ಎಂದಿಗೂ ಸಾಧ್ಯವಾಗದು. ಸಂಸ್ಕೃತ ಶಾಲೆಗಳಲ್ಲಿ ಈಗ ಸಂಸ್ಕೃತ ಭಾಷೆಯನ್ನೂ ನಾನಾ ಶಾಸ್ತ್ರಗಳನ್ನೂ ಸರ್ವರಿಗೂ ಹೇಳಿಕೊಡುತ್ತಿದ್ದಾರೆ. ಆಕ್ಷೇಪ ಮಾಡುವ

ಈ ಜನರು ಅಲ್ಲಿ ಹೋಗಿ ಏಕೆ ಕಲಿಯುವುದಿಲ್ಲ? ಇವರಿಗೆ ಬೇಕಾದದ್ದು ಹಣ, ಪ್ರಾಚೀನ ವಿದ್ಯೆಯಲ್ಲ ಎಂಬುದೇ ಸತ್ಯಸಂಗತಿ.

ಶ್ರೀ ಶಂಕರಾಚಾರ್ಯರು ಅದ್ಭುತವ್ಯಕ್ತಿತ್ವವಿದ್ದ ಒಬ್ಬ ಮಹಾಪುರುಷರಾಗಿದ್ದರು. ಅಗಾಧವಾದ ಪಾಂಡಿತ್ಯ, ದೂರದರ್ಶಿತ್ವ ಮತ್ತು ಅದಮ್ಯವಾದ ಉತ್ಸಾಹ ಶಕ್ತಿಗಳಿಗೆ ಅವರು ನೆಲೆಯಾಗಿದ್ದರು. ಆ ಕಾಲದಲ್ಲಿ ಪ್ರಾಪ್ತವಾದ ವೈದಿಕ ಸಂಸ್ಕೃತಿಯ ಹ್ರಾಸ, ರಾಜಕೀಯದಿಂದ ತುಂಡು ತುಂಡಾದ ಭಾರತರಾಷ್ಟ್ರ – ಇವೆರಡು ಸಂಗತಿಗಳು ಅವರ ಸೂಕ್ಷ್ಮ ದೃಷ್ಟಿಗೆ ಗೋಚರವಾಗಿ ಮನೋವೇಧೆಯನ್ನುಂಟು ಮಾಡಿದವು. ಇವೆರಡು ದೋಷಗಳನ್ನು ಸರಿಪಡಿಸಿದ ಹೊರತು ಸಮಾಜದ ಅಭ್ಯುದಯವು ಸಾಧಿತವಾಗುವುದಿಲ್ಲವೆಂದು ಅವರು ನಿಶ್ಚಯಿಸಿದರು. ''ಕ್ಷತ್ರಿಯರ ರಾಜಕೀಯಕ್ಷೇತ್ರವನ್ನು ಪ್ರವೇಶಿಸುವುದು ಸಂನ್ಯಾಸಿಯಿಂದ ಆಗತಕ್ಕದ್ದಲ್ಲ. ಬ್ರಾಹ್ಮಕ್ಷೇತ್ರದ ವೈದಿಕ ಸಂಸ್ಕೃತಿಯು ಈ ರಾಷ್ಟ್ರದ ಏಕತೆಯನ್ನು ಗಟ್ಟಿಯಾಗಿ ಹಿಡಿದಿಡಬಲ್ಲದು. ನಾನಾ ಮತಾಚಾರಗಳಿಂದ ರಾಷ್ಟ್ರವು ಒಡೆದು ಹೋಗುತ್ತಿದೆ. ಯಾವ ಮತವನ್ನೂ ದೂಷಿಸದೆ, ಸಕಲ ಮತಗಳನ್ನು ಅವಿರೋಧವಾಗಿ ಒಂದುಗೂಡಿಸತಕ್ಕದ್ದು ವೈದಿಕ ಸಿದ್ಧಾಂತವೇ'' – ಎಂದು ನಿಶ್ಚಯಿಸಿ ಆಚಾರ್ಯರು ಬದ್ಧಕಂಕಣರಾಗಿ ಭಾರತದ ಆದ್ಯಂತವೂ ಪಾದಯಾತ್ರೆಗಳನ್ನು ನಡೆಸಿ ಈ ದುಷ್ಕರ ಕಾರ್ಯವನ್ನು ಸಾಧಿಸಿ ಕೃತಕೃತ್ಯರಾದರು. ಇತಿಹಾಸದಲ್ಲಿ ಇದಕ್ಕೆ ಇನ್ನೊಂದು ದೃಷ್ಟಾಂತವು ದೊರೆಯದು. ಭಗವತ್ಪಾದರು ಈ ಕಾರ್ಯವನ್ನು ಕೈಗೊಳ್ಳದೆ ಹೋಗಿದ್ದರೆ ವೇದವಾಙ್ಮಯವು ಹೇಳ ಹೆಸರಿಲ್ಲದೆ ನಶಿಸಿ ಹೋಗುತ್ತಿತ್ತು. ರಾಷ್ಟ್ರವು ಎಂದೋ ವಿದೇಶಿಯರ ವಶವಾಗಿ ತುಂಡು ತುಂಡಾಗಿ ಹೋಗುತ್ತಿತ್ತು. ಆಗ ಏಕರಾಷ್ಟ್ರವೆಂಬ ಕಲ್ಪನೆಯೇ ನಶಿಸಿ ಹೋಗಿ ಮತ್ತೆ ಸ್ವಾತಂತ್ರ್ಯವನ್ನು ಗಳಿಸಲು ಸಾಧ್ಯವಾಗುತ್ತಲೇ ಇರಲಿಲ್ಲ. ಈ ವಿಭೂತಿಪುರುಷರನ್ನು ಭಾರತೀಯರು ಕೃತಜ್ಞತೆಯಿಂದ ಸದಾ ಸ್ಮರಿಸುತ್ತಿರಬೇಕು.

ವಾಚಕರಿಗೆ ಪರಿಚಯವಾಗಲೆಂದು ಶ್ರೀ ಭಗವತ್ಪಾದರ ವೇದಸದೃಶವಾದ ಕೆಲವೇ ಸೂಕ್ತಿಗಳನ್ನು ಅನುಬಂಧದಲ್ಲಿ ಉದಾಹರಿಸಿದ್ದೇನೆ. ಅದರಿಂದ ಆಚಾರ್ಯವಾಣಿಯ ಲಲಿತ ಗಾಂಭೀರ್ಯವನ್ನು ಅರಿತುಕೊಳ್ಳಬಹುದು. ಅಲ್ಲದೆ ಸ್ವದೇಶೀಯ ವಿದೇಶೀಯ ವಿದ್ವಾಂಸರೂ ಮೆಚ್ಚಿ ಬರೆದ ಕೆಲವು ಪ್ರಶಂಸಾವಚನಗಳನ್ನೂ ಉಲ್ಲೇಖಿಸಿದ್ದೇನೆ.

ಕೃತಜ್ಞತಾಸಮರ್ಪಣೆ

ಶ್ರೀ ಶಂಕರ ಚರಿತಾಮೃತದ ಈ ಸಂಸ್ಕೃತ ಶ್ಲೋಕಗಳನ್ನು ಶ್ರೀ ಶೃಂಗೇರಿ ಜಗದ್ಗುರು ಪೀಠದಲ್ಲಿ ವಿರಾಜಮಾನರಾದ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ದಿವ್ಯ ಸಾಂನಿಧ್ಯದಲ್ಲಿ ಓದಿ ಹೇಳಿದ್ದೇನೆ. ಪೂಜ್ಯ ಮಹಾಸ್ವಾಮಿಗಳು ಎಲ್ಲ ಶ್ಲೋಕಗಳನ್ನು ಆಸಕ್ತಿಯಿಂದ ಸಾವಧಾನವಾಗಿ ಆಲಿಸಿ ಅಲ್ಲಲ್ಲಿ ಕೆಲವು ತಿದ್ದುಪಡಿಗಳನ್ನು ಸೂಚಿಸಿದರು. ಆ ತಿದ್ದುಪಡಿಗಳನ್ನು

ಸೂಕ್ತರೀತಿಯಲ್ಲಿ ಅಳವಡಿಸಿದ್ದೇನೆ. ಹೀಗೆ ನನ್ನಲ್ಲಿರಿಸಿದ ಕೃಪಾವಾತ್ಸಲ್ಯಗಳಿಂದ ಈ ಗ್ರಂಥವನ್ನು ಪರಿಶೀಲಿಸಿ, ಇದು ಪ್ರಕಟನಾರ್ಹವೆಂದು ಅನುಮತಿಯನ್ನಿತ್ತು ಹರಸಿ ಅನುಗ್ರಹ ಸಂದೇಶವನ್ನಿತ್ತಿದ್ದಾರೆ. ಅವರ ಪವಿತ್ರ ಚರಣಗಳಿಗೆ ಭಕ್ತಿಯಿಂದ ಸಾಷ್ಟಾಂಗ ನಮಸ್ಕಾರಗಳನ್ನು ಅರ್ಪಿಸುತ್ತೇನೆ.

ಅದ್ವೈತ ವಿದ್ಯಾಪ್ರತಿಷ್ಠಾನದ ಮಹಾಪೋಷಕರಾಗಿ ಆಶ್ರಯವನ್ನಿತ್ತಿರುವ ಹೆಬ್ಬೂರು ಶ್ರೀ ಕೋದಂಡಾಶ್ರಮದ ಪೀಠಾಧಿಪತಿಗಳಾದ ಪೂಜ್ಯ ಶ್ರೀ ನಾರಾಯಣಾಶ್ರಮ ಮಹಾಸ್ವಾಮಿಗಳು ಈ ಗ್ರಂಥದ ಪ್ರಕಟನೆಯ ಭಾರವನ್ನು ವಹಿಸಿಕೊಂಡು ಕೃಪೆಯಿಟ್ಟು ಅನುಗ್ರಹಿಸಿದ್ದಾರೆ. ಅವರಿಗೆ ನನ್ನ ಭಕ್ತಿಪೂರ್ವಕ ಸಾಷ್ಟಾಂಗ ನಮಸ್ಕಾರಗಳು ಸಲ್ಲುತ್ತವೆ.

ತೃತೀಯ ಮುದ್ರಣ

ಈ ಗ್ರಂಥದ ದ್ವಿತೀಯ ಮುದ್ರಣದ ಪ್ರತಿಗಳೆಲ್ಲವೂ ಮುಗಿದವು. ಹೆಬ್ಬೂರು ಶ್ರೀಮಠದ ಅದ್ವೈತ ಪ್ರತಿಷ್ಠಾನವು ಇದನ್ನು ಪ್ರಕಟಿಸಿತ್ತು. ಈಗ ಪುನರ್ಮುದ್ರಣದ ವಿಷಯವನ್ನು ಪ್ರಸ್ತಾವಿಸಿದಾಗ ಪ್ರತಿಷ್ಠಾನದ ಗೌರವಾಧ್ಯಕ್ಷರಾಗಿದ್ದ ಹೆಬ್ಬೂರು ಮಠದ ಶ್ರೀಶ್ರೀಗಳವರು "ಅದ್ವೈತ ಪ್ರತಿಷ್ಠಾನವು ಈಗ ವಿಲೀನವಾಗಿದೆ. ನೀವು ಬೇರೆ ಕಡೆ ಮುದ್ರಣದ ವ್ಯವಸ್ಥೆಯೊಂದನ್ನು ಮಾಡಿಕೊಳ್ಳಬಹುದು. ನಮ್ಮಿಂದ ಸಾಧ್ಯವಿಲ್ಲ" ಎಂದು ನನಗೆ ತಿಳಿಸಿದರು.

ಈ ಗ್ರಂಥದ ಸರ್ವಾಧಿಕಾರವೂ (All Rights) ನನ್ನ ವಶದಲ್ಲೇ ಇದ್ದುದರಿಂದ ತೃತೀಯ ಮುದ್ರಣವನ್ನು ಮಾಡಬೇಕೆಂದು ಆಲೋಚಿಸುತ್ತಿದ್ದೆನು. ಈ ಸಮಯದಲ್ಲಿ ರಾಜಾಜಿನಗರದಲ್ಲಿರುವ 'ಉದಯ ಪ್ರಕಾಶನ'ದ ಮಾಲೀಕರೂ ನನ್ನ ಮಿತ್ರರೂ ಆದ ಶ್ರೀ ಮ.ಸು. ಶ್ರೀನಿವಾಸರಾಯರು ತಾವೇ ಈ ಮುದ್ರಣ ಕಾರ್ಯವನ್ನು ವಹಿಸಿಕೊಳ್ಳುವುದಾಗಿ ತಿಳಿಸಿದರು. ನಾನು ಸಂತೋಷದಿಂದ ಒ ್ಗೆಯನ್ನು ನೀಡಿದೆನು.

ಅದರಂತೆ 'ಉದಯ ಪ್ರಕಾಶನ' ಸಂಸ್ಥೆಯು ತೃತೀಯ ಮುದ್ರಣವನ್ನು ಕೈಗೊಂಡಿತು.

ಇದನ್ನು ಪ್ರಕಟಿಸಿದ ಶ್ರೀ ಮ.ಸು. ಶ್ರೀನಿವಾಸರಾಯರಿಗೆ ನನ್ನ ವಂದನೆಗಳನ್ನ ್ಸುತ್ತೇನೆ. ಉತ್ತಮ ರೀತಿಯಲ್ಲಿ ಮುದ್ರಿಸಿಕೊಟ್ಟಿರುವ ಲಕ್ಷ್ಮೀ ಮುದ್ರಣಾಲಯ, ಚಾಮರಾಜಪೇಟೆ, ಬೆಂಗಳೂರು ಇದರ ಮಾಲೀಕರಾದ ಶ್ರೀ ಅಶೋಕಕುಮಾರ್ ಇವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಬೆಂಗಳೂರು
22–1–2007

ವಿದ್ವಾನ್ ಎನ್. ರಂಗನಾಥ ಶರ್ಮಾ

॥ ಶ್ರೀಃ ॥

ಶ್ರೀ ಶಂಕರಚರಿತಾಮೃತಮ್

ಸರ್ವವೇದಾಂತವೇದ್ಯಾಯ ಪ್ರಕಾಶೈಕಸ್ವರೂಪಿಣೇ ।
ಧೃತಶ್ರೀಭಗವತ್ಪಾದಾಕೃತಯೇ ಬ್ರಹ್ಮಣೇ ನಮಃ ॥ 1

ಅಸ್ತಿ ಕೇರಲದೇಶಶ್ರೀಃ ಪೂರ್ಣಾ ನಾಮ ತರಂಗಿಣೀ ।
ಪೂರ್ಣಾ ಪುಣ್ಯಜಲೈ ರಮ್ಯಾ ಪರಿತಃ ಶ್ಯಾಮಲೈರ್ವನೈಃ ॥ 2

ಅನುಪೂರ್ಣಂ ಶುಭೋ ಗ್ರಾಮಃ ಕಾಲಟಿರ್ಧಾಮ ಗೀಷ್ಪತೇಃ ।
ವೇದಶಾಸ್ತ್ರವಿದಾಮಾಸೀತ್ ಭೂಸುರಾಣಾಂ ನಿವಾಸಭೂಃ ॥ 3

ಸೌಮ್ಯಃ ಶಿವಗುರುಸ್ತೇಷು ದ್ವಿಜರಾಜೋ ವ್ಯರಾಜತ ।
ಸುತೋ ವಿದ್ಯಾಧಿರಾಜಸ್ಯ ನಕ್ಷತ್ರೇಷ್ವಿವ ಚಂದ್ರಮಾಃ ॥ 4

ಅರುಂಧತೀವ ಕಲ್ಯಾಣೀ ವಸಿಷ್ಠಸ್ಯ ಮಹಾತ್ಮನಃ ।
ಆರ್ಯಾಂಬಾ ತಸ್ಯ ಪತ್ನ್ಯಾಸೀತ್ ಪತಿವ್ರತಾನುರುಂಧತೀ ॥ 5

ಕನ್ನಡ ಅನುವಾದ

ಸಕಲ ಉಪನಿಷತ್ತುಗಳಲ್ಲಿ ಜ್ಞೇಯನೂ ಕೇವಲ ಪ್ರಕಾಶಸ್ವರೂಪನೂ ಶ್ರೀಶಂಕರ ಭಗವತ್ಪಾದಾಕೃತಿಯನ್ನು ಧರಿಸಿದವನೂ ಆದ ಪರಮಾತ್ಮನಿಗೆ ನಮಸ್ಕಾರ(1). ಕೇರಳದೇಶದ ಲಕ್ಷ್ಮಿಯೆನಿಸಿದ ಪೂರ್ಣಾ ಎಂಬ ನದಿಯು ಪ್ರಸಿದ್ಧವಾಗಿದೆ. ಇದು ಪುಣ್ಯಜಲದಿಂದ ತುಂಬಿಕೊಂಡು ಸುತ್ತಲೂ ಶ್ಯಾಮಲವರ್ಣದ ಕಾಡುಗಳಿಂದ ರಮಣೀಯವಾಗಿದೆ. ಈ ಪೂರ್ಣಾ ನದಿಯ ತೀರದಲ್ಲಿ ಕಾಲಟಿ ಎಂಬ ಶುಭಕರವಾದ ಗ್ರಾಮ ಉಂಟು. ವೇದಗಳಲ್ಲಿಯೂ ಶಾಸ್ತ್ರಗಳಲ್ಲಿಯೂ ನಿಷ್ಣಾತರಾದ ವಿಪ್ರರಿಗೆ ನಿವಾಸ ಸ್ಥಾನವಾದ ಈ ಗ್ರಾಮವು ಬೃಹಸ್ಪತಿಯ ವಾಸಸ್ಥಳವೆನಿಸಿದೆ (2–3). ವಿದ್ಯಾಧಿರಾಜನ ಪುತ್ರನೂ ಸೌಮ್ಯಸ್ವಭಾವದವನೂ ಆದ ಶಿವಗುರುವೆಂಬ ಬ್ರಾಹ್ಮಣೋತ್ತಮನು ಅಲ್ಲಿದ್ದ ಬ್ರಾಹ್ಮಣರ ನಡುವೆ, ನಕ್ಷತ್ರಗಳ ಮಧ್ಯದಲ್ಲಿ ಚಂದ್ರನಂತೆ, ವಿರಾಜಿಸುತ್ತಿದ್ದನು (4) ಮಹಾತ್ಮರಾದ ವಸಿಷ್ಠ ಮಹರ್ಷಿಗಳಿಗೆ ಕಲ್ಯಾಣಗುಣಸಂಪನ್ನೆಯಾದ ಅರುಂಧತೀದೇವಿ ಇದ್ದಂತೆ, ಆ ಶಿವಗುರುವಿಗೆ ಆರ್ಯಾಂಬಾ ಎಂಬ ಪತಿವ್ರತೆಯಾದ ಪತ್ನಿ ಇದ್ದಳು. ಆ ದಂಪತಿಗಳಿಗೆ ಸಂತಾನವಿರಲಿಲ್ಲ. ಹಲವು

1. ದ್ವಿಜರಾಜ = ಚಂದ್ರನೂ ದ್ವಿಜರಿಗೆ ರಾಜನಾಗಿದ್ದಾನೆ.

ಇಷ್ಟಾನವಾಪ್ತೇಃ ಪುಣ್ಯಾನಾಂ ಕರ್ಮಣಾಂ ಚರಣಾದಪಿ ।
ಶಿವಮುದ್ದಿಶ್ಯ ಪುತ್ರಾರ್ಥಂ ತೀವ್ರಂ ತೌ ತಪ ಆಸ್ಥಿತೌ ॥ 6

ಯಾತೇ ಬಹುತಿಥೇ ಕಾಲೇ ಪ್ರಸನ್ನಃ ಪರಮೇಶ್ವರಃ ।
ಸ್ವಪ್ನೇ ಜಗಾದ ಕಾಮೋ ವಾಂ ಸೇತ್ಸ್ಯತೀತಿ ಸ್ಫುಟಂ ವಚಃ ॥ 7

ಏವಮಾಶ್ವಾಸಿತಾರ್ಯಾಂಬಾ ಧ್ಯಾಯಂತೀ ಮನಸಾ ಶಿವಮ್ ।
ಸುಲಗ್ನೇ ಸುಷುವೇ ಪುತ್ರಂ ತ್ರಿವಿಕ್ರಮಮಿವಾದಿತಿಃ ॥ 8

ಅನಸೂಯಾ ಮಹಾಭಾಗಾ ದತ್ತಾತ್ರೇಯಮಿವ ಪ್ರಭುಮ್ ।
ತೇಜಸಾ ವರ್ಚಸಾ ದೀಪ್ತಂ ಸರ್ವಲಕ್ಷಣಸಂಯುತಮ್ ॥ 9

ಶಂಕರಾನುಗ್ರಹಾಜ್ಜಾತಂ ಶಂಕರಾಂಶಸಮುದ್ಭವಮ್ ।
ಪಿತಾ ಶಂಕರನಾಮ್ನಾ ತಂ ಯೋಜಯಾಮಾಸ ಶಾಸ್ತ್ರವಿತ್ ॥ 10

ಮುಗ್ಧಸ್ಮಿತಮುಖಂ ದೃಷ್ಟ್ವಾ ಸುತಂ ಮಧುರಚೇಷ್ಟಿತಮ್ ।
ಪಿತರೌ ನಾಪ್ನುತಾಂ ತೃಪ್ತಿಂ ಮಧು ಪೀತ್ವೇವ ಷಟ್ಪದೌ ॥ 11

ಪುಣ್ಯಕರ್ಮಗಳನ್ನಾಚರಿಸಿದರೂ ಇಷ್ಟಾರ್ಥವು ಕೈಗೂಡದೆ ಹೋದ್ದರಿಂದ ಅವರಿಬ್ಬರೂ ಪರಮೇಶ್ವರನನ್ನುದ್ದೇಶಿಸಿ ಕಠೋರವಾದ ತಪಸ್ಸನ್ನಾಚರಿಸತೊಡಗಿದರು (5–6). ಹೀಗೆ ತಪಸ್ಸಿನಲ್ಲಿ ಬಹಳ ಕಾಲವು ಕಳೆದಮೇಲೆ ಪರಮೇಶ್ವರನು ಪ್ರಸನ್ನನಾಗಿ ಅವರ ಕನಸಿನಲ್ಲಿ, ''ನಿಮ್ಮ ಇಷ್ಟಾರ್ಥವು ನೆರವೇರುವುದು'' ಎಂದು ಸ್ಪಷ್ಟವಾಗಿ ನುಡಿದನು. ಹೀಗೆ ಆಶ್ವಾಸನೆಯನ್ನು ಪಡೆದ ಆರ್ಯಾಂಬೆಯು ಶಿವನನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಲೇ ಇದ್ದಳು. ಕೆಲವು ದಿನಗಳ ಮೇಲೆ ಒಂದು ಸುಮುಹೂರ್ತದಲ್ಲಿ, ಅದಿತಿಯು ತ್ರಿವಿಕ್ರಮನಾದ ವಾಮನನನ್ನು ಪಡೆದಂತೆ, ಒಬ್ಬ ಪುತ್ರನಿಗೆ ಜನ್ಮವನ್ನಿತ್ತಳು (7–8). ಮಹಾತ್ಮಳಾದ ಅನಸೂಯಾದೇವಿಯು ಪ್ರಭುವಾದ ದತ್ತಾತ್ರೇಯನನ್ನು ಪಡದಂತೆ, ಆರ್ಯಾಂಬೆಯು ತೇಜಸ್ಸಿನಿಂದಲೂ ವರ್ಚಸ್ಸಿನಿಂದಲೂ ಬೆಳಗುತ್ತ ಸರ್ವಲಕ್ಷಣ ಸಂಯುಕ್ತನಾದ ಆ ಪುತ್ರನನ್ನು ಪ್ರಸವಿಸಿದಳು. ಭಗವಾನ್ ಶಂಕರನ ಅಂಶವನ್ನು ಹೊಂದಿ ಶ್ರೀಶಂಕರನ ಅನುಗ್ರಹದಿಂದಲೇ ಹುಟ್ಟಿದ ಆ ಮಗುವಿಗೆ ಶಾಸ್ತ್ರಜ್ಞನಾದ ತಂದೆ ಶಿವಗುರುವು ಶಂಕರನೆಂದೇ ನಾಮಕರಣ ಮಾಡಿದನು. (9–10).

ಚೆಲುವಿನ ಮುಗುಳ್ನಗೆಯನ್ನು ಬೀರುತ್ತ ಮನೋಜ್ಞವಾಗಿ ಕೈಕಾಲುಗಳನ್ನಾಡಿಸುತ್ತಲಿದ್ದ ಆ ಮಗನನ್ನು ಎಷ್ಟು ನೋಡಿದರೂ ತಾಯಿತಂದೆಗಳಿಗೆ ತೃಪ್ತಿಯಾಗುತ್ತಿರಲಿಲ್ಲ, ದುಂಬಿಗಳು ಹೂವಿನ ಮಕರಂದವನ್ನು ಎಷ್ಟು ಕುಡಿದರೂ ತೃಪ್ತಿಯಾಗದಿರುವಂತೆ ಆಯಿತು (11).

ಅಥ ವರ್ಷತ್ರಯಾದರ್ವಾಕ್ ಸಂಸಾರಸ್ಯ ಪ್ರದರ್ಶಯನ್ ।
ನಿಃಸಾರತಾಂ ಶಿವಗುರುರ್ದೈವಾತ್ ಸ್ವರ್ಗಮುಪೇಯಿವಾನ್ ॥ 12

ಆರ್ಯಾಂಬಾ ಶೋಕಸಂತಪ್ತಾ ತನಯಂ ಕುಲದೀಪಕಮ್ ।
ಪ್ರೀತ್ಯಾ ಸಂವರ್ಧಯಾಮಾಸ ವಿದ್ಯೇವ ವಿನಯೋದ್ಗಮಮ್ ॥ 13

ಅಧೀತಾಕ್ಷರವಿನ್ಯಾಸೋ ಗೈರ್ವಾಣ್ಯಾಂ ಭಾಷಿತುಂ ಕ್ಷಮಃ ।
ಬಭೂವ ಶಂಕರೋ ಬಾಲ್ಯೇ ಜನನ್ಯೈವ ಸುಶಿಕ್ಷಿತಃ ॥ 14

ಕೃತೋಪನಯನೋ ವರ್ಷೇ ಪಂಚಮೇ ಶಂಕರೋ ವಟುಃ ।
ಉಪಸದ್ಯ ಗುರುಂ ವೇದಂ ಕಾವ್ಯಂ ಚಾಧ್ಯೈತ ಬುದ್ಧಿಮಾನ್ ॥ 15

ಅಧೀತ್ಯ ವೇದಾಂಶ್ಚಾಂಗಾನಿ ಕುಶಲೋಽಧೀತಿಕರ್ಮಣಿ ।
ವರ್ಷೇಽಷ್ಟಮೇ ಚತುರ್ವೇದೋ ಬಭೂವಾದ್ಭುತಮೇಧಯಾ ॥ 16

ಲೋಕಾತಿಶಾಯಿಧೀಶಕ್ತೇಃ ಸಕೃದ್ದೃಷ್ಟಂ ಸಕೃತ್ ಶ್ರುತಮ್ ।
ವಜ್ರಲೇಪಾಯಿತಂ ಬುದ್ಧೌ ಶಂಕರಸ್ಯ ಮಹಾತ್ಮನಃ ॥ 17

ಹೀಗಿರುವಾಗ ಪುತ್ರನು ಹುಟ್ಟಿ ಇನ್ನೂ ಮೂರುವರ್ಷಗಳಾಗಿರಲಿಲ್ಲ, ಅಷ್ಟರಲ್ಲಿಯೇ ಶಿವಗುರುವು ಸಂಸಾರವಷ್ಟು ನಿಃಸಾರವಾದದ್ದೆಂಬುದನ್ನು ತೋರಿಸುತ್ತ ದೈವಾಧೀನನಾಗಿ ಸ್ವರ್ಗವನ್ನು ಸೇರಿದನು. ಆರ್ಯಾಂಬೆಯು ಪತಿವಿಯೋಗದ ಶೋಕದಿಂದ ಬೆಂದು ಹೋದರೂ ಕುಲದೀಪಕನಾದ ಪುತ್ರನನ್ನು ಪ್ರೀತಿಯಿಂದ ಸಾಕಿದಳು. ವಿದ್ಯೆಯು ವಿನಯವನ್ನು ಬೆಳೆಸಿದಂತೆ ಬೆಳೆಸಿದಳು (12–13). ಶಂಕರನು ಬಾಲ್ಯದಲ್ಲಿ ತಾಯಿಯಿಂದಲೇ ಒಳ್ಳೆಯ ಶಿಕ್ಷಣವನ್ನು ಪಡೆದನು. ಅವನು ಅಕ್ಷರ ಬರೆಯುವುದನ್ನು ಕಲಿತನಲ್ಲದೆ ಸಂಸ್ಕೃತದಲ್ಲಿ ಮಾತಾಡಲು ಸಮರ್ಥನಾದನು. ಶಂಕರನಿಗೆ ಐದನೆಯ ವರ್ಷದಲ್ಲಿ ಉಪನಯನವಾಯಿತು. ಬುದ್ಧಿಶಾಲಿಯಾದ ಆ ವಟುವು ಗುರುಕುಲವನ್ನು ಸೇರಿ ವೇದವನ್ನೂ ಸಂಸ್ಕೃತ ಕಾವ್ಯವನ್ನೂ ಅಧ್ಯಯನ ಮಾಡಿದನು (14–15). ವಿದ್ಯಾಭ್ಯಾಸದಲ್ಲಿ ಅತ್ಯಂತ ಕುಶಲನಾದ ಶಂಕರನು ನಾಲ್ಕು ವೇದಗಳನ್ನೂ ವೇದಾಂಗಗಳಾದ ಶಿಕ್ಷಾ, ವ್ಯಾಕರಣಾದಿ ಶಾಸ್ತ್ರಗಳನ್ನೂ ಅಭ್ಯಾಸ ಮಾಡಿ, ತನ್ನ ಅದ್ಭುತವಾದ ಮೇಧಾಶಕ್ತಿಯಿಂದ ಎಂಟನೆಯ ವರ್ಷವಯಸ್ಸಿನಲ್ಲಿಯೇ ಚತುರ್ವೇದಗಳನ್ನು ಕಲಿತನು. ಆತನ ಧೀಶಕ್ತಿಯು ಲೋಕಾತಿಶಾಯಿಯಾದದ್ದು. ಒಮ್ಮೆ ನೋಡಿದರೆ ಸಾಕು, ಒಮ್ಮೆ ಕೇಳಿದರೆ ಸಾಕು, ಅದು ಮಹಾತ್ಮನಾದ ಶಂಕರನ ಬುದ್ಧಿಯಲ್ಲಿ ವಜ್ರಲೇಪದಂತೆ ನಿಂತು ಬಿಡುತ್ತಿತ್ತು (16–17). ಆ ಬಾಲಕನು ನ್ಯಾಯವೈಶೇಷಿಕಾದಿ ದರ್ಶನಗಳನ್ನೂ ಬೌದ್ಧರ ಮತ್ತು ಜೈನರ ಆಗಮಗಳನ್ನೂ

ವೈಶೇಷಿಕಾದಿ ಶಾಸ್ತ್ರಾಣಿ ಬೌದ್ಧಜೈನಾಗಮಾನಪಿ ।
ಅಧ್ಯಗೀಷ್ಟ ಸಕೃಚ್ಛ್ರುತ್ವಾ ಬಾಲೋ ವಿಸ್ಮಾಪಯನ್ ಗುರೂನ್ ॥ 18

ಸ ಯಯೌ ಜಾತು ಭಿಕ್ಷಾರ್ಥೀ ಗೃಹಂ ವಿಪ್ರಸ್ಯ ಕಸ್ಯಚಿತ್ ।
ದಾರಿದ್ರ್ಯೋಪಹತೇ ತಸ್ಮಿನ್ ಭೋಜ್ಯಮಾಸೀನ್ನ ಕಿಂಚನ ॥ 19

ತೇಜಸ್ವಿನಂ ವಟುಂ ದೃಷ್ಟ್ವಾ ಗೃಹಿಣೀ ದೀನಮಾನಸಾ ।
ಫಲಮಾಮಲಕಂ ತಸ್ಮೈ ದದೌ ಬಾಷ್ಪಮುಖೀ ಶುಚಾ ॥ 20

ತದ್‌ದಾರಿದ್ರ್ಯಂ ತದೌದಾರ್ಯಂ ದೃಷ್ಟ್ವಾಸ್ಯ ಕರುಣಾತ್ಮನಃ ।
ಶಂಕರಸ್ಯಾದ್ರವಚ್ಚಿತ್ತಂ ನವನೀತಮಿವೋಷ್ಮಣಾ ॥ 21

ಆಶುಸಂಗ್ರಥಿತೈಃ ಶ್ಲೋಕೈರ್ಭಕ್ತಿಪೂರ್ಣೈರ್ಮನೋರಮೈಃ ।
ಅನುಗ್ರಹಾರ್ಥಮಸ್ತೌಷೀತ್ ಸ ಲಕ್ಷ್ಮೀಮರ್ಥದೇವತಾಮ್ ॥ 22

ಕ್ಷಣೇನ ಸಝಣತ್ಕಾರೈಃ ಕನಕಾಮಲಕೈರ್ಗೃಹಮ್ ।
ಕೀರ್ಣಂ ಶುಭೈಃ ಶ್ರಿಯೋ ಮೂರ್ತೈಃ ಕಟಾಕ್ಷೈರಿವ ಸರ್ವತಃ ॥ 23

ಸಹ ಒಂದು ಸಲ ಕೇಳಿ ತನ್ನ ವಶಮಾಡಿ ಕೊಂಡು, ಗುರುಗಳನ್ನು ವಿಸ್ಮಯಗೊಳಿಸುತ್ತಿದ್ದನು(18). ಶಂಕರನು ಒಂದು ಸಲ ಒಬ್ಬ ಬ್ರಾಹ್ಮಣನ ಮನೆಗೆ ಭಿಕ್ಷಾರ್ಥಿಯಾಗಿ ಹೋದನು. ತುಂಬ ಬಡತನದಿಂದ ಬಳಲುತ್ತಿದ್ದ ಆ ಮನೆಯಲ್ಲಿ ಯಾವ ಆಹಾರಪದಾರ್ಥವೂ ಇರಲಿಲ್ಲ. ತೇಜಸ್ವಿಯಾದ ಈ ವಟುವನ್ನು ನೋಡಿ ಭಿಕ್ಷೆಹಾಕಲು ಏನೂ ಇಲ್ಲವೆಂದು ಗೃಹಿಣಿಯ ಮನಸ್ಸಿಗೆ ತುಂಬ ನೋವಾಯಿತು. ಅವಳು ದುಃಖದಿಂದ ಕಣ್ಣೀರು ತುಂಬಿಕೊಂಡು ಶಂಕರನಿಗೆ ಒಂದು ನೆಲ್ಲಿಕಾಯಿಯನ್ನು ತಂದು ಕೊಟ್ಟಳು (16–20).

ಆ ಬಡತನವನ್ನೂ ಆ ಗೃಹಿಣಿಯ ಔದಾರ್ಯವನ್ನೂ ಕಂಡು ಕರುಣಾಳುವಾದ ಶಂಕರನ ಚಿತ್ತವು, ಬಿಸಿಗೆ ಬೆಣ್ಣೆ ಕರಗುವಂತೆ ಕರಗಿಹೋಯಿತು. ಒಡನೆಯೇ ಆತನು ಭಕ್ತಿಪೂರ್ಣವಾದ ಸುಂದರ ಶ್ಲೋಕಗಳನ್ನು ರಚಿಸಿ, ಅರ್ಥದೇವತೆಯಾದ ಲಕ್ಷ್ಮೀದೇವಿಯು ಅನುಗ್ರಹಿಸಲೆಂದು ಆ ದೇವಿಯನ್ನು ಸ್ತುತಿಸಿದನು[1] (21–22). ಒಂದು ಕ್ಷಣದಲ್ಲಿ ಆ ಮನೆಯು ಝಣಝಣ ಧ್ವನಿಗಳಿಂದ ಮೊಳಗಿತು! ಲಕ್ಷ್ಮೀದೇವಿಯ ಮೂರ್ತಿಮತ್ತಾದ ಮಂಗಳಕಟಾಕ್ಷಗಳೋ ಎಂಬಂತೆ ಆ ಗೃಹದಲ್ಲಿ ಚಿನ್ನದ ನೆಲ್ಲಿಕಾಯಿಗಳು ಹರಡಿಹೋದವು! ಈಗಲೂ ಕೇರಳರಾಜ್ಯದ 'ಪೊನ್ನರ್ ತೋಡತ' ಎಂಬ ಆ ಗ್ರಾಮದಲ್ಲಿ ಆ ಮನೆಯು 'ಸ್ವರ್ಣತ್ತಿಲ್ಲಮ್' ಎಂದು

---

1. ಈ ಸ್ತುತಿಯು ಕನಕಧಾರಾಸ್ತವವೆಂದು ಪ್ರಸಿದ್ಧವಾಗಿದೆ.

ಅದ್ಯಾಪಿ ಕೇರಲಗ್ರಾಮೇ ಪೊನ್ನುರ್ ತೋಡತ ನಾಮನಿ ।
ಶ್ರೀಮತಾಮಸ್ತಿ ತದ್ಗೇಹಂ ಸ್ವರ್ಣತ್ತಿಲ್ಲಮ್ ಇತಿ ಶ್ರುತಮ್ ॥ 24

ಅನುಜ್ಞಯಾ ಗುರೋಸ್ತಸ್ಯ ನಿವೃತ್ತಸ್ಯ ಗೃಹಂ ಪ್ರತಿ ।
ಸರ್ವತಃ ಪ್ರಸೃತಾ ಕೀರ್ತಿರ್ವಿದ್ಯಾವರ್ಧಿತತೇಜಸಃ ॥ 25

ಅನುಷ್ಠಾನಮಧೀತಿಶ್ಚ ಶುಶ್ರೂಷಾ ಮಾತುರನ್ವಹಮ್ ।
ತ್ರಿತಯೇನ ವಟೋರಾಸೀದಮಿತಂ ಬ್ರಹ್ಮವರ್ಚಸಮ್ ॥ 26

ಮಾತುಃ ಸುಖಾರ್ಥಂ ವೃದ್ಧಾಯಾ ನಿತ್ಯಸ್ನಾನವಿಧೌ ನದೀ ।
ಶಂಕರೇಣಾರ್ಥಿತಾ ಪೂರ್ಣಾ ಸ್ವಪಥಂ ಪರಿಮುಂಚತೀ ॥ 27

ಈಷದ್ವಕ್ರಪಥೇನಾಸಾವಾರ್ಯಾಂಬಾಗೃಹಸಂನಿಧೌ ।
ಪ್ರಾವಹದ್ದರ್ಶಯಂತೀ ತನ್ಮಾಹಾತ್ಮ್ಯಂ ಬ್ರಹ್ಮಚಾರಿಣಃ ॥ 28

ಪ್ರಸೃತಾ ಚಂದ್ರಿಕೇವಾಭೂತ್ ಕೀರ್ತಿಸ್ತಸ್ಯ ಮನೋಹರಾ ।
ತಮದ್ಭುತವಟುಂ ದ್ರಷ್ಟುಂ ಕೇರಲೇಶಃ ಸಮಾಯಯೌ ॥ 29

ಪ್ರಸಿದ್ಧವಾಗಿದೆ. ಈಗಲೂ ಆ ಕುಟುಂಬದವರು ಶ್ರೀಮಂತರು (23–24). ವಿದ್ಯಾಭ್ಯಾಸ ಮುಗಿದ ಮೇಲೆ ಗುರುವಿನ ಅನುಜ್ಞೆಯಂತೆ ಶಂಕರನು ಗುರುಕುಲದಿಂದ ತನ್ನ ಮನೆಗೆ ಹಿಂತಿರುಗಿದನು. ವಿದ್ಯಾಬಲದಿಂದ ಅಧಿಕತೇಜಸ್ಸನ್ನು ಪಡೆದಿದ್ದ ಆತನ ಕೀರ್ತಿಯು ಎಲ್ಲೆಡೆಗೂ ಹರಡಿತು (25).

ಪ್ರತಿದಿನವೂ ಬ್ರಹ್ಮಚಾರಿಗೆ ವಿಹಿತವಾದ ಕರ್ಮದ ಅನುಷ್ಠಾನ, ವೇದಶಾಸ್ತ್ರಗಳ ಅಧ್ಯಯನ, ತಾಯಿಯ ಸೇವೆ–ಈ ಮೂರರಿಂದ ಆ ವಟುವಿನ ಬ್ರಹ್ಮತೇಜಸ್ಸು ಅಧಿಕವಾಗಿ ವರ್ಧಿಸಿತು (26). ತಾಯಿಯಾದ ಆರ್ಯಾಂಬೆಯು ಪ್ರತಿದಿನವೂ ಸ್ನಾನಮಾಡುವುದಕ್ಕಾಗಿ ಪೂರ್ಣಾನದಿಗೆ ಹೋಗುತ್ತಿದ್ದಳು. ವೃದ್ಧೆಯಾದ ಅವಳಿಗೆ ಅದು ಕಷ್ಟಕರವಾಗಿತ್ತು. ಆದ್ದರಿಂದ ತಾಯಿಗೆ ಅನುಕೂಲವಾಗಲೆಂದು ಶಂಕರನು ಪೂರ್ಣಾನದಿಯನ್ನು ಪ್ರಾರ್ಥಿಸಿಕೊಂಡನು. ಆಗ ಪೂರ್ಣಾನದೀದೇವತೆಯು ತಾನು ಹರಿಯುವ ಪಥವನ್ನು ಬದಲಾಯಿಸಿ, ಕೊಂಚ ಓರೆಯಾಗಿ ತಿರುಗಿ ಆರ್ಯಾಂಬೆಯ ಮನೆಯ ಬಳಿಯಲ್ಲಿ ಹರಿಯ ತೊಡಗಿದಳು. ಆ ಬ್ರಹ್ಮಚಾರಿಯ ಮಾಹಾತ್ಮ್ಯವೇನೆಂಬುದನ್ನು ಈ ಪ್ರಕಾರವಾಗಿ ತೋರಿಸಿ ಕೊಟ್ಟಳು (27–28). ಶಂಕರನ ಕೀರ್ತಿಯು ಬೆಳದಿಂಗಳಿನಂತೆ ಮನೋಹರವಾಗಿ ಹರಡಿತು. ಅದನ್ನು ಕೇಳಿ ಕೇರಳರಾಜನಾದ ರಾಜಶೇಖರನು ಈ ಅದ್ಭುತ ಚರಿತದ ಬ್ರಹ್ಮಚಾರಿಯನ್ನು ನೋಡಬೇಕೆಂದು ಆಗಮಿಸಿದನು.

ವಿದ್ಯಾವಿನಯಸಂಪನ್ನಂ ವಾಗ್ಮಿನಂ ಬ್ರಹ್ಮಚಾರಿಣಮ್ ।
ತೇಜಸ್ವಿನಂ ಚ ತಂ ದೃಷ್ಟ್ವಾ ವಿಸ್ಮಿತೋ ರಾಜಶೇಖರಃ ॥ 30

ದಿವ್ಯಜ್ಯೋತಿರಿದಂ ರಾಜ್ಯೇ ಮದೀಯೇ ಸಮಭೂದಿತಿ ।
ಧನ್ಯಂಮನ್ಯಮನಾಸ್ತಸ್ಮೈ ಸೋऽದಿತ್ಸದ್ ವಿಪುಲಂ ವಸು ॥ 31

ವಿರಕ್ತಃ ಶಂಕರಃ ಕಿಂಚಿನ್ನಾದದೇ ಕಿಂತು ತದ್ಧನಮ್ ।
ದೀನೇಭ್ಯೋ ದಾಪಯಾಮಾಸ ಪ್ರಭುಣೈವ ದಯಾರ್ದ್ರಧೀಃ ॥ 32

ಸಂತುಷ್ಟಸ್ತಂ ವಟುಂ ಭೂಪೋ ನತ್ವಾ ತಸ್ಯ ಚ ಮಾತರಮ್ ।
ಪ್ರತಸ್ಥೇ ಗಜಮಾರೂಢೋ ವಿಸ್ಮಯಾವಿಷ್ಟ ಮಾನಸಃ ॥ 33

ಸರ್ವಶಾಸ್ತ್ರೇಷು ವಿದುಷಃ ಶಂಕರಸ್ಯ ಮನೀಷಿಣಃ ।
ನಿತ್ಯಾನಿತ್ಯವಿವೇಕೋತ್ಥಂ ವೈರಾಗ್ಯಂ ವವೃಧೇತರಾಮ್ ॥ 34

ಸಮುದ್ಭೂತಾ ತತಸ್ತೀವ್ರಾ ಸಂನ್ಯಾಸಗ್ರಹಣೇ ಮತಿಃ ।
ಸಮ್ಯಕ್ ಪಲ್ಲವಿತೇ ಚೂತೇ ಪುಷ್ಪಾದಿವ ಫಲೋದ್ಗತಿಃ ॥ 35

ವಿದ್ಯಾವಿನಯಸಂಪನ್ನನೂ ವಾಗ್ಮಿಯೂ ತೇಜಸ್ವಿಯೂ ಆದ ಆ ಬ್ರಹ್ಮಚಾರಿಯನ್ನು ವೀಕ್ಷಿಸಿ ರಾಜಶೇಖರನು ಆಶ್ಚರ್ಯಪಟ್ಟನು (29–30).

''ನನ್ನ ರಾಜ್ಯದಲ್ಲಿ ಈ ಒಂದು ದಿವ್ಯಜ್ಯೋತಿಯು ಉದಿಸಿದೆ. ನಾನು ಧನ್ಯನಾದೆನು!'' ಎಂದು ಸಂಪ್ರೀತನಾದ ರಾಜಶೇಖರನು ಆ ಬ್ರಹ್ಮಚಾರಿಗೆ ವಿಪುಲವಾದ ಹಣವನ್ನು ಕಾಣಿಕೆಯಾಗಿ ಕೊಡಬೇಕೆಂದು ಬಯಸಿದನು (31). ಯಾವ ಆಸೆಯನ್ನೂ ಇಟ್ಟುಕೊಳ್ಳದೆ ವಿರಕ್ತನಾಗಿದ್ದ ಶಂಕರನು ಒಂದು ಕಾಸನ್ನೂ ಮುಟ್ಟಲಿಲ್ಲ. ಕರುಣಾರ್ದ್ರಚಿತ್ತನಾದ ಆತನು ಆ ಎಲ್ಲ ಹಣವನ್ನೂ ಬಡವರಿಗೆ ರಾಜನಿಂದಲೇ ಕೊಡಿಸಿಬಿಟ್ಟನು! ಸಂತುಷ್ಟನಾದ ಭೂಪಾಲನು ಆ ಬ್ರಹ್ಮಚಾರಿಗೂ ಆತನ ತಾಯಿಯಾದ ಆರ್ಯಾಂಬೆಗೂ ನಮಸ್ಕರಿಸಿ, ತನ್ನ ಆನೆಯನ್ನೇರಿ ಆಶ್ಚರ್ಯಪಡುತ್ತ ರಾಜಧಾನಿಗೆ ಪ್ರಯಾಣ ಮಾಡಿದನು. (32–33). ಸರ್ವಶಾಸ್ತ್ರಗಳಲ್ಲಿ ನಿಷ್ಣಾತನೂ ಬುದ್ಧಿಶಾಲಿಯೂ ಆದ ಶಂಕರನಿಗೆ ವಸ್ತುಗಳ ನಿತ್ಯಾನಿತ್ಯ ವಿವೇಚನೆಯಿಂದ ಹುಟ್ಟಿದ ವೈರಾಗ್ಯವು ಕ್ರಮವಾಗಿ ಬೆಳೆಯುತ್ತಹೋಯಿತು. ಅನಂತರ ತಾನು ಸಂನ್ಯಾಸವನ್ನು ಸ್ವೀಕರಿಸಬೇಕೆಂಬ ಬುದ್ಧಿಯು ದೃಢವಾಗಿ ಉದಿಸಿತು! ಚೆನ್ನಾಗಿ ಚಿಗುರಿ ಬೆಳೆದ ಮಾವಿನ ಮರದ ಹೆಸರಿಂದ ಮಾವಿನ ಹಣ್ಣು ಹುಟ್ಟಿದಂತಾಯಿತು (34–35). ಆದರ ಶಂಕರನ ತಾಯಿಗೆ ಆತನೊಬ್ಬನೇ ಮಗನು. ಆದ್ದರಿಂದ ಆ ತಾಯಿಯು ಮಗನ ಸಂನ್ಯಾಸದ

ಏಕಪುತ್ರಾ ತು ಮಾತಾ ತತ್ಸಂನ್ಯಾಸಂ ನಾನ್ವಮೋದತ ।
ಕಿಂ ಕರ್ತವ್ಯಮಿತಿ ಪ್ರಾಜ್ಞಶ್ಚಿಂತಯನ್ ಶಂಕರಃ ಸ್ಥಿತಃ ॥ 36

ಸ್ನಾನಾರ್ಥಮವಗಾಢಸ್ಯ ಪೂರ್ಣಾಂ ತಸ್ಯ ಕದಾಚನ ।
ಜಗ್ರಾಹ ಚರಣಂ ನಕ್ರೋ ಹಾಹಾಕಾರೋ ಮಹಾನಭೂತ್ ॥ 37

ವಿಕ್ರೋಶಂತೀಂ ತಟೇ ಸ್ಥಿತ್ವಾ ಮಾತರಂ ಕುರರೀಮಿವ ।
ಅಬ್ರವೀಚ್ಛಂಕರೋ ಧೀರೋ "ಮಾ ರೋದೀರಂಬ ಮಾಂ ಪ್ರತಿ" ॥ 38

ಅನುಮನ್ಯಸ್ವ ಸಂನ್ಯಾಸಂ, "ಜಾತಸ್ಯ ಮರಣಂ ಧ್ರುವಮ್" ।
ಪುತ್ರಕಸ್ಯಾಂತಿಮಾಂ ಯಾಚ್ಞಾಂ ಮತ್ವಾ ಸಾಽನುಮತಿಂ ದದೌ ॥ 39

ಮಯಾ ಸಂನ್ಯಸ್ತಮಿತ್ಯೇವಂ ಸಂಕಲ್ಪಮಕರೋದ್ವಟುಃ ।
ದೈವಾನ್ನಕ್ರೇಣ ಮುಕ್ತೋಽಯಂ ಶಂಕರಸ್ತೀರಮಾಯಯೌ ॥ 40

ಪುತ್ರಸಂನ್ಯಾಸದುಃಖಾರ್ತಾ ತದುಜ್ಜೀವನಹರ್ಷಿತಾ ।
ಹಿಮಾರ್ದ್ರಾ ನಲಿನೀವಾಂಬಾ ಭಾಸ್ಕರೋಚ್ಛ್ವಸಿತಾ ಬಭೌ ॥ 41

ಬಯಕೆಯನ್ನೊಪ್ಪಲಿಲ್ಲ. ಪ್ರಾಜ್ಞನಾದ ಶಂಕರನು ಈಗೇನು ಮಾಡಬೇಕೆಂದು ಚಿಂತಿಸುತ್ತಿದ್ದನು (36). ಒಂದು ದಿನ ಶಂಕರನು ಸ್ನಾನಕ್ಕಾಗಿ ಪೂರ್ಣಾನದಿಗೆ ಹೋಗಿ ನೀರಿನಲ್ಲಿಳಿದನು. ಒಂದು ಮೊಸಳೆಯು ಆತನ ಕಾಲನ್ನು ಹಿಡಿದುಕೊಂಡು ಬಿಟ್ಟಿತು. ಅದರಿಂದ ಹಾಹಾಕಾರವುಂಟಾಗಿ ಭಾರಿ ಗದ್ದಲವಾಯಿತು. ಶಂಕರನ ತಾಯಿಯಾದ ಆರ್ಯಾಂಬೆಯು ಅದನ್ನು ಕೇಳಿ ಓಡಿಬಂದು ಕುರರೀಪಕ್ಷಿಯಂತೆ ಕೂಗುತ್ತ ಅಳುತ್ತ ನದಿಯ ದಡದಲ್ಲಿ ನಿಂತಿದ್ದಳು. ಧೀರನಾದ ಶಂಕರನು ಅವಳನ್ನು ಕುರಿತು "ಅಮ್ಮ, ನನಗಾಗಿ ಅಳಬೇಡ. ಸಂನ್ಯಾಸವನ್ನು ತೆಗೆದುಕೊಳ್ಳಲು ಈ ಸಮಯದಲ್ಲಾದರೂ ಅನುಮತಿಯನ್ನು ಕೊಡು. ಹುಟ್ಟಿದವರಿಗೆ ಒಂದು ದಿನ ಸಾವು ನಿಶ್ಚಿತ" ಎಂದನು. ಅದು ತನ್ನ ಪ್ರಿಯ ಪುತ್ರನ ಕಡೆಯ ಬಯಕೆಯೆಂದು ತಿಳಿದು ಆರ್ಯಾಂಬೆಯು ಅವನ ಸಂನ್ಯಾಸಕ್ಕೆ ಅನುಮತಿಯನ್ನಿತ್ತಳು (37–39). ಆಗ ಬ್ರಹ್ಮಚಾರಿಯಾದ ಶಂಕರನು "ನಾನು ಸಂನ್ಯಾಸವನ್ನು ಸ್ವೀಕರಿಸಿದ್ದೇನೆ" ಎಂದು ಸಂಕಲ್ಪ ಸಂನ್ಯಾಸವನ್ನು ಸ್ವೀಕರಿಸಿದನು. ಆಮೇಲೆ ಅದೃಷ್ಟವಶದಿಂದ ಮೊಸಳೆಯು ಹೇಗೋ ಅವನನ್ನು ಬಿಟ್ಟುಬಿಟ್ಟಿತು. ಶಂಕರನು ದಡಕ್ಕೆ ಬಂದು ಸೇರಿದನು (40)

ಅವನ ತಾಯಿಗಾದರೋ ತನ್ನ ಮಗ ಶಂಕರನು ಸಂನ್ಯಾಸವನ್ನು ತೆಗೆದುಕೊಂಡನೆಂದು ಒಂದು ಕಡೆ ತಡೆಯಲಾರದ ದುಃಖ, ಇನ್ನೊಂದು ಕಡೆ ಅವನು ಬದುಕಿಬಂದನೆಂದು ಹರ್ಷ. ಹೀಗಾಗಿ ಆರ್ಯಾಂಬೆಯು ಒಂದು ಕಡೆ ಹಿಮಾಚ್ಛಾದನೆಯಿಂದಾದ ಒದ್ದೆ ಇನ್ನೊಂದು ಕಡೆ

ಆರ್ಯಾಂಬಾ ಗೇಹಮಾಯಾಸೀತ್ ಸಪುತ್ರಾ ಖಿನ್ನಮಾನಸಾ ।
ಬಾಷ್ಪವೇಗಂ ನಿರುಂಧಾನಾ ಹರ್ಷಶೋಕಸಮುದ್ಭವಮ್ ॥ 42

ಆಹ ಸ್ಮ ಶಂಕರೋ "ಮಾತಃ ! ಕಿಮರ್ಥಮನುಶೋಚಸಿ ।
ಪತ್ನೀ ತ್ವಮೃಷಿಕಲ್ಪಸ್ಯ ಪ್ರಾಜ್ಞಸ್ಯ ವಿದುಷಃ ಸತೀ ॥ 43

ಸಾಂಪ್ರತಂ ಚಾಸಿ ಯತಿನಾ ಪುತ್ರಿಣೀ ಧೈರ್ಯಮಾವಹ ।
ತ್ವತ್ಪಾರ್ಶ್ವಮಾಗಮಿಷ್ಯಾಮಿ ಸ್ಮೃತೇ ಮಯಿ ನ ಸಂಶಯಃ ॥ 44

ಕುರ್ವಂತಿ ತವ ಶುಶ್ರೂಷಾಂ ದಾಯಾದಾಃ ಪ್ರಾತಿವೇಶಿಕಾಃ ।
ಯಸ್ಮಾತ್ ಪಿತ್ರ್ಯಂ ಧನಂ ಭೂರಿ ಗ್ರಹೀಷ್ಯಂತಿ ತತಃ ಪರಮ್" ॥ 45

ಆರ್ಯಾಂಬಾ ತ್ವಬ್ರವೀದ್ "ವತ್ಸ ಪ್ರಯಾತಾಯಾಮಿತೋ ಮಯಿ ।
ಕರ್ತಾಸಿ ಮಮ ಸಂಸ್ಕಾರಮಿತ್ಯಾಶಾ ಹೃದಯೇ ಧೃತಾ" ॥ 46

ಏವಂ ಭವಿಷ್ಯತೀತ್ಯುಕ್ತ್ವಾ ಸಮಾಶ್ವಾಸ್ಯ ಸ ಮಾತರಮ್ ।
ನಿವೇದ್ಯ ಸರ್ವಂ ಬಂಧುಭ್ಯೋ ದಯಾಂ ಮಾತರ್ಯಯಾಚತ ॥ 47

ಸೂರ್ಯೋದಯದಿಂದಾದ ವಿಕಾಸ ಇವುಗಳಿಗೆ ಒಳಗಾದ ತಾವರೆಯ ಬಳ್ಳಿಯಂತಾದಳು! (41). ಆರ್ಯಾಂಬೆಯು ಹರ್ಷಶೋಕಗಳೆರಡರಿಂದಲೂ ಉಕ್ಕಿಬರುವ ಕಣ್ಣೀರನ್ನು ಬಿಗಿಹಿಡಿಯುತ್ತ ವಿಷಣ್ಣಳಾಗಿ ಮಗನೊಡನೆ ಮನೆಗೆ ಬಂದಳು (42). ಆಗ ಶಂಕರನು "ಅಮ್ಮ ಏಕೆ ಶೋಕಿಸುತ್ತೀಯೆ? ಪ್ರಾಜ್ಞನೂ ವಿದ್ವಾಂಸನೂ ಋಷಿಸದೃಶನೂ ಆದ ಮಹಾಪುರುಷನ ಪತ್ನಿಯಲ್ಲವೆ ನೀನು? ಈಗ ಒಬ್ಬ ಸಂನ್ಯಾಸಿಯಾದ ಪುತ್ರನಿದ್ದಾನೆ ನಿನಗೆ. ಧೈರ್ಯವನ್ನು ತಂದುಕೊ. ನನ್ನನ್ನು ನೆನೆಸಿಕೊಂಡಾಗ ನಿನ್ನ ಬಳಿಗೆ ಬರುತ್ತೇನೆ. ಇದರಲ್ಲಿ ಸಂಶಯವೇ ಬೇಡ (43–44). ಮನೆಯ ಪಕ್ಕದಲ್ಲಿಯೇ ಇರುವ ದಾಯಾದಿಗಳು ನಿನ್ನ ಶುಶ್ರೂಷೆಯನ್ನು ಮಾಡುತ್ತಾರೆ. ಏಕೆಂದರೆ, ನನ್ನ ತಂದೆಯ ವಿಪುಲವಾದ ಆಸ್ತಿ ಹಣವೆಲ್ಲವೂ ಮುಂದೆ ಅವರಿಗೆ ಸೇರುವುದು. ಅದನ್ನು ಅವರು ತೆಗೆದುಕೊಳ್ಳುವರು" ಎಂದನು (45). ಆರ್ಯಾಂಬೆಯು "ಮಗು, ನಾನು ಈ ಲೋಕದಿಂದ ನಿರ್ಗಮಿಸಿದಾಗ, ನನ್ನ ಉತ್ತರಸಂಸ್ಕಾರವನ್ನು ನೀನು ಮಾಡುತ್ತೀಯೆ – ಎಂಬ ಆಸೆಯನ್ನು ಹೃದಯದಲ್ಲಿಟ್ಟುಕೊಂಡಿದ್ದೆನು" ಎಂದಳು 46). "ಹಾಗೆಯೇ ಆಗುವುದು" ಎಂದು ನುಡಿದು ಶಂಕರನು ತಾಯಿಯನ್ನು ಸಮಾಧಾನ ಪಡಿಸಿದನು. ಆಮೇಲೆ ಎಲ್ಲ ವೃತ್ತಾಂತವನ್ನೂ ದಾಯಾದಿ ಬಂಧುಗಳಿಗೆ ತಿಳಿಸಿ, ತನ್ನ ತಾಯಿಯನ್ನು ಕಾರುಣ್ಯದಿಂದ ನೋಡಿಕೊಳ್ಳಬೇಕೆಂದು ಅವರನ್ನು ಬೇಡಿಕೊಂಡನು (47).

ತತಃ ಪ್ರಣಮ್ಯ ಜನನೀಂ ಗೃಹಾತ್ ಪ್ರಸ್ಥಿತಮಂಜಸಾ ।
ಕಾಷಾಯವಾಸಸಂ ದೃಷ್ಟ್ವಾ ವ್ಯಸ್ಮಯಂತ ಸಮೇ ಜನಾಃ ॥ 48

ಅಥ ಶ್ರೀಶಂಕರೋ ದಂಡೀ ಪ್ರತಸ್ಥೇ ಮಾರ್ಗಯನ್ ಗುರುಮ್ ।
ಅಮೃತಸ್ಯಾಪ್ತಯೇ ಪದ್ಮಂ ಪ್ರಫುಲ್ಲಮಿವ ಷಟ್ಪದಃ ॥ 49

ರೇವಾತಟಮುಪಾಸೀನಂ ಶ್ರೀಗೋವಿಂದಯತೀಶ್ವರಮ್ ।
ಸಮೇತ್ಯ ಪ್ರಣನಾಮಾಸೌ ಸದ್ಗುರುಂ ಜ್ಞಾನಿನಾಂ ವರಮ್ ॥ 50

ತತ್ಪ್ರಸಾದೇನ ಶಾಸ್ತ್ರೀಯಂ ಸಂನ್ಯಾಸಂ ವಿಧಿಪೂರ್ವಕಮ್ ।
ಗೃಹೀತ್ವಾ ಶಂಕರೋ ವಿಜ್ಞಸ್ತಚ್ಛಿಷ್ಯತ್ವಮುಪೇಯಿವಾನ್ ॥ 51

ಅಧ್ಯೈತ ಸರ್ವವೇದಾಂತಾನ್ ಸಂಪ್ರದಾಯವಿದೋ ಗುರೋಃ ।
ಶಿಷ್ಯಾತ್ ಶ್ರೀಗೌಡಪಾದಸ್ಯ ಶ್ರೀಗೋವಿಂದಯತೀಶ್ವರಾತ್ ॥ 52

ಲೋಕಾತಿಶಾಯಿನೀಂ ಮೇಧಾಂ ವಾಗ್ವಿಲಾಸಂ ನವಂ ವಯಃ ।
ವೀಕ್ಷ್ಯ ಶಿಷ್ಯಸ್ಯ ಗುರುರಾಡ್ ಮುಮುದೇ ಮುಮುದೇ ಹೃದಿ ॥ 53

ಅನಂತರ ತಾಯಿಗೆ ನಮಸ್ಕರಿಸಿ ಶೀಘ್ರದಲ್ಲಿ ಕಾಷಾಯವಸ್ತ್ರವನ್ನುಟ್ಟು ಮನೆಯಿಂದ ಹೊರಟನು. ಆ ಬಾಲಸಂನ್ಯಾಸಿಯನ್ನು ನೋಡಿ ಸಮಸ್ತ ಜನರೂ ಆಶ್ಚರ್ಯಪಟ್ಟರು (48). ದಂಡವನ್ನು ಹಿಡಿದಿದ್ದ ಶ್ರೀ ಶಂಕರನು, ದುಂಬಿಯು ಅಮೃತದ ಪ್ರಾಪ್ತಿಗಾಗಿ ಅರಳಿದ ಕಮಲವನ್ನು ಹುಡುಕಿಕೊಂಡು ಹೊರಟುಹೋಗುವಂತೆ ಅಮೃತದ ಪ್ರಾಪ್ತಿಗಾಗಿ ಯೋಗ್ಯನಾದ ಗುರುವನ್ನು ಅನ್ವೇಷಿಸುತ್ತ ಹೋದನು (49). ಆಗ ನರ್ಮದಾನದೀತೀರದಲ್ಲಿ ಶ್ರೇಷ್ಠಜ್ಞಾನಿಗಳಾದ ಶ್ರೀಗೋವಿಂದ ಯತೀಶ್ವರರು ವಾಸವಾಗಿದ್ದರು. ಶ್ರೀ ಶಂಕರನು ಅವರೇ ತನಗೆ ಸದ್ಗುರುವೆಂದು ಭಾವಿಸಿ ಅಲ್ಲಿಗೆ ಹೋಗಿ ಆ ಯತೀಶ್ವರರಿಗೆ ನಮಸ್ಕರಿಸಿದನು (50).

ಅನಂತರ ಶ್ರೀ ಶಂಕರನು ಶ್ರೀ ಗೋವಿಂದ ಯತೀಶ್ವರರ ಅನುಗ್ರಹಕ್ಕೆ ಪಾತ್ರನಾಗಿ ಅವರಿಂದ ಶಾಸ್ತ್ರೀಯವಾದ ಸಂನ್ಯಾಸವನ್ನು ವಿಧಿ ಪೂರ್ವಕವಾಗಿ ಸ್ವೀಕರಿಸಿದನು. ಆ ಗುರುಗಳ ಅರ್ಹತೆಯನ್ನರಿತು ಅವರ ಶಿಷ್ಯನೂ ಆದನು (51) ಶ್ರೀ ಗೌಡಪಾದರ ಶಿಷ್ಯರೂ ಗುರುಶಿಷ್ಯ ಸಂಪ್ರದಾಯದಿಂದ ಬಂದ ಪರಮಾರ್ಥವನ್ನರಿತವರೂ ಆದ ಶ್ರೀ ಗೋವಿಂದ ಭಗವತ್ಪಾದರಿಂದ ಈ ಶಂಕರಯತಿಯು ಎಲ್ಲ ಉಪನಿಷತ್ತುಗಳ ಅರ್ಥವನ್ನೂ ಕ್ರಮವಾಗಿ ಅಧ್ಯಯನ ಮಾಡಿ ತಿಳಿದುಕೊಂಡನು (52). ಗುರುರಾಜರಾದ ಗೋವಿಂದ ಯತಿಗಳು ಈ ಶಿಷ್ಯನ ಅಸಾಧಾರಣವಾದ ಮೇಧಾಶಕ್ತಿಯನ್ನೂ ವಾಗ್ಮಿತೆಯನ್ನೂ ಎಳೆಯ ವಯಸ್ಸನ್ನೂ

ವರ್ಷಾಸು ನರ್ಮದಾಪೂರಸ್ತಟಮುತ್ಕ್ರಮ್ಯ ದುರ್ದಮಃ ।
ಪ್ರಾವಹಜ್ಜನಯನ್ ಭೀತಿಂ ಭೃಶಮಾಶ್ರಮವಾಸಿನಾಮ್ ॥ 54

ಗೋವಿಂದ ಭಗವತ್ಪಾದೇ ಸಮಾಧಿಂ ದೃಢಮಾಸ್ಥಿತೇ ।
ಶ್ರೀ ಶಂಕರೋಽಭಿಮಂತ್ರ್ಯ ಸ್ವಂ ಕರಕಂ ನಿದಧೌ ಪುರಃ ॥ 55

ಸ ಪಪೌ ಸಕಲಂ ಪೂರಂ ಕುಂಭಯೋನಿರಿವಾಂಬುಧಿಮ್ ।
ನಿರಾಪದ್ಯಾಶ್ರಮೇ ಸರ್ವೇ ತುಷ್ಟಾಸ್ತಂ ತುಷ್ಟುವುರ್ಯತಿಮ್ ॥ 56

ಶ್ರೀಗೋವಿಂದಯತೀಂದ್ರಸ್ತು ಸಮಾಧೇರುತ್ಥಿತಸ್ತತಃ ।
ಜ್ಞಾತ್ವೇದಂ, ಯೋಗಸಂಸಿದ್ಧಂ ಮೇನೇ ತಂ ಶಂಕರಂ ಯತಿಮ್ ॥ 57

ಕಿಮೇಷ ಶಂಕರಃ ಸಾಕ್ಷಾದವತೀರ್ಣಃ ಕಲೌ ಯುಗೇ ।
ವೈದಿಕಂ ಧರ್ಮಮುದ್ಧರ್ತುಮಿತ್ಯಸೌ ಸಂಶಯಂ ದಧೇ ॥ 58

ಏಕದಾ ಗುರುರಾಹ ಸ್ಮ ಶ್ರೀಶಂಕರಯತಿಂ ರಹಃ ।
ವತ್ಸ ತ್ವಯಾರ್ಜಿತಾ ವಿದ್ಯಾ ನಾಸ್ತಿ ಜ್ಞೇಯಮಿತಃ ಪರಮ್ ॥ 59

ನೋಡಿ ನೋಡಿ ತಮ್ಮಲ್ಲಿಯೇ ಹರ್ಷದಿಂದ ಉಬ್ಬುತ್ತಿದ್ದರು (53). ಹೀಗಿರಲು ಮಳೆಗಾಲ ಬಂದಿತು. ನರ್ಮದಾನದಿಯ ಪ್ರವಾಹವು ದಡವನ್ನು ದಾಟಿ ಹಿಡಿತವಿಲ್ಲದೆ ಉಕ್ಕಿ ಉಕ್ಕಿ ಹರಿಯಲಾರಂಭಿಸಿತು. ಆಶ್ರಮದಲ್ಲಿದ್ದ ಶಿಷ್ಯ ಜನರೆಲ್ಲರೂ ಹೆದರಿ ಕಂಗಾಲಾದರು. ಶ್ರೀ ಗೋವಿಂದ ಭಗವತ್ಪಾದರು ಬಾಹ್ಯದ ಪರಿವೆಯಿಲ್ಲದೆ ದೃಢ ಸಮಾಧಿಯಲ್ಲಿದ್ದರು. ಅದೆಲ್ಲವನ್ನೂ ಗಮನಿಸಿ ಶ್ರೀ ಶಂಕರಯತಿಗಳು ತಮ್ಮ ಕಮಂಡಲುವನ್ನು ಅಭಿಮಂತ್ರಿಸಿ ನರ್ಮದಾಪ್ರವಾಹಕ್ಕೆ ಅಭಿಮುಖವಾಗಿ ಇಟ್ಟರು (54–55). ಅಗಸ್ತ್ಯ ಮುನಿಗಳು ಸಮುದ್ರವನ್ನು ಕುಡಿದಂತೆ, ಆ ಕಮಂಡಲುವು ಸಕಲಪ್ರವಾಹ ಜಲವನ್ನೂ ಕುಡಿದುಬಿಟ್ಟಿತು! ಆಶ್ರಮಕ್ಕೆ ಬಂದಿದ್ದ ಆಪತ್ತು ತೊಲಗಿತು. ಅಲ್ಲಿದ್ದ ಜನರೆಲ್ಲರೂ ಹರ್ಷದಿಂದ ಶ್ರೀ ಶಂಕರಯತಿಗಳನ್ನು ಸ್ತುತಿಸಿದರು (56). ಅನಂತರ ಶ್ರೀ ಗೋವಿಂದಯತಿಗಳಿಗೆ ಸಮಾಧಿಯಿಂದ ಎದ್ದಮೇಲೆ ಈ ವಿಷಯವೆಲ್ಲವೂ ತಿಳಿಯಿತು. ಶ್ರೀಶಂಕರರು ಯೋಗಸಿದ್ಧರಾಗಿದ್ದಾರೆಂದು ಅವರು ನಿಶ್ಚಯಿಸಿದರು (57). ''ಈ ಶಂಕರಯತಿಯು ಯಾರಿರಬಹುದು? ಈ ಕಲಿಯುಗದಲ್ಲಿ ವೈದಿಕಧರ್ಮವನ್ನು ಉದ್ಧರಿಸುವುದಕ್ಕಾಗಿ ಸಾಕ್ಷಾತ್ ಶ್ರೀ ಶಂಕರನೇ ಶಂಕರನೆಂಬ ಹೆಸರಿನಿಂದ ಅವತರಿಸಿರಬಹುದೆ?'' ಎಂದೂ ಶ್ರೀ ಗೋವಿಂದ ಭಗವತ್ಪಾದರಿಗೆ ಸಂದೇಹವಾಯಿತು (58). ಒಂದು ದಿನ ಶ್ರೀ ಶಂಕರಯತಿಗಳನ್ನು ಕುರಿತು ಅವರ ಗುರುಗಳಾದ ಶ್ರೀ ಗೋವಿಂದ ಯತಿಗಳು ಏಕಾಂತದಲ್ಲಿ ಹೀಗಂದರು (59): ''ವತ್ಸ–

ಕ್ಷೇತ್ರಂ ವಾರಾಣಸೀಂ ಗತ್ವಾ ಗಂಗಾತಟಮುಪಾಶ್ರಯನ್ ।
ವ್ಯಾಪ್ರಿಯಸ್ವ ಶಿವಂ ಧ್ಯಾಯನ್ ಲೋಕಸಂಗ್ರಹಕರ್ಮಣಿ ॥ 60

ಪಶ್ಯ ಭಾರತದೇಶೇಽಸ್ಮಿನ್ ಪ್ರಾಪ್ತಾಂ ಧರ್ಮಸ್ಯ ದುರ್ದಶಾಮ್ ।
ಅವೈದಿಕಮತಾನ್ಯೇವ ಪ್ರಚುರಾಣಿ ಸಮಂತತಃ ॥ 61

ಬ್ರಹ್ಮೋಪನಿಷದಂ ಸತ್ಯಮದ್ವೈತಂ ಶಾಂತಮವ್ಯಯಮ್ ।
ಉಪೇಕ್ಷ್ಯ ಪಂಡಿತಾಃ ಶುಷ್ಕತರ್ಕೇಷ್ವೇವ ಪ್ರತಿಷ್ಠಿತಾಃ ॥ 62

ಅದ್ವಿತೀಯಂ ಪರಂ ತತ್ತ್ವಂ ಭಗವಾನ್ ಬಾದರಾಯಣಃ ।
ಶ್ರುತಿಭಿರ್ಯುಕ್ತಿಭಿಶ್ಚಾಪಿ ಪ್ರತ್ಯಪಾದಯದಚ್ಯುತಮ್ ॥ 63

ತಚ್ಛಾರೀರಕಸೂತ್ರೇಷು ವೇದಾಂತಾನಾಂ ಸಮನ್ವಯಃ ।
ವೇದಾಂತದರ್ಶನಂ ಹ್ಯೇತತ್ತದನ್ಯದ್ ದ್ವೈತದರ್ಶನಮ್ ॥ 64

ಸಂಪ್ರದಾಯಾನಭಿಜ್ಞಾಸ್ತು ಸೂತ್ರಾರ್ಥಾನನ್ಯಥಾನ್ಯಥಾ ।
ಯಥಾರುಚಿ ನಯಂತ್ಯೇತೇ ಮಿಥ್ಯಾಪಾಂಡಿತ್ಯಗರ್ವಿತಾಃ ॥ 65

ಶಂಕರ, ನೀನು ವಿದ್ಯಾರ್ಜನೆಯಲ್ಲಿ ನಿಷ್ಣಾತನಾಗಿದ್ದೀಯೆ. ನನ್ನಿಂದ ನೀನು ಕಲಿಯು ಬೇಕಾದದ್ದೇನೂ ಉಳಿದಿಲ್ಲ! ನೀನು ಇಲ್ಲಿಂದ ವಾರಾಣಸೀಕ್ಷೇತ್ರಕ್ಕೆ ಹೋಗಿ ಗಂಗಾತೀರದಲ್ಲಿ ನೆಲೆಸಿ ವಿಶ್ವೇಶ್ವರನನ್ನು ಧ್ಯಾನಿಸುತ್ತ ಲೋಕಸಂಗ್ರಹಕಾರ್ಯದಲ್ಲಿ ತೊಡಗು (60). ಈ ಭರತ ಖಂಡದಲ್ಲಿ ವೈದಿಕ ಧರ್ಮಕ್ಕೆ ಯಾವ ದುರ್ಗತಿಯುಂಟಾಗಿದೆಯೆಂಬುದನ್ನು ನೋಡು. ಎಲ್ಲಿ ನೋಡಿದರೂ ವೇದವಿರುದ್ಧವಾದ ಮತಗಳು ವಿಜೃಂಭಿಸುತ್ತಿವೆ (61). ಉಪನಿಷತ್ತುಗಳಲ್ಲಿ ಪ್ರತಿಪಾದಿತವಾದದ್ದು ಸತ್ಯವಾದ ಅದ್ವೈತ ತತ್ತ್ವ. ಶಾಂತವೂ ಶಾಶ್ವತವೂ ಆದ ಆ ಪರಬ್ರಹ್ಮವನ್ನು ಕೈಬಿಟ್ಟು ಈ ಪಂಡಿತರೆಲ್ಲರೂ ಶುಷ್ಕತರ್ಕಗಳಲ್ಲಿಯೇ ಆಸಕ್ತರಾಗಿದ್ದಾರೆ! (62). ಭಗವಾನ್ ಬಾದರಾಯಣರು ಅಚ್ಯುತವೂ ಅದ್ವಿತೀಯವೂ ಆದ ಈ ಪರಮ ತತ್ತ್ವವನ್ನು ಶಾರೀರಕ ಸೂತ್ರಗಳಲ್ಲಿ ಶ್ರುತಿವಾಕ್ಯಗಳಿಂದಲೂ ಯುಕ್ತಿಗಳಿಂದಲೂ ಸಾಧಿಸಿ ಸಿದ್ಧಾಂತ ಮಾಡಿದ್ದಾರೆ. ಈ ಬ್ರಹ್ಮಸೂತ್ರಗಳಲ್ಲಿ ಎಲ್ಲ ಉಪನಿಷದ್ವಚನಗಳೂ ವಿರೋಧವಿಲ್ಲದೆ ಸಮಂಜಸವಾಗಿ ಹೊಂದಿಕೊಳ್ಳುತ್ತವೆ. ವೇದಾಂತದರ್ಶನವೆಂದರೆ ಅದ್ವೈತಬ್ರಹ್ಮವಾದವೇ. ಉಳಿದವೆಲ್ಲವೂ ದ್ವೈತದರ್ಶನಗಳು (63–64). ಸಂಪ್ರದಾಯ ವನ್ನರಿಯದವರು ತಮಗೆ ತೋರಿದಂತೆ ಸೂತ್ರಗಳನ್ನು ಜಗ್ಗಿ ಎಳೆದಾಡಿ ಅರ್ಥ ಹೇಳುತ್ತಾರೆ. ಮಿಥ್ಯಾಪಾಂಡಿತ್ಯದಿಂದ ಗರ್ವಿತರಾದ ಜನರು ಇವರು (65). ಆದ್ದರಿಂದ, ಶಂಕರ, ಈ ಶಾರೀರಕಸೂತ್ರಗಳಿಗೆ

ಶಾರೀರಕೀಯಸೂತ್ರಾಣಾಂ ಬಾದರಾಯಣಸಂಮತಮ್ ।
ವಿಸ್ತರೇಣ ತ್ವಯಾ ಭಾಷ್ಯಂ ಪ್ರಣೇಯಮಿತಿ ಮೇ ಮತಿಃ ॥ 66

ಗೀತೋಪನಿಷದಾಂ ಚಾಪಿ ಮಾಂಡೂಕ್ಯಾನಾಂ ವಿಶೇಷತಃ ।
ಭಾಷ್ಯಾಣಿ ರಚನೀಯಾನಿ ಯತ್ರಾದ್ವೈತಂ ಪ್ರತಿಷ್ಠಿತಮ್ ॥ 67

ಪ್ರಸ್ಥಾನತ್ರಯಮೇತದ್ಧಿ ಭಕ್ತ್ಯುಪಾಸನಕರ್ಮಣಾಮ್ ।
ಯಾಥಾತಥ್ಯೇನ ಯತ್ರಾಸ್ತೇ ಬ್ರಹ್ಮಜ್ಞಾನೋಪಯೋಗಿತಾ ॥ 68

ತರುಣೋಽಸಿ ಸಮರ್ಥೋಽಸಿ ಬುದ್ಧಿಮಾನಸಿ ಶಂಕರ ।
ಭಾಷ್ಯಾಣಿ ವಿರಚಯ್ಯೈವಂ ತತ್ತ್ವಸಂರಕ್ಷಕೋ ಭವ ॥ 69

ಮಂಗಲಂ ವಿತರತ್ವೀಶೋ ಮಂಗಲಂ ತೇ ಗುರುರ್ಮಮ ।
ಅಹಂ ಮಂಗಲಮಾಶಾಸೇ ತವ ಸ್ಯಾತ್ ಸರ್ವಮಂಗಲಮ್ ॥ 70

ಇತ್ಯುದೀರಿತಮಾಕರ್ಣ್ಯ ಶ್ರೀಗೋವಿಂದಯತೀಶ್ವರೈಃ ।
ಗುರುಕಾರುಣ್ಯಸಂಹೃಷ್ಟೋ ಬಾಷ್ಪಪೂರ್ಣೇಕ್ಷಣೋಽಭವತ್ ॥ 71

ನೀನೊಂದು ಭಾಷ್ಯವನ್ನು ರಚಿಸಬೇಕು. ಅದು ಬಾದರಾಯಣ ಸಂಮತ ವಾದ ಅರ್ಥವನ್ನು ವಿಸ್ತಾರವಾಗಿ ಪ್ರತಿಪಾದಿಸುತ್ತಿರಲಿ– ಎಂದು ನನ್ನ ಅಭಿಪ್ರಾಯ (66). ಅಲ್ಲದೆ ಅದ್ವೈತವನ್ನು ಪ್ರತಿಪಾದಿಸುತ್ತಿರುವ ಭಗವದ್ಗೀತೆಗೂ ಉಪನಿಷತ್ತುಗಳಿಗೂ – ವಿಶೇಷ ವಾಗಿ ಮಾಂಡೂಕ್ಯೋಪನಿಷತ್ತಿಗೆ ನೀನು ಭಾಷ್ಯಗಳನ್ನು ರಚಿಸಬೇಕು. (67). ಭಗವದ್ಗೀತೆ, ಉಪನಿಷತ್ತು, ಶಾರೀರಕ ಸೂತ್ರ – ಇವು ಮೂರು ಪ್ರಸ್ಥಾನತ್ರಯವೆಂದು ಪ್ರಸಿದ್ಧವಾಗಿದೆಯಷ್ಟೆ. ಇವುಗಳಲ್ಲಿ ಸರ್ವತ್ರ ಅದ್ವಯಬ್ರಹ್ಮದ ಪ್ರತಿಪಾದನೆಯಿದೆ. ಆತ್ಮಜ್ಞಾನಕ್ಕೆ ಭಕ್ತಿ, ಉಪಾಸನೆ, ಕರ್ಮಗಳು ಯಾವರೀತಿಯಲ್ಲಿ ಉಪಯುಕ್ತವಾಗುತ್ತವೆ, ಇವುಗಳ ಸ್ಥಾನವೇನು? – ಎಂಬುದು ಈ ಪ್ರಸ್ಥಾನತ್ರಯದಲ್ಲಿ ವ್ಯವಸ್ಥಿತವಾಗಿದೆ (68). ಶಂಕರ, ನೀನು ಯುವಕನಾಗಿದ್ದೀಯೆ. ಕಾರ್ಯ ದಕ್ಷನಾಗಿದ್ದೀಯೆ. ಬುದ್ಧಿಶಾಲಿಯಾಗಿದ್ದೀಯೆ. ಈ ಪ್ರಕಾರದಲ್ಲಿ ಭಾಷ್ಯಗಳನ್ನು ರಚಿಸಿ, ವತ್ಸ , ವೇದಾಂತ ತತ್ತ್ವದ ಸಂರಕ್ಷಕನಾಗು (69). ಪರಮಾತ್ಮನು ನಿನಗೆ ಮಂಗಳವನ್ನೀಯಲಿ. ನನ್ನ ಗುರುಗಳು ನಿನಗೆ ಮಂಗಳವನ್ನುಂಟು ಮಾಡಲಿ. ನಾನು ನಿನಗೆ ಮಂಗಳವಾಗಲೆಂದು ಹರಸುತ್ತೇನೆ. ಶಂಕರ, ಸರ್ವತೋಭದ್ರವಾದ ಮಂಗಳವು ನಿನಗಾಗಲಿ!'' ಎಂದರು (70).

ಶ್ರೀ ಗೋವಿಂದ ಭಗವತ್ಪಾದರು ಈ ಪ್ರಕಾರವಾಗಿ ನುಡಿದುದನ್ನು ಕೇಳಿ, ಗುರುಕಾರುಣ್ಯದಿಂದ ಹರ್ಷಿತರಾದ ಶ್ರೀ ಶಂಕರರ ಕಣ್ಣುಗಳಲ್ಲಿ ಆನಂದ ಬಾಷ್ಪವು

ಶಿರಸ್ಯಂಜಲಿಮಾಧಾಯ ಭಕ್ತ್ಯಾ ಶ್ರೀಶಂಕರೋ ಯತಿಃ ।
ಪ್ರದಕ್ಷಿಣತ್ರಯಂ ಕೃತ್ವಾ ಪಾದಯೋರ್ನ್ಯಪತದ್ ಗುರೋಃ ॥ 72

ಆಶೀರ್ಭಿಃ ಸಹ ಗುರ್ವಾಜ್ಞಾಂ ಲಬ್ಧ್ವಾ ಗುರುಮನುಸ್ಮರನ್ ।
ಕಾಶೀಕ್ಷೇತ್ರಮನಾ ಧೈರ್ಯಾತ್ ನಿರ್ಜಗಾಮ ತದಾಶ್ರಮಾತ್ ॥ 73

ವಾರಾಣಸೀಮಸೌ ಗತ್ವಾ ವಿದ್ವದ್ಭಿಃ ಸಹ ಸಂಗತಃ ।
ಅಚಿರಾದಭಿತಸ್ತಸ್ಯ ಪ್ರಾಸರತ್ ಕೀರ್ತಿಕೌಮುದೀ ॥ 74

ತಯಾ ಚ ಹರ್ಷಿತಃ ಕಶ್ಚಿದ್ ದ್ವಿಜಶ್ಚೋಲಸಮುದ್ಭವಃ ।
ಚಕೋರ ಇವ ಸಂಪ್ರಾಪ್ತಃ ಶ್ರೋತ್ರಿಯೋ ಮಾರ್ಗಯನ್ ಗುರುಮ್ ॥ 75

ಸನಂದನಾಭಿಧೋ ವಿದ್ವಾನ್ ನತ್ವಾ ಶ್ರೀಶಂಕರಂ ಗುರುಮ್ ।
ಸಂನ್ಯಾಸೇ ದೀಕ್ಷಿತಃ ಪಶ್ಚಾತ್ ಪದ್ಮಪಾದಾಭಿಧಾಂ ದಧೌ ॥ 76

ಅನ್ಯೇ ಚ ಬಹವಃ ಶಿಷ್ಯಾ ವೇದಾಂತಮಧುಲೋಲುಪಾಃ ।
ಶ್ರೀಶಂಕರಪದಾಂಭೋಜಂ ಮಧುಪಾ ಇವ ಶಿಶ್ರಿಯುಃ ॥ 77

ಉಕ್ಕಿಬಂದಿತು (71). ಅವರು ಎರಡು ಕೈಗಳನ್ನು ಮುಗಿದು ಅಂಜಲಿಯನ್ನು ಶಿರಸ್ಸಿನ ಮೇಲಿಟ್ಟುಕೊಂಡು ಭಕ್ತಿಯಿಂದ ತಮ್ಮ ಗುರುಗಳಿಗೆ ಮೂರು ಸಲ ಪ್ರದಕ್ಷಿಣೆ ಮಾಡಿ ಗುರು ಪಾದಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು (72) ಅನಂತರ ಗುರುಗಳ ಆಶೀರ್ವಾದ ದೊಡನೆ ಅವರ ಆಜ್ಞೆಯನ್ನು ಪಡೆದು, ಕಾಶೀಕ್ಷೇತ್ರಕ್ಕೆ ಹೋಗಲು ಮನಸ್ಸು ಮಾಡಿ, ಧೈರ್ಯವನ್ನವಲಂಬಿಸಿ, ಗುರುಗಳನ್ನು ಧ್ಯಾನಿಸುತ್ತ ಅವರ ಆಶ್ರಮದಿಂದ ಹೊರಟರು (73). ಅವರು ಕಾಶೀಕ್ಷೇತ್ರಕ್ಕೆ ಹೋಗಿ ಅಲ್ಲಿರುವ ವಿದ್ವಾಂಸರೊಡನೆ ಕೂಡಿ ಅವರ ಪರಿಚಯ ಮಾಡಿ ಕೊಂಡರು. ಶೀಘ್ರದಲ್ಲಿಯೇ ಶ್ರೀ ಶಂಕರ ಯತಿಗಳ ಪಾಂಡಿತ್ಯದ ಕೀರ್ತಿಚಂದ್ರಿಕೆಯು ಸರ್ವತ್ರ ಹರಡಿತು (74). ಆ ಚಂದ್ರಿಕೆಯನ್ನು ಕುಡಿದು ಚಕೋರ ಪಕ್ಷಿಯಂತೆ ಹರ್ಷಗೊಂಡ ಚೋಲದೇಶೀಯನಾದ ಒಬ್ಬ ಶ್ರೋತ್ರಿಯ ದ್ವಿಜನು[1] ಗುರುವನ್ನು ಹುಡುಕುತ್ತ ಕಾಶಿಗೆ ಬಂದನು. ಆತನು ಸನಂದನ ಎಂಬ ಹೆಸರಿನ ಒಬ್ಬ ವಿದ್ವಾಂಸ. ಆತನು ಶ್ರೀಶಂಕರಯತಿಗಳನ್ನು ಕಂಡು ಗುರು ಭಾವನೆಯಿಂದ ನಮಸ್ಕರಿಸಿದನು. ಅನಂತರ ಶ್ರೀಶಂಕರಯತಿಗಳಿಂದ ಸಂನ್ಯಾಸ ದೀಕ್ಷೆಯನ್ನು ಪಡೆದು ಪದ್ಮಪಾದನೆಂದು ದೀಕ್ಷಾನಾಮವನ್ನು ಧರಿಸಿದನು (75–76). ಆಮೇಲೆ ವೇದಾಂತವೆಂಬ ಮಕರಂದಕ್ಕಾಗಿ ಆಸೆಪಡುತ್ತಿದ್ದ ಅನೇಕ ಜನರು ಶ್ರೀ ಶಂಕರಯತಿ ಗಳ ಶಿಷ್ಯರಾಗಿ, ಅವರ ಪಾದಕಮಲಗಳನ್ನು ದುಂಬಿಗಳಂತೆ ಸೇವಿಸತೊಡಗಿದರು (77). ಬ್ರಹ್ಮಜ್ಞಾನಿಗಳಾದ ಶ್ರೀಶಂಕರಯತೀಂದ್ರರು ಒಂದು ದಿನ ಮಾಧ್ಯಾಹ್ನಿಕವನ್ನಾಚರಿಸು

1. ದ್ವಿಜ = ಬ್ರಾಹ್ಮಣ; ಪಕ್ಷಿ

ಮಾಧ್ಯಾಹ್ನಿಕಮನುಷ್ಠಾತುಂ ಕದಾಚಿಜ್ಜಾಹ್ನವೀಂ ನದೀಮ್ ।
ಶಿಷ್ಯೈಃ ಸಹ ಯತೀಂದ್ರೋಽಸೌ ಪ್ರಸ್ಥಿತೋ ಬ್ರಹ್ಮವಿದ್ವರಃ ॥ 78

ಮಾರ್ಗೇ ಚಂಡಾಲರೂಪೇಣ ಶ್ವಭಿಃ ಶರ್ವಮುಪಸ್ಥಿತಮ್ ।
ದೃಷ್ಟ್ವಾ ಶ್ರೀಶಂಕರೇಣೋಕ್ತಂ ದೂರತೋ ಗಮ್ಯತಾಮಿತಿ ॥ 79

ಪಪ್ರಚ್ಛ ಸ ತದಾ ಸ್ಮಿತ್ವಾ ಬ್ರಹ್ಮನ್ ಕೇನಾದ್ಯ ಗಮ್ಯತಾಮ್ ।
ಬ್ರಹ್ಮಣಾ ನಿಷ್ಕ್ರಿಯೇಣಾಹೋ ದೇಹೇನಾಥ ಜಡೇನ ವಾ ॥ 80

ಇತ್ಯೇವಂ ವಾಕ್‌ಛಲೇ ವೃತ್ತೇ ಚಂಡಾಲಂ ಜ್ಞಾನಿನಾಂ ವರಮ್ ।
ಜ್ಞಾತ್ವಾ ತತ್ರೈವ ಯತಿರಾಟ್ ಮನೀಷಾಪಂಚಕಂ ಜಗೌ ॥ 81

ದರ್ಶಯಿತ್ವಾ ಪ್ರಸನ್ನಃ ಸ್ವಂ ದಿವ್ಯರೂಪಂ ಮಹೇಶ್ವರಃ ।
ಅಂತರ್ದಧೇ ಯತೀಶಸ್ತು ಚಕಿತೋ ಜಾಹ್ನವೀಂ ಯಯೌ ॥ 82

ಸಶಿಷ್ಯೋ ಬದರೀಂ ಗತ್ವಾ ಮುನಿಭಿರ್ಯೋಗಿಭಿಃ ಸಹ ।
ಆಚಾರ್ಯೋ ವಿಮೃಶನ್ ಶಾಸ್ತ್ರಂ ಬ್ರಹ್ಮಧ್ಯಾನಪರೋಽಭವತ್ ॥ 83

ಮದಕ್ಕಾಗಿ ಶಿಷ್ಯರೊಡನೆ ಗಂಗಾನದಿಗೆ ಹೋಗುತ್ತಿದ್ದರು. ದಾರಿಯಲ್ಲಿ ಪರಮೇಶ್ವರನು ಚಂಡಾಲವೇಷವನ್ನು ಧರಿಸಿ (ನಾಲ್ಕು) ನಾಯಿಗಳನ್ನು ಹಿಡಿದುಕೊಂಡು ಎದುರಿಗೆ ಬಂದನು. ಶ್ರೀಶಂಕರಯತೀಂದ್ರರು ಅವನಿಗೆ 'ದೂರಕ್ಕೆ ಸರಿ' ಎಂದರು (78–79). ಆಗ ಚಂಡಾಲನು ನಗುತ್ತ "ಓ ಬ್ರಾಹ್ಮಣೋತ್ತಮ, ಈಗ ಯಾರು ಸರಿಯಬೇಕು? ನಿಷ್ಕ್ರಿಯವಾದ ಬ್ರಹ್ಮವು ಸರಿಯಬೇಕೊ? ಅಥವಾ ಜಡವಾದ ದೇಹವೊ?" ಎಂದು ಕೇಳಿದನು! (80).

ಈ ರೀತಿಯಾಗಿ ಸ್ವಲ್ಪಹೊತ್ತು ವಾಗ್ವಾದವು ನಡೆಯಲಾಗಿ, ಆ ಚಂಡಾಲನು ಬ್ರಹ್ಮಜ್ಞಾನಿಯೆಂದರಿತು ಶ್ರೀ ಶಂಕರಯತೀಶ್ವರರು ಅಲ್ಲಿಯೇ ಮನೀಷಾ[2] ಪಂಚಕವನ್ನು ರಚಿಸಿ ಹೇಳಿದರು (81). ಆಗ (ಚಂಡಾಲವೇಷದಲ್ಲಿ ಬಂದಿದ್ದ) ವಿಶ್ವನಾಥ ಸ್ವಾಮಿಯು ಪ್ರಸನ್ನನಾಗಿ ತನ್ನ ದಿವ್ಯರೂಪವನ್ನು ತೋರಿಸಿ ಅಂತರ್ಧಾನವನ್ನೈದಿದನು. ಅಚ್ಚರಿಗೊಂಡ ಆಚಾರ್ಯರು ಶಿಷ್ಯರೊಡನೆ ಗಂಗಾನದಿಗೆ ತೆರಳಿದರು (82). ಆಮೇಲೆ ಆಚಾರ್ಯರು ಶಿಷ್ಯಸಹಿತರಾಗಿ ಬದರಿಗೆ ಪ್ರಯಾಣಮಾಡಿ ಅಲ್ಲಿದ್ದ ಮುನಿಗಳೊಡನೆಯೂ ಯೋಗಿಗಳೊಡನೆಯೂ ಶಾಸ್ತ್ರ ವಿಚಾರಗಳನ್ನು ಚರ್ಚಿಸುತ್ತ ಬ್ರಹ್ಮಧ್ಯಾನದಲ್ಲಿ ನಿರತರಾಗಿದ್ದರು (83). ಅನಂತರ ಶ್ರೀ

---

2. "ಚಂಡಾಲೋಽಸ್ತು ಸ ತು ದ್ವಿಜೋಽಸ್ತು ಗುರುರಿತ್ಯೇಷಾ ಮನೀಷಾ ಮಮ" ಎಂದು ಮುಗಿಯುವ ಶ್ಲೋಕಗಳು.

ಅಥ ಶ್ರೀಶಂಕರಾಚಾರ್ಯೋ ಗುರುಂ ಧ್ಯಾತ್ವಾ ಸಮಾಹಿತಃ ।
ಬಾದರಾಯಣಸೂತ್ರಾಣಿ ವ್ಯಾಚಖ್ಯೌ ಲಲಿತೈಃ ಪದೈಃ ॥ 84

ಅರ್ಥಾನುಸಾರಿಭಿಃ ಶಬ್ದೈರರ್ಥೈಃ ಶಬ್ದಾನುಸಾರಿಭಿಃ ।
ಸುವರ್ಣಸೂತ್ರಸಂದೃಬ್ಧಂ ಮುಕ್ತಾಹಾರಮಿವೋಜ್ಜ್ವಲಮ್ ॥ 85

ವ್ಯೂಢದೃಷ್ಟಾಂತಯುಕ್ತ್ಯಾಢ್ಯಂ ಗೂಢಸೂತ್ರಾರ್ಥದೀಪಕಮ್ ।
ಪ್ರೌಢಕಾವ್ಯವಚೋರಮ್ಯಂ ಗಾಢಾಜ್ಞಾನತಮೋನುದಮ್ ॥ 86

ಕ್ವಚಿತ್ ಕ್ಷುಬ್ಧಾಬ್ಧಿಸಂಕಾಶಂ ಕ್ವಚಿದ್ಭಾಸ್ವತ್ಸಮುಜ್ಜ್ವಲಮ್ ।
ದ್ವೈತವಿಧ್ವಂಸನೋದ್ದಂಡಂ ಸಾಂಖ್ಯಾದಿಮತಖಂಡನಮ್ ॥ 87

ಮಂಡನಂ ಛಂದಸಾಂ ಭೂಯೋ ವಿದ್ವಜ್ಜನತಪಃಫಲಮ್ ।
ಗಂಗಾವಾರಿಸಮಂ ಶುದ್ಧಂ ಶಾಂತಂ ಚಿತ್ತಮೃಷೇರಿವ ॥ 88

ವಾಚಸ್ಪತಿಶಿರೋಧಾರ್ಯಂ ಸರಸ್ವತ್ಯಾ ನಿಕೇತನಮ್ ।
ಭಾಷಾಶೈಲ್ಯಾ ಉದಾಹಾರ್ಯಂ ಗ್ರಾಹ್ಯಂ ಸರ್ವಮುಮುಕ್ಷುಭಿಃ ॥ 89

ಶಂಕರಾಚಾರ್ಯರು ತಮ್ಮ ಗುರುಗಳನ್ನು ಧ್ಯಾನಿಸಿ ಏಕಾಗ್ರಚಿತ್ತರಾಗಿ ಬಾದರಾಯಣ ಋಷಿಗಳ ಶಾರೀರಕ ಸೂತ್ರಗಳಿಗೆ ಲಲಿತವಾದ ಶಬ್ದಗಳನ್ನು ಬಳಸಿ ಭಾಷ್ಯವನ್ನು ರಚಿಸಿದರು (84). ರಚಿಸಿದ ಭಾಷ್ಯವು ಹೇಗಿತ್ತೆಂದರೆ – ಅರ್ಥಾನುಸಾರಿಯಾದ ಶಬ್ದಗಳು, ಶಬ್ದಾನುಸಾರಿಯಾದ ಅರ್ಥಗಳು (ಒಂದು ಶಬ್ದವೂ ಹೆಚ್ಚಿಲ್ಲ, ಕಡಮೆಯಿಲ್ಲ). ಚಿನ್ನದ ಎಳೆಗಳಲ್ಲಿ ಮುತ್ತುಗಳನ್ನು ಪೋಣಿಸಿ ರಚಿಸಿದ ಮುತ್ತಿನ ಸರದಂತೆ ರಂಜಿಸುತ್ತಿತ್ತು (85). ಆ ಸೂತ್ರಭಾಷ್ಯವು ಆರಿಸಿ ತೆಗೆದು ಜೋಡಿಸಿದ ದೃಷ್ಟಾಂತ ಗಳಿಂದಲೂ ಯುಕ್ತಿಗಳಿಂದಲೂ ಪುಷ್ಟವಾದದ್ದು. ಶಾರೀರಕ ಸೂತ್ರಗಳಲ್ಲಿರುವ ರಹಸ್ಯಾರ್ಥ ಗಳನ್ನು ಬೆಳಗಿಸತಕ್ಕದ್ದು. ಉತ್ತಮಕಾವ್ಯದಂತೆ ರಮಣೀಯ ವಾದದ್ದು. ಗಾಢವಾದ ಅಜ್ಞಾನವೆಂಬ ಕತ್ತಲೆಯನ್ನು ತೊಡೆದು ಹಾಕತಕ್ಕದ್ದು (86). ಕೆಲವೆಡೆ ಯಲ್ಲಿ (ವಾದ ಕೋಲಾಹಲದಿಂದ) ಕ್ಷೋಭೆಗೊಂಡ ಸಮುದ್ರದಂತೆ ಕಾಣಿಸುತ್ತಿತ್ತು. ಕೆಲವೆಡೆ ಯಲ್ಲಿ ತತ್ತ್ವಾರ್ಥವನ್ನು ಬೆಳಗಿಸುತ್ತ ಸೂರ್ಯನಂತೆ ಉಜ್ಜ್ವಲವಾಗಿತ್ತು. ದ್ವೈತವನ್ನು ವಿಧ್ವಂಸ ಗೊಳಿಸುವುದರಲ್ಲಿ ದಕ್ಷವಾದದ್ದು. ಸಾಂಖ್ಯಾದಿ ದರ್ಶನಗಳನ್ನು ಖಂಡಿಸತಕ್ಕದ್ದು (87). ಶ್ರುತಿ ಗಳಿಗೆ ಭೂಷಣ. ಬಹುಮಂದಿ ವಿದ್ವಾಂಸರು ಆಚರಿಸಿದ ತಪಸ್ಸುಗಳ ಫಲ. ಗಂಗಾಜಲದಂತೆ ಪರಿಶುದ್ಧ. (ದ್ವೇಷಾಸೂಯೆಗಳಿಲ್ಲದ್ದರಿಂದ) ಋಷಿಜನರ ಚಿತ್ತದಂತೆ ಶಾಂತ (88). ದೇವ ಗುರುವಾದ ವಾಚಸ್ಪತಿಯೂ ಭಾಮತೀಕಾರನಾದ ವಾಚಸ್ಪತಿಯೂ ತಮ್ಮ ಶಿರಸ್ಸುಗಳಲ್ಲಿ ಹೊರಲು ಅರ್ಹವಾದ ಭಾಷ್ಯ. ಸರಸ್ವತಿಯು ನೆಲೆಸಿದ ವಿದ್ಯಾಭವನ. ಆ ಶಾರೀರಕಸೂತ್ರ ಭಾಷ್ಯವು ಸಂಸ್ಕೃತ ಭಾಷಾಶೈಲಿಗೆ ಯೋಗ್ಯವಾದ ಉದಾಹರಣೆ. ಮುಮುಕ್ಷುಗಳಾದವರೆಲ್ಲರೂ

ಬ್ರಹ್ಮವಿದ್ಭಿಃ ಪರಂ ಧ್ಯೇಯಂ ಪೇಯಂ ಶಾಸ್ತ್ರಾರ್ಥಕೋವಿದೈಃ ।
ಸಂಪ್ರದಾಯಕ್ರಮಾರೂಢಂ ಸರ್ವಶಿಷ್ಟ ಪುರಸ್ಕೃತಮ್ ॥ 90

ಅದ್ವಯಂ ಪರಮಂ ಸತ್ಯಂ ಬ್ರಹ್ಮ ಯತ್ರ ಪ್ರಕಾಶಿತಮ್ ।
ತದ್ ಬಭಾಷೇ ಗುರುರ್ಭಾಷ್ಯಂ ಶಂಕರೋ ಲೋಕಶಂಕರಃ ॥ 91

ತತಃ ಶ್ರೀಭಗವತ್ಪಾದೋ ಗೀತೋಪನಿಷದಾಮಪಿ ।
ಗಂಭೀರಾರ್ಥಾನಿ ಭಾಷ್ಯಾಣಿ ನಿರ್ಮಮೋ ನಿರ್ಮಮೇಶ್ವರಃ ॥ 92

ಪ್ರಸ್ಥಾನತ್ರಯಭಾಷ್ಯಾಣಿ ಪ್ರೇಕ್ಷ್ಯ ತೇ ಮುನಿಸತ್ತಮಾಃ ।
ಸಂತುಷ್ಟಿಂ ಪರಮಾಂ ಪ್ರಾಪ್ತಾಃ ಶಶಂಸುಸ್ತರುಣಂ ಯತಿಮ್ ॥ 93

ಅಹೋ ಭಾಷ್ಯಮಹೋ ಭಾಷ್ಯಮಹೋ ಭಾಗ್ಯಮಹೋ ಶ್ರುತಿಃ ।
ಇತ್ಥಂ ತತ್ರ ಮಹಾನಾಸೀತ್ ಸಂಭ್ರಮೋ ಮುನಿಸಂಸದಿ ॥ 94

ತತ್ಪ್ರಶಂಸಾಗೃಹೀತಾತ್ಮಪ್ರತ್ಯಯೋ ಯತಿರಾಟ್ ಪುನಃ ।
ವಾರಾಣಸೀಂ ಪ್ರಪೇದೇಽಸೌ ಸಶಿಷ್ಯಸ್ತೃಪ್ತಮಾನಸಃ ॥ 95

ಓದಿ ಗ್ರಹಿಸಿಕೊಳ್ಳಬೇಕಾದದ್ದು (89). ಬ್ರಹ್ಮಜ್ಞಾನಿಗಳು ವಿಶೇಷವಾಗಿ ಸ್ಮರಣೆಯಲ್ಲಿಟ್ಟುಕೊಳ್ಳಬೇಕಾದದ್ದು. ನಾನಾ ಶಾಸ್ತ್ರಗಳಲ್ಲಿ ನಿಷ್ಣಾತರಾದವರು ಸಂತೋಷದಿಂದ ಕುಡಿಯಬೇಕಾದದ್ದು. ಆಚಾರ್ಯರು ರಚಿಸಿದ ಆ ಭಾಷ್ಯವು ಗುರುಶಿಷ್ಯಸಂಪ್ರದಾಯದಿಂದ ಬಂದ ಅರ್ಥಕ್ರಮವನ್ನು ಅನುಸರಿಸಿದ್ದು. ಶಿಷ್ಟರಾದ ಎಲ್ಲ ವಿದ್ವಾಂಸರ ಮನ್ನಣೆಗೆ ಪಾತ್ರವಾದದ್ದು (90).

ಅದ್ವಯವೂ ಪರಮಸತ್ಯವೂ ಆದ ಪರಬ್ರಹ್ಮವನ್ನು ಪ್ರಕಾಶಗೊಳಿಸತಕ್ಕದ್ದು. ಇಂತಹ ಭಾಷ್ಯವನ್ನು ಲೋಕಶಂಕರರಾದ ಶ್ರೀ ಶಂಕರಗುರುಗಳು ವಿರಚಿಸಿದರು (91). ಅದಾದಮೇಲೆ ವಿರಕ್ತಶ್ರೇಷ್ಠರಾದ ಶ್ರೀಶಂಕರಭಗವತ್ಪಾದರು ಭಗವದ್ಗೀತೆಯ ಮೇಲೂ ಉಪನಿಷತ್ತುಗಳ ಮೇಲೂ ಪ್ರೌಢವಿಷಯಗಳುಳ್ಳ ಗಂಭೀರ ಶೈಲಿಯ ಭಾಷ್ಯಗಳನ್ನು ಬರೆದರು. ಹೀಗೆ ರಚಿಸಲ್ಪಟ್ಟ ಪ್ರಸ್ಥಾನತ್ರಯಭಾಷ್ಯಗಳನ್ನು ಓದಿನೋಡಿ ಬದರಿಕಾಶ್ರಮಗಳಲ್ಲಿದ್ದ ಋಷಿಗಳಿಗೆ ಪರಮಾನಂದವಾಯಿತು. ಭಾಷ್ಯಗಳನ್ನು ರಚಿಸಿದ ಈ ತರುಣಯತಿಯನ್ನು ಅವರು ತುಂಬ ಹೊಗಳಿದರು (92–93). ''ಅಹೋ ಭಾಷ್ಯವೇ! ಆಹಾ ಎಂತಹ ಭಾಷ್ಯ! ಆಹಾ ನಮ್ಮ ಭಾಗ್ಯವಿದು! ಆಹಾ ಶ್ರುತಿಯ ಮಹಿಮೆ!'' ಎಂಬ ಸಂಭ್ರಮದ ನುಡಿಗಳು ಮುನಿಸಭೆಗಳಲ್ಲಿ ಮೊಳಗಿದವು (94). ಈ ರೀತಿಯಾದ ಮಹರ್ಷಿಗಳ ಪ್ರಶಂಸೆಗಳಿಂದ ಆಚಾರ್ಯರಿಗೆ ತಮ್ಮ ಗ್ರಂಥರಚನೆಯಲ್ಲಿ ಆತ್ಮವಿಶ್ವಾಸವು ಮೂಡಿತು. ಅವರ ಮನಸ್ಸಿಗೆ ತೃಪ್ತಿಯಾಯಿತು. ಅನಂತರ ಶ್ರೀಶಂಕರಯತೀಶ್ವರರು ಶಿಷ್ಯರೊಡಗೂಡಿ ಮತ್ತೆ ವಾರಾಣಸಿಗೆ ಬಂದರು (95). ಅವರ

ದಿಗಂತ ವ್ಯಾಪ್ತಸತ್ಕೀರ್ತಿಂ ಶ್ರೀಶಂಕರಯತೀಶ್ವರಮ್ ।
ಶುಶ್ರೂಷಿತುಂ ಪುನಃ ಶಿಷ್ಯಾ ನಾನಾದೇಶೇಭ್ಯ ಆಯಯುಃ ॥ 96

ತನ್ಮಾನಸಪ್ರರೂಢಂ ಶ್ರೀಶಂಕರಾರ್ಯಪದಾಂಬುಜಮ್ ।
ಹಂಸಾ ಇವ ಪರಂ ಪ್ರೀತಾ ಯಥಾಕಾಮಂ ಸಿಷೇವಿರೇ ॥ 97

ಪುಣ್ಯೇ ಭಾಗೀರಥೀತೀರೇ ಭಾಷ್ಯಾಣಿ ಪ್ರತ್ಯಹಂ ಗುರುಃ ।
ಶಿಷ್ಯಾನಧ್ಯಾಪಯನ್ನಾಸೀತ್ ವೇದವ್ಯಾಸ ಇವಾಪರಃ ॥ 98

ತಮಾಂಸಿ ಧ್ವಂಸಯಂಸ್ತೇಷು ದ್ಯೋತಯನ್ ದರ್ಶನೇ ಗತಿಮ್ ।
ತೇಜಾಂಸಿ ಭಾಸ್ಕರೋ ಲೋಕೇಷ್ವಿವ ಸಂಕ್ರಾಮಯನ್ ಬಭೌ ॥ 99

ಪ್ರವೃತ್ತೇ ಸೂತ್ರಭಾಷ್ಯಸ್ಯ ಪಾಠನೇ ಬಾದರಾಯಣಃ ।
ವೃದ್ಧವಿಪ್ರ ಇವಾಗತ್ಯ ಶ್ರವಣೇಚ್ಛುರುಪಾವಿಶತ್ ॥ 100

ಸಂಗತ್ಯಾದಿಕಥಾಪೂರ್ವಂ ಸೂತ್ರವ್ಯಾಖ್ಯಾನಕೌಶಲಮ್ ।
ಹೃದಯೇನಾಭ್ಯನುಜ್ಞಾತಂ ಶ್ರುತ್ವಾಸೌ ಮುಮುದೇತರಾಮ್ ॥ 101

ಸತ್ಕೀರ್ತಿಯು ದಿಗಂತಗಳವರೆಗೆ ಹರಡಿತು. ಶ್ರೀಶಂಕರಭಗವತ್ಪಾದರನ್ನು ಸೇವಿಸುವುದಕ್ಕಾಗಿ ನಾನಾ ದೇಶಗಳಿಂದ ಶಿಷ್ಯರು ಬರತೊಡಗಿದರು. ಮನಸ್ಸೆಂಬ ಮಾನಸಸರಸ್ಸಿನಲ್ಲಿ ದೃಢವಾಗಿ ಬೆಳೆದು ನೆಲೆಸಿದ ಆಚಾರ್ಯರ ಪಾದಕಮಲವನ್ನು, ಶಿಷ್ಯಜನರು ಪ್ರೀತಿಯಿಂದ ತಮಗೆ ತೃಪ್ತಿಯಾಗುವಷ್ಟು ಸೇವಿಸುತ್ತಿದ್ದರು (96–97). ಪವಿತ್ರವಾದ ಭಾಗೀರಥೀತೀರದಲ್ಲಿ ಕುಳಿತು ಆಚಾರ್ಯರು ಪ್ರತಿದಿನವೂ ಶಿಷ್ಯರಿಗೆ ಪಾಠ ಮಾಡುತ್ತ ಕುಳಿತಿರುತ್ತಿದ್ದರು. ಆಗ ಅವರನ್ನು ನೋಡಿದರೆ ಇನ್ನೊಬ್ಬ ವೇದವ್ಯಾಸರೋ ಎಂಬಂತೆ ಕಾಣುತ್ತಿತ್ತು (98). ಭಾಸ್ಕರನು ತನ್ನ ತೇಜಸ್ಸನ್ನು ಲೋಕದಲ್ಲಿ ಹರಡುತ್ತಿರುವನೋ ಎಂಬಂತೆ, ಶಿಷ್ಯರ ಬುದ್ಧಿಯಲ್ಲಿರುವ ಕತ್ತಲೆಯನ್ನು ನಾಶಪಡಿಸುತ್ತ ದರ್ಶನ ಶಾಸ್ತ್ರಗಳಲ್ಲಿಯೂ ಪದಾರ್ಥ ದರ್ಶನದಲ್ಲಿಯೂ ಅವರ ಗತಿಯನ್ನು ಉಜ್ಜ್ವಲಗೊಳಿಸುತ್ತ ಆಚಾರ್ಯರು ಕಂಗೊಳಿಸುತ್ತಿದ್ದರು (99). ಹೀಗೆ ಒಂದು ದಿನ ಸೂತ್ರ ಭಾಷ್ಯದ ಅಧ್ಯಾಪನವು ನಡೆಯುತ್ತಿರುವಾಗ ಸೂತ್ರಕರ್ತರಾದ ಬಾದರಾಯಣಾಚಾರ್ಯರು ಒಬ್ಬ ವೃದ್ಧಬ್ರಾಹ್ಮಣನ ವೇಷದಲ್ಲಿ ಬಂದು ಕೇಳುತ್ತ ಕುಳಿತರು (100).

ಆಚಾರ್ಯರು ಪಾಠಮಾಡುವಾಗ ಪ್ರತಿಯೊಂದು ಅಧಿಕರಣದ ಅಥವಾ ಸೂತ್ರವಾಕ್ಯದ ಆರಂಭಕ್ಕೆ ಕಾರಣವಾದ ಸಂಗತಿಮೊದಲಾದ್ದನ್ನು ತಿಳಿಸುತ್ತಿದ್ದರು. ಅತ್ಯಂತ ಕೌಶಲದಿಂದ ವಿಶದವಾಗಿ ಗೊತ್ತಾಗುವಂತೆ ಸೂತ್ರಾರ್ಥವನ್ನು ಬಿಡಿಸಿ ವಿವರಿಸುತ್ತಿದ್ದರು. ಅದೆಲ್ಲವೂ ವೃದ್ಧ

ತೇನ ಚೋತ್ಥಾಪಿತಾಃ ಶಂಕಾಃ ಶ್ರುತಿಸೂತ್ರಾರ್ಥಯೋಜನೇ ।
ಸರ್ವಾ ಅಪಿ ಯತೀಶೇನ ಸ್ಫುಟವಾಣ್ಯಾ ಸಮಾಹಿತಾಃ ॥ 102

ಉದತಿಷ್ಠನ್ಮಹಾತೇಜಾ ವಿಪ್ರಃ ಪಿಂಗಜಟಾಧರಃ ।
ಆತ್ಮಾನಂ ದರ್ಶಯನ್ ದಂಡೀ ಧರನ್ ಕೃಷ್ಣಮೃಗತ್ವಚಮ್ ॥ 103

ಸಸಂಭ್ರಮಂ ಸಮುತ್ಥಾಯ ಸಶಿಷ್ಯಃ ಶಂಕರೋ ಯತಿಃ ।
ಬದ್ಧಾಂಜಲಿಪುಟಸ್ತಸ್ಥೌ ನೇತ್ರಾಭ್ಯಾಂ ತಂ ಪಿಬನ್ನಿವ ॥ 104

ಅಥ ವಿಸ್ಮಾಪಯನ್ ವೇದವ್ಯಾಸಃ ಪ್ರೋವಾಚ ಶಂಕರಮ್ ।
ಜ್ಯೋತ್ಸ್ನಾಮಿವ ಕಿರನ್ ದಂತಕಾಂತಿಭಿಃ ಸಸ್ಮಿತಂ ವಚಃ ॥ 105

ವತ್ಸ ತ್ವಮಭಿಜಾನೀಷೇ ಮದೀಯಂ ಗೂಢಮಾಶಯಮ್ ।
ಶಾರೀರಕೇಷು ಸೂತ್ರೇಷು, ಪ್ರಹೃಷ್ಟಂ ಹೃದಯಂ ಮಮ ॥ 106

ಬ್ರಾಹ್ಮಣನ ವೇಷದಲ್ಲಿ ಕುಳಿತಿದ್ದ ಬಾದರಾಯಣರ ಹೃದಯಕ್ಕೆ ಸಂಪೂರ್ಣ ಸಂಮತವಾಗಿತ್ತು. ಶ್ರೀಶಂಕರರ ಅಧ್ಯಾಪನವಿಧಾನವನ್ನು ಕಂಡು ಬಾದರಾಯಣಾಚಾರ್ಯರು ಸಂತೋಷದಿಂದ ಹಿಗ್ಗುತ್ತಿದ್ದರು(101). ತನ್ನ ಸಂತೋಷವನ್ನು ತೋರಗೊಡದೆ ಆ ವೃದ್ಧ ವಿಪ್ರನು ಶ್ರುತ್ಯರ್ಥ ಸೂತ್ರಾರ್ಥಗಳ ವಿಷಯದಲ್ಲಿ ಅನೇಕ ಶಂಕೆಗಳನ್ನೆತ್ತಿದನು. ಶ್ರೀಶಂಕರ ಯತಿಗಳು ಆತನ ಎಲ್ಲ ಶಂಕೆಗಳಿಗೂ ಸಮಂಜಸವಾದ ಉತ್ತರವನ್ನು ಸ್ಫುಟವಾಣಿಯಿಂದ ಹೇಳಿದರು (102). ಕಡೆಗೆ ಆ ವೃದ್ಧಬ್ರಾಹ್ಮಣನು ತಾನು ಯಾರೆಂಬುದನ್ನು ತೋರಿಸುವುದಕ್ಕಾಗಿ ಥಟ್ಟನೆ ಎದ್ದು ನಿಂತನು. ಎದ್ದುನಿಂತ ಶ್ರೀಬಾದರಾಯಣರು ಪಿಂಗಳವರ್ಣದ ಜಟೆಯನ್ನು ಧರಿಸಿ ಕೈಯಲ್ಲಿ ದಂಡವನ್ನು ಹಿಡಿದಿದ್ದರು. ಕೃಷ್ಣಮೃಗದ ಚರ್ಮವನ್ನು ಹೊದೆದು ಮಹಾತೇಜಸ್ಸಿನಿಂದ ಬೆಳಗುತ್ತಿದ್ದರು (103). ಒಡನೆಯೇ ಶ್ರೀಶಂಕರಯತಿಗಳು ಸಂಭ್ರಮದಿಂದ ಶಿಷ್ಯಸಹಿತರಾಗಿ ಎದ್ದು ಕೈಮುಗಿದುಕೊಂಡು, ಕಣ್ಣುಗಳಿಂದ ಅವರನ್ನು ಕುಡಿಯುತ್ತಿದ್ದಾರೋ ಎಂಬಂತೆ ಬಾದರಾಯಣ ರನ್ನೇ ನೋಡುತ್ತ ನಿಂತರು! (104). ಆಗ ವೇದವ್ಯಾಸ [1] ಮಹರ್ಷಿಗಳು ಎಲ್ಲರನ್ನೂ ವಿಸ್ಮಯಗೊಳಿಸುತ್ತ ತಮ್ಮ ದಂತಕಾಂತಿಗಳಿಂದ ಬೆಳದಿಂಗಳನ್ನು ಸೂಸುವರೋ ಎಂಬಂತೆ ಮುಗುಳ್ನಗೆ ಬೀರುತ್ತ ಶ್ರೀಶಂಕರರನ್ನು ಕುರಿತು ಇತೆಂದರು (105). ''ವತ್ಸ , ಶಾರೀರಕ ಸೂತ್ರಗಳಲ್ಲಿ ಗೂಢವಾಗಿರುವ ನನ್ನ ಆಶಯವನ್ನು ನೀನು ಚೆನ್ನಾಗಿ ಬಲ್ಲೆ. ನನ್ನ ಹೃದಯಕ್ಕೆ ಆನಂದವಾಯಿತು! ಯತೀಶ್ವರ, ಸರ್ವೋಪನಿಷತ್ತುಗಳ ಸಾರಸರ್ವಸ್ವವನ್ನು ನಾನು ಈ

---

1. ವೇದವ್ಯಾಸರಿಗೆ ಬಾದರಾಯಣ ಎಂಬ ಇನ್ನೊಂದು ಹೆಸರಿತ್ತು. ಬಾದರಾಯಣರು ವೇದವ್ಯಾಸರಲ್ಲ ಎಂಬ ವಾದವೂ ಇದೆ.

ಸರ್ವವೇದಾಂತಸಿದ್ಧಾಂತೋ ನಿಹಿತೋಽತ್ರ ಮಯಾ ಮುನೇ ।
ಇಮಂ ಪ್ರಸಾರ್ಯ ಲೋಕೇಽಸ್ಮಿನ್ ಸತ್ಯಸಂರಕ್ಷಕೋ ಭವ ॥ 107

ಇತ್ಯುಕ್ತ್ವಾಂತರ್ಹಿತೇ ತಸ್ಮಿನ್ ಮುನೌ ಶ್ರೀಶಂಕರಸ್ತದಾ ।
ಗುರ್ವಾಜ್ಞಾಂ ಸ್ಮಾರಿತೋ ಯೋಗೀ ಕೃತ್ಯಶೇಷಮಚಿಂತಯತ್ ॥ 108

ವಿದ್ವತ್ತಲ್ಲಜಸಾಹಾಯ್ಯಂ ಭಾಷ್ಯಪ್ರಾಚುರ್ಯಸಿದ್ಧಯೇ ।
ಅಪೇಕ್ಷ್ಯಮಿತಿ ಮನ್ವಾನಃ ಸಸ್ಮಾರ ಸ ಕುಮಾರಿಲಮ್ ॥ 109

ಭಟ್ಟಪಾದ ಇತಿ ಖ್ಯಾತಂ ಮೀಮಾಂಸಕಧುರಂಧರಮ್ ।
ತಂ ದ್ರಷ್ಟುಮುತ್ಸುಕಃ ಪ್ರಾಯಾತ್ ಪ್ರಯಾಗಂ ಶಂಕರೋ ಯತಿಃ ॥ 110

ಕುಮಾರಿಲಸ್ತು ಧರ್ಮಾತ್ಮಾ ವರ್ಷೀಯಾನ್ ಕರ್ಮಠೋ ಬುಧಃ ।
ಮತಂ ಬೌದ್ಧಗುರೋಃ ಶಿಕ್ಷಿತ್ವಾ ಗುರುದ್ರೋಹಮಮನ್ಯತ ॥ 111

ಸೂತ್ರಗಳಲ್ಲಿ ಸಂಗ್ರಹಿಸಿ ಇಟ್ಟಿದ್ದೇನೆ. ಇದನ್ನು ಲೋಕದಲ್ಲಿ ಪ್ರಚಾರಮಾಡಿ ಸತ್ಯದ ಸಂರಕ್ಷಕನಾಗು'' (106–107) ಎಂದು ನುಡಿದು ವ್ಯಾಸಮಹರ್ಷಿಗಳು ಅಂತರ್ಧಾನ ಹೊಂದಿದರು. ಆಗ ಶ್ರೀಶಂಕರಯೋಗಿಗಳಿಗೆ ತಮ್ಮ ಗುರುಗಳಾದ ಗೋವಿಂದಭಗವತ್ಪಾದರ ಆಜ್ಞೆಯು ಸ್ಮರಣೆಗೆ ಬಂದಿತು. ಮುಂದಿನ ಕರ್ತವ್ಯವನ್ನು ಸಾಧಿಸುವ ಬಗೆಯೇನೆಂದು ಅವರು ಆಲೋಚಿಸಿದರು(108). ''ಪ್ರಸ್ಥಾನತ್ರಯ ಭಾಷ್ಯಗಳನ್ನು–ಮುಖ್ಯ ವಾಗಿ ಸೂತ್ರಭಾಷ್ಯವನ್ನು ಪ್ರಚಾರಗೊಳಿಸಬೇಕು. ಅದಕ್ಕೆ ಶ್ರೇಷ್ಠರಾದ ವಿದ್ವಾಂಸರ ನೆರವು ಆವಶ್ಯಕ'' ಎಂದು ಚಿಂತಿಸುತ್ತಿರುವಾಗ ಅವರಿಗೆ ಕುಮಾರಿಲ ಭಟ್ಟರ ನೆನಪು ಬಂದಿತು (109). ಕುಮಾರಿಲ ಭಟ್ಟರಿಗೆ ಭಟ್ಟಪಾದರೆಂದು ಗೌರವದ ಖ್ಯಾತಿ ಇತ್ತು. ಅವರು ಮೀಮಾಂಸಕರಲ್ಲಿ ಅಗ್ರಗಣ್ಯರಾದ ಬಹು ದೊಡ್ಡ ವಿದ್ವಾಂಸರು. ಅವರನ್ನು ಕಾಣಬೇಕೆಂದು ಶ್ರೀಶಂಕರಯತಿಗಳು ಅವರಿದ್ದ ಪ್ರಯಾಗಕ್ಕೆ ಪ್ರಯಾಣ ಮಾಡಿದರು (110).

ಧರ್ಮಾತ್ಮರೂ ಕರ್ಮಠರೂ ಆದ ಕುಮಾರಿಲಭಟ್ಟರು ವಯೋವೃದ್ಧರಾದ ವಿದ್ವಾಂಸರು. ಅವರು ಹಿಂದೆ ಬೌದ್ಧಮತದ ರಹಸ್ಯವನ್ನು ತಿಳಿಯುವುದಕ್ಕಾಗಿ ಒಬ್ಬ ಬೌದ್ಧಗುರುವಿನ ಶಿಷ್ಯರಾಗಿದ್ದು, ಅನಂತರ ಬೌದ್ಧಮತವನ್ನು ಖಂಡಿಸಿದ್ದರು. ಅದರಿಂದ ಗುರುದ್ರೋಹವಾಯಿತೆಂದು ಆ ಧರ್ಮನಿಷ್ಠರಿಗೆ ತೋರಿತು (111). ಅದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದು ಕುಮಾರಿಲಭಟ್ಟರು ತುಷಾಗ್ನಿ[1] ಮಧ್ಯದಲ್ಲಿ ಕುಳಿತಿದ್ದರು. ಸಾಕ್ಷಾತ್

---

1. ತುಷಾಗ್ನಿಪ್ರಾಯಶ್ಚಿತ್ತ = ಬತ್ತದ ಹೊಟ್ಟಿನ ರಾಶಿಗೆ ಬೆಂಕಿಯನ್ನಿಟ್ಟು ಅದರ ನಡುವೆ ಕುಳಿತುಕೊಂಡು ಕ್ರಮವಾಗಿ ಸುಟ್ಟು ಬೆಂದು ಸಾಯುವುದು.

ತುಷಾನಲಪ್ರವಿಷ್ಟಂ ತಂ ತನ್ನಿಷ್ಕೃತಿವಿಧಿತ್ಸಯಾ ।
ದದರ್ಶ ಶಂಕರಾಚಾರ್ಯಃ ಸಾಕ್ಷಾದ್ಧರ್ಮಮಿವಾಪರಮ್ ॥ 112

ಆಚಾರ್ಯಸ್ಯಾಶಯಂ ಸರ್ವಂ ಶ್ರುತ್ವೋವಾಚ ಕುಮಾರಿಲಃ ।
ಭಗವನ್ನಾಸ್ತಿ ಮೇ ಭಾಗ್ಯಂ ತ್ವತ್ಸೇವಾಧನ್ಯತಾಭವಮ್ ॥ 113

ಅಸ್ತಿ ಮೇ ಶಿಷ್ಯಮೂರ್ಧನ್ಯೋ ವಿಶ್ವರೂಪೋ ಬಹುಶ್ರುತಃ ।
ಮಾಹಿಷ್ಮತೀಪುರೇ ವೇದಮಂಡನಃ ಪಂಡಿತೋತ್ತಮಃ ॥ 114

ಸ ಮೀಮಾಂಸಕಮೂರ್ಧನ್ಯೋ ಜಿತಶ್ಚೇತ್ ಸರ್ವಮೀಪ್ಸಿತಮ್ ।
ತವ ಸೇತ್ಸ್ಯತಿ ಕಾರ್ಯಾಣಾಂ ಸಿದ್ಧಿಸ್ತೇನ ಭವಿಷ್ಯತಿ ॥ 115

ಇತ್ಯುಕ್ತ್ವೋಪರತಂ ಶಾಂತಮಭಿನಂದ್ಯ ಯತೀಶ್ವರಃ ।
ಶೀಘ್ರಂ ಮಾಹಿಷ್ಮತೀಂ ಪ್ರಾಗಾತ್ ಸಶಿಷ್ಯಃ ಕುತುಕೀ ಭೃಶಮ್ ॥ 116

ಆಸಾದ್ಯ ತತ್ಪುರೀಂ ರಮ್ಯಾಂ ವಿಶ್ವರೂಪಂ ದದರ್ಶ ಸಃ ।
ಉಪಾಸಿತಂ ವಿಪಶ್ಚಿದ್ಭಿಃ ಶಿಷ್ಯೈಶ್ಚ ಬ್ರಹ್ಮಚಾರಿಭಿಃ ॥ 117

ಧರ್ಮಪುರುಷನೋ ಎಂಬಂತೆ ಕಾಣಿಸುತ್ತಿದ್ದ ಕುಮಾರಿಲರನ್ನು ಶ್ರೀಶಂಕರಾಚಾರ್ಯರು ವೀಕ್ಷಿಸಿದರು (112). ತಾವು ಬಂದ ಉದ್ದೇಶವನ್ನು ಆಚಾರ್ಯರು ಹೇಳಲಾಗಿ, ಅದೆಲ್ಲವನ್ನೂ ಕೇಳಿ ಕುಮಾರಿಲಭಟ್ಟರು ಹೀಗೆಂದರು: ''ಭಗವನ್, ನಿಮ್ಮ ಸೇವೆಯನ್ನು ಮಾಡಿ ಧನ್ಯನಾಗುವ ಭಾಗ್ಯವು ನನಗಿಲ್ಲದೆ ಹೋಯಿತು. ಮಾಹಿಷ್ಮತೀಪುರದಲ್ಲಿ ವಿಶ್ವರೂಪನೆಂಬ ಪಂಡಿತೋತ್ತಮ ನಿದ್ದಾನೆ. ಅವನು ಬಹು ದೊಡ್ಡ ವಿದ್ವಾಂಸ. ನನ್ನ ಶಿಷ್ಯರಲ್ಲಿ ಅಗ್ರಗಣ್ಯನಾದವನು. ವೇದಗಳಿಗೆ ಭೂಷಣ ಪ್ರಾಯನಾಗಿ ವೇದಮಂಡನನೆಂದು ವಿಖ್ಯಾತನಾಗಿದ್ದಾನೆ (114). ಅವನು ಮೀಮಾಂಸಕಮೂರ್ಧನ್ಯನಾದ ಕರ್ಮಠ. ಅವನನ್ನು ನೀವು ವಾದದಲ್ಲಿ ಗೆದ್ದು ವಶಪಡಿಸಿಕೊಂಡರೆ, ನಿಮ್ಮ ಇಷ್ಟಾರ್ಥವೆಲ್ಲವೂ ಸಿದ್ಧಿಸಿದಂತೆಯೇ. ಅವನಿಂದ ನಿಮ್ಮ ಉದ್ದಿಷ್ಟಕಾರ್ಯವು ನೆರವೇರುವುದು'' (115). ಹೀಗೆ ಹೇಳಿ ಕುಮಾರಿಲಭಟ್ಟರು ಮಾತನ್ನು ನಿಲ್ಲಿಸಿ ಶಾಂತರಾದರು. ಆಚಾರ್ಯರು ಕುಮಾರಿಲರನ್ನು ಅಭಿನಂದಿಸಿ, ವಿಶ್ವರೂಪನನ್ನು ನೋಡಬೇಕೆಂಬ ಕುತೂಹಲದಿಂದ ಶಿಷ್ಯರೊಡನೆ ತ್ವರೆಯಿಂದ ಹೊರಟರು (116). ಸುಂದರವಾದ ಮಾಹಿಷ್ಮತೀನಗರಕ್ಕೆ ಹೋಗಿ ವಿಶ್ವರೂಪನನ್ನು ಕಂಡರು. ಅವನ ಸುತ್ತಲೂ ವಿದ್ವಾಂಸರೂ ಬ್ರಹ್ಮಚಾರಿಗಳಾದ ಶಿಷ್ಯರೂ ನೆರೆದಿದ್ದರು. ಆ ದ್ವಿಜೋತ್ತಮನು ಸಂಭ್ರಮದಿಂದ ಎದ್ದು ಆಚಾರ್ಯರಿಗೆ ವಂದಿಸಿದನು. ಯತೀಂದ್ರರು ಮಂದಹಾಸದೊಡನೆ ತಾವು ಬಂದ ಉದ್ದೇಶವನ್ನು ಹೇಳಿದರು (117–118). ಒಡನೆಯೇ ಆ ಪಂಡಿತೇಂದ್ರನು

ಸಸಂಭ್ರಮಮಥೋತ್ಥಾಯ ಪ್ರಣತಂ ತಂ ದ್ವಿಜೋತ್ತಮಮ್ ।
ಜಗಾದ ಸ್ವಾಗಮೋದ್ದೇಶಂ ಸ್ಮಯಮಾನೋ ಯತೀಶ್ವರಃ ॥ 118

ವಾದಂ ಶಾಸ್ತ್ರೇಷು ಸೂರೀಂದ್ರೋ ಹರ್ಷೇಣೈವಾನ್ವಮೋದತ ।
ನೋತ್ಸಹೇತ ಸಮಾಹೂತೋ ಯೋದ್ಧುಂ ಕೋ ರಣಪಂಡಿತಃ ॥ 119

ಪರೇದ್ಯುರಭವದ್ವಾದೋ ವಿಶ್ವರೂಪಯತೀಶಯೋಃ ।
ಕರ್ಮೈವ ಮೋಕ್ಷಹೇತುಃ ಸ್ಯಾತ್ ಜ್ಞಾನಮೇವೇತಿ ವಾದಿನೋಃ ॥ 120

ವಿಶ್ವರೂಪಸ್ಯ ಭಾರ್ಯಾಭೂನ್ಮಧ್ಯಸ್ಥಾ ಬುಧಸಂಸದಿ ।
ಭಾರತೀ ಭಾರತೀ ಸಾಕ್ಷಾತ್ ಸರ್ವಶಾಸ್ತ್ರೇಷು ಪಾರಗಾ॥ 121

ವಾದಯುದ್ಧಂ ಸಮಾರಬ್ಧಂ ಪರಸ್ಪರಜಿಗೀಷಯಾ ।
ನಖದಂಷ್ಟ್ರಾಸಮಾನಾಭಿರ್ಯುಕ್ತಿಭಿಃ ಸೂರಿಸಿಂಹಯೋಃ ॥ 122

ಅಪೂರ್ವಾಮಶ್ರುತಾಂ ದೃಷ್ಟ್ವಾ ತಯೋಃ ಪಾಂಡಿತ್ಯವೈಖರೀಮ್ ।
ವ್ಯಸ್ಮಯಂತ ಸರೋಮಾಂಚಾಃ ಸಮವೇತಾ ವಿಪಶ್ಚಿತಃ ॥ 123

ಶಾಸ್ತ್ರಗಳಲ್ಲಿ ವಾದಮಾಡಬೇಕೆಂಬ ಆಹ್ವಾನವನ್ನು ಸಂತೋಷದಿಂದ ಅಂಗೀಕರಿಸಿದನು. ಯುದ್ಧಕ್ಕೆ ಆಹ್ವಾನಿಸಿದಾಗ ರಣಪಂಡಿತನಾದ ಯಾವ ವೀರನು ಉತ್ಸಾಹದಿಂದ ನುಗ್ಗಿ ಬರದೇ ಇದ್ದಾನು? (119) ಮಾರನೆಯ ದಿನವೇ ಅವರಿಬ್ಬರಿಗೂ ವಾದವು ಆರಂಭವಾಯಿತು. ಕರ್ಮವೇ ಮೋಕ್ಷಕ್ಕೆ ಕಾರಣವೆಂದು ವಿಶ್ವರೂಪನ ಪಕ್ಷ. ಜ್ಞಾನವೇ ಮೋಕ್ಷಕ್ಕೆ ಕಾರಣವೆಂದು ಶ್ರೀಶಂಕರರ ಪಕ್ಷ (120).

ವಿಶ್ವರೂಪನಿಗೆ ಸರ್ವಶಾಸ್ತ್ರಗಳಲ್ಲಿ ಪಾರಂಗತಳಾದ ಉಭಯಭಾರತಿಯೆಂಬ ಪತ್ನಿ ಇದ್ದಳು. ಸಾಕ್ಷಾತ್ ಸರಸ್ವತೀದೇವಿಯಂತಿದ್ದ ಅವಳು ಈ ವಿದ್ವಾಂಸರ ವಾದಗೋಷ್ಠಿಯಲ್ಲಿ ಮಧ್ಯಸ್ಥಳಾದಳು (121). ಶ್ರೀಶಂಕರಾಚಾರ್ಯ–ವಿಶ್ವರೂಪ ಎಂಬ ಇಬ್ಬರು ವಿದ್ವತ್ ಸಿಂಹಗಳಿಗೆ ಒಬ್ಬರನ್ನೊಬ್ಬರು ಗೆಲ್ಲಬೇಕೆಂಬ ಇಚ್ಛೆಯಿಂದ ವಾದಯುದ್ಧವು ತೊಡಗಿತು. ಆ ಯುದ್ಧದಲ್ಲಿ ಉಗುರು–ಕೋರೆ ಹಲ್ಲುಗಳಂತಿದ್ದ ಯುಕ್ತಿಗಳೇ ಇಬ್ಬರಿಗೂ ಆಯುಧಗಳು (122). ಆ ವಿದ್ವದ್‌ಗೋಷ್ಠಿಯಲ್ಲಿ ಅನೇಕ ವಿದ್ವಾಂಸರು ಶ್ರೋತೃಗಳಾಗಿ ಬಂದು ಕುಳಿತಿದ್ದರು. ಶ್ರೀಶಂಕರ–ವಿಶ್ವರೂಪರು ಪ್ರದರ್ಶಿಸುತ್ತಿದ್ದ ಅಪೂರ್ವವಾದ ಪಾಂಡಿತ್ಯವೈಖರಿಯನ್ನು ಆ ಸಭಾಸದರು ಹಿಂದೆ ಕಂಡಿರಲಿಲ್ಲ, ಕೇಳಿರಲಿಲ್ಲ. ಅವರು ರೋಮಾಂಚಿತರಾಗಿ ವಾದ–ಪ್ರತಿವಾದಗಳನ್ನು ಕೇಳುತ್ತ ಆಶ್ಚರ್ಯಪಡುತ್ತಿದ್ದರು (123).

ವಾದಃ ಪ್ರವವೃತೇ ಕಾಂಶ್ಚಿದ್ದಿವಸಾನ್ ಸತತಂ ತಯೋಃ ।
ಅಕ್ಷಯ್ಯೈರ್ಯುಕ್ತಿಸಂಘಾತೈ ರಕ್ಷಣೈರ್ವಿಶಿಖೈರಿವ ॥ 124

ವ್ಯವರ್ಧತ ಯತೀಶಸ್ಯ ಪ್ರಭಾ ಬಾಲರವೇರಿವ ।
ಅಕ್ಷೀಯತ ಪ್ರವೃದ್ಧಸ್ಯ ಮಂಡನಸ್ಯ ರವೇರಿವ ॥ 125

ಆದ್ಯೇಽಭಿಯೋಗಸಾಮರ್ಥ್ಯಂ ದ್ವಿತೀಯೇ ರಕ್ಷಣಾತ್ಮಕಮ್ ।
ಮಂಡನಸ್ಯ ತೃತೀಯೇಽಹ್ನಿ ಸರ್ವಂ ಖರ್ವಮಜಾಯತ ॥ 126

ಜಿತೋಽಸ್ಮೀತ್ಯಬ್ರವೀದಂತೇ ನಿಸ್ತೇಜಾ ಮಂಡನಃ ಸುಧೀಃ ।
ಓಮಿತಿ ಪ್ರತಿದಧ್ವಾನ ಧ್ವಾನೋಽಸೌ ಭಾರತೀರಿತಃ ॥ 127

ಪತ್ಯುಃ ಪರಾಜಯಾತ್ ಖಿನ್ನಾ ವಿದುಷ್ಯುಭಯಭಾರತೀ ।
ಅರ್ಧಾಂಗೀತ್ಯಾಹ್ವಯದ್ಧೀರಾ ವಾದಾರ್ಥಂ ಯತಿನಾಂ ವರಮ್ ॥ 128

ತತಃ ಪ್ರವವೃತೇ ವಾದೋ ವಿಸ್ತೃತೋ ವಿಸ್ಮಯಾವಹಃ ।
ಅಂತೇ ಪರಾಜಿತಾ ದೇವೀ ಪ್ರಣನಾಮ ಜಗದ್ಗುರುಮ್ ॥ 129

ಅವರಿಬ್ಬರಿಗೂ ವಾದವು ಅನೇಕ ದಿನಗಳವರೆಗೆ ನಡೆಯಿತು. ಹರಿತವಾದ ಶರಗಳಂತಿದ್ದ ಅವರ ಯುಕ್ತಿಗಳಿಗೆ ಕೊನೆಯೇ ಕಾಣಲಿಲ್ಲ. ಅನಂತರ ಶ್ರೀಶಂಕರಯತೀಂದ್ರರ ಪ್ರಭೆಯು ಬಾಲ ಸೂರ್ಯನ ಪ್ರಭೆಯಂತೆ ಏರುತ್ತ ಹೋಯಿತು. ವೇದಮಂಡನನೆನಿಸಿದ ವಿಶ್ವರೂಪನ ಪ್ರಕಾಶವು ಅಪರಾಹ್ಣದ ಮೇಲೆ ವೃದ್ಧಸೂರ್ಯನ ಪ್ರಕಾಶದಂತೆ ಕ್ಷೀಣಿಸತೊಡಗಿತು! (124–125). ಮೊದಲನೆಯ ದಿನ ವಿಶ್ವರೂಪನ ವಾದದಲ್ಲಿ ಆಕ್ರಮಣ ಸಾಮರ್ಥ್ಯವಿತ್ತು, ಎರಡನೆಯ ದಿನ ಅದು ತನ್ನ ಪಕ್ಷವನ್ನು ರಕ್ಷಿಸಿಕೊಳ್ಳುವುದರಲ್ಲಿ ಮುಗಿಯಿತು. ಮೂರನೆಯ ದಿನ ಮಂಡನನ ವಾದವೆಲ್ಲವೂ ಕುಸಿಯತೊಡಗಿತು (126). ವಿಶ್ವರೂಪನ ಮುಖದ ತೇಜಸ್ಸು ಕಡಿಮೆಯಾಗುತ್ತ ಹೋಯಿತು. ವಿವೇಕಶಾಲಿಯಾದ ಆ ವಿದ್ವಾಂಸನು ಕಡೆಯಲ್ಲಿ 'ಜಿತೋಽಸ್ಮಿ (ನಾನು ಸೋತೆನು) ಎಂದು ಸ್ಪಷ್ಟವಾಗಿ ನುಡಿದನು. ಮಧ್ಯಸ್ಥಳಾದ ಉಭಯಭಾರತಿಯು 'ಓಂ' (ಹೌದು) ಎಂದಳು. ಆ ಧ್ವನಿಯು ಸಭೆಯಲ್ಲಿ ವಿದ್ವಾಂಸರಿಂದ ಪ್ರತಿಧ್ವನಿಸಿತು (127). ವಿದುಷಿಯಾದ ಉಭಯಭಾರತಿಯು ತನ್ನ ಪತಿಗಾದ ಪರಾಜಯದಿಂದ ವಿಷಣ್ಣಳಾದಳು. ಆ ಧೀರಳು ''ನಾನು ಪತಿಯ ಅರ್ಧಾಂಗಿ. ನನ್ನನ್ನೂ ಜಯಿಸದೆ ವಾದವು ಪೂರ್ಣವಾಗದು'' ಎಂದು ಹೇಳಿ ಶ್ರೀಶಂಕರಯತೀಶ್ವರನ್ನು ವಾದಕ್ಕೆ ಕರೆದಳು! (128). ಅನಂತರ ಆಚಾರ್ಯರಿಗೂ ಉಭಯಭಾರತಿಗೂ ವಿಸ್ಮಯಕರವಾದ ದೊಡ್ಡ ವಾದವೇ ನಡೆಯಿತು. ಅಂತ್ಯದಲ್ಲಿ ಭಾರತೀ ದೇವಿಯು ಪರಾಜಿತಳಾಗಿ ಆ ಜಗದ್ಗುರುಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿದಳು (129).

ಬದ್ಧಾಂಜಲಿಪುಟಸ್ತಸ್ಥೌ ವಿಶ್ವರೂಪೋಽಥ ನಮ್ರಧೀಃ ।
ಗಿರಾ ವಿಜ್ಞಾಪಯಾಮಾಸ ಶ್ರೀಶಂಕರಯತೀಶ್ವರಮ್ ॥ 130

"ಗುರೋ ಯತೀಂದ್ರ ಸರ್ವಜ್ಞ ಪ್ರಕ್ಷೀಣಂ ಮಾಮಕಂ ತಮಃ ।
ಅದ್ವಯೇ ರಮತೇ ಚಿತ್ತಂ ಬ್ರಹ್ಮಣಿ ಧ್ವಸ್ತಕರ್ಮಣಿ ॥ 131

ವಿರಕ್ತೋಽಸ್ಮಿ ಸಮಸ್ತೇಷು ಕ್ಷೇತ್ರದಾರಗೃಹಾದಿಷು ।
ಶರಣಂ ತ್ವಾಂ ಪ್ರಪನ್ನೋಽಸ್ಮಿ ಶಿಷ್ಯಂ ಮಾಂ ಸ್ವೀಕುರು ಪ್ರಭೋ"॥ 132

ನ ವ್ಯರುಂಧ ಪತಿಂ ಸಾಧ್ವೀ ಸಂನ್ಯಾಸೇ ಕೃತನಿಶ್ಚಯಮ್ ।
ಪ್ರಾತಿಕೂಲ್ಯೇಽಪಿ ನ ಘ್ನಂತಿ ಪತ್ಯುರಿಚ್ಛಾಂ ಕುಲಸ್ತ್ರಿಯಃ ॥ 133

ವಿಧಿವತ್ ಸೋಽಥ ಸಂನ್ಯಸ್ತೋ ಮೇಘಮುಕ್ತ ಇವಾರ್ಯಮಾ ।
ಸುರೇಶ್ವರಾಭಿಧಾಂ ಪ್ರಾಪ್ತೋ ವಿರೇಜೇ ಪೂರ್ವತೋಽಧಿಕಮ್ ॥ 134

ಅಥ ಶಿಷ್ಯೈಃ ಸಹ ಪ್ರಾಪ್ತಃ ಶ್ರೀಶೈಲಂ ಶಂಕರೋ ಗುರುಃ ।
ಸ್ನಾತ್ವಾ ಪಾತಾಲಗಂಗಾಯಾಮಸ್ತಾವೀನ್ಮಲ್ಲಿಕಾರ್ಜುನಮ್ ॥ 135

ಆಮೇಲೆ ವಿಶ್ವರೂಪನು ಕೈಮುಗಿದು ನಿಂತುಕೊಂಡು ವಿನಯಪೂರ್ವಕವಾದ ವಾಣಿಯಿಂದ ಶ್ರೀಶಂಕರಯತೀಶ್ವರರಿಗೆ ಈ ರೀತಿ ವಿಜ್ಞಾಪಿಸಿಕೊಂಡನು "ಓ ಗುರುಗಳೆ, ಯತೀಂದ್ರರೆ, ನೀವು ಸರ್ವಜ್ಞರಾಗಿದ್ದೀರಿ. ನನಗೆ ಮುಸುಕಿದ್ದ ಅಜ್ಞಾನದ ಕತ್ತಲೆಯು ಹರಿಯಿತು. ಕರ್ಮಶೂನ್ಯವೂ ಅದ್ವಯವೂ ಆದ ಪರಬ್ರಹ್ಮವಸ್ತುವಿನಲ್ಲಿ ನನ್ನ ಚಿತ್ತವು ಆನಂದಿಸುತ್ತಿದೆ! (130–131). ಆಸ್ತಿ, ಮಡದಿ, ಮನೆ–ಮುಂತಾದ ಸಮಸ್ತವಸ್ತುಗಳಲ್ಲಿಯೂ ವಿರಕ್ತನಾಗಿದ್ದೇನೆ. ನಿಮಗೆ ಶರಣಾಗಿದ್ದೇನೆ. ಮಹಾತ್ಮರೆ, ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಿರಿ!" ಎಂದನು (132). ಸಂನ್ಯಾಸ ವನ್ನು ಸ್ವೀಕರಿಸಬೇಕೆಂದು ನಿಶ್ಚಯಿಸಿದ ಪತಿಯನ್ನು, ಸಾಧ್ವಿಯಾದ ಉಭಯಭಾರತಿಯು ತಡೆಯಲಿಲ್ಲ. ತಮಗೆ ಪ್ರತಿಕೂಲವಾಗಿದ್ದರೂ ಪತಿಯ ಇಚ್ಛೆಗೆ ಕುಲಸ್ತ್ರೀಯರು ಅಡ್ಡಿ ಮಾಡು ವುದಿಲ್ಲ (133). ಅನಂತರ ವಿಶ್ವರೂಪನು ವಿಧಿಪೂರ್ವಕವಾಗಿ ಶ್ರೀಶಂಕರಾಚಾರ್ಯರಿಂದ ಸಂನ್ಯಾಸವನ್ನು ಸ್ವೀಕರಿಸಿ, ಮೋಡದ ಮುಸುಕಿನಿಂದ ಹೊರಬಂದ ಭಾಸ್ಕರನಂತೆ ಪ್ರಕಾಶಿಸಿ ದನು. 'ಸುರೇಶ್ವರಾಚಾರ್ಯ' ಎಂಬ ದೀಕ್ಷಾನಾಮವನ್ನು ಪಡೆದು ಪೂರ್ವದಲ್ಲಿದ್ದುದಕ್ಕಿಂತ ಅಧಿಕ ವಾಗಿ ಪ್ರಕಾಶಿಸಿದನು (134). ಶ್ರೀಶಂಕರಗುರುವರೇಣ್ಯರು ಶ್ರೀಸುರೇಶ್ವರಾದಿ ಶಿಷ್ಯರೊಡನೆ ಮಾಹಿಷ್ಮತಿಯಿಂದ ಶ್ರೀ ಶೈಲಕ್ಕೆ ಆಗಮಿಸಿ, ಪಾತಾಳಗಂಗೆಯಲ್ಲಿ ಸ್ನಾನಮಾಡಿ ಶ್ರೀಮಲ್ಲಿಕಾರ್ಜುನ ಸ್ವಾಮಿಯೆದುರಿಗೆ ಸ್ತೋತ್ರ

ಸ್ತುವತಃ ಶಿವಮಾನಂದಾತ್ ಭಕ್ತ್ಯಾವಿಷ್ಟ ಗುರೋರ್ಮುಖಾತ್ ।
ಆನಂದಲಹರೀರೂಪಾ ನಿಃಸಸಾರ ಸರಸ್ವತೀ ॥ 136

ಉವಾಸ ತೀರೇ ಕೃಷ್ಣಾಯಾಃ ರಮ್ಯೇ ತರುಲತಾಸುಮೈಃ ।
ಕುರ್ವನ್ನಾಹ್ನಿಕಮಾಚಾರ್ಯಶ್ಚಿತ್ತಹಾರಿಣಿ ವಾರಿಣಿ ॥ 137

ಪಶ್ಯನ್ ಕಾನನಸೌಭಾಗ್ಯಂ ಧ್ಯಾಯನ್ ಸರ್ವೇಶ್ವರಂ ಶಿವಮ್ ।
ಅಧ್ಯಾಪಯಂಶ್ಚ ತಾನ್ ಶಿಷ್ಯಾನ್ ಕಂಚಿತ್ಕಾಲಂ ನಿನಾಯ ಸಃ ॥ 138

ವಾದಾರ್ಥಮುದ್ಧತಾಸ್ತತ್ರ ಪ್ರಾಪ್ತಾಃ ಕಾಪಾಲಿಕಾದಯಃ ।
ಕ್ರೂರಾಃ ಪರಾಜಿತಾಃ ಸರ್ವೇ ಗುರುಣಾ ಗುರುಯುಕ್ತಿಭಿಃ ॥ 139

ವಾದೇ ಜಿತಸ್ತು ದುರ್ಮೇಧಾಃ ಕಶ್ಚಿತ್ ಕಾಪಾಲಿಕಾಧಮಃ ।
ಮನಸಾಽಚಿಂತಯದ್ಘೋರಂ ಕರ್ಮ ಕರ್ತುಂ ಯತೀಶಿತುಃ ॥ 140

ಅನ್ಯೇದ್ಯುಶ್ಛನ್ನವೇಷೋಽಸಾವಾಗತೋ ವಿನಯೋಕ್ತಿಭಿಃ ।
ಹೋತುಂ ಭೈರವಸಂಪ್ರೀತ್ಯೈ ಯಯಾಚೇ ಶ್ರೀಗುರೋಃ ಶಿರಃ ॥ 141

ಮಾಡಿದರು. ಪರಮಭಕ್ತಿಯಿಂದ ಆವಿಷ್ಟರಾದ ಶ್ರೀಶಂಕರಾಚಾರ್ಯರು ಪರಶಿವನನ್ನು ಆನಂದದಿಂದ ಸ್ತುತಿಸುತ್ತಿರುವಾಗ ಅವರ ಮುಖದಿಂದ ವಾಣಿಯು ಶಿವಾನಂದ ಲಹರೀರೂಪವಾಗಿ ನಿರ್ಗಮಿಸಿತು (135–136). ತರುಲತಾಕುಸುಮಗಳಿಂದ ರಮ್ಯವಾದ ಕೃಷ್ಣಾನದೀತೀರದಲ್ಲಿ ಆಚಾರ್ಯರು ಸ್ವಲ್ಪಕಾಲ ತಂಗಿದರು. ಮನೋಹರವಾದ ಕೃಷ್ಣಾನದಿಯ ತಿಳಿನೀರಿನಲ್ಲಿ ಆಹ್ನಿಕವನ್ನು ನೆರವೇರಿಸುತ್ತಿದ್ದರು (137). ಸುತ್ತಲೂ ಇದ್ದ ವನದ ಸೌಂದರ್ಯವನ್ನು ನೋಡುತ್ತ, ಸರ್ವೇಶ್ವರನಾದ ಶಿವನನ್ನು ಧ್ಯಾನಿಸುತ್ತ, ಶಿಷ್ಯರಿಗೆ ಭಾಷ್ಯಪಾಠವನ್ನುಮಾಡುತ್ತ ಕೆಲವು ದಿನಗಳನ್ನು ಕಳೆದರು. ಉದ್ಧತರೂ ಕ್ರೂರಸ್ವಭಾವದವರೂ ಆದ ಕಾಪಾಲಿಕರೇ ಮೊದಲಾದ ವಾಮಮಾರ್ಗದವರು ವಾದಮಾಡುವುದಕ್ಕಾಗಿ ಬಂದರು. ಆಚಾರ್ಯರು ಪ್ರಬಲವಾದ ಯುಕ್ತಿಗಳಿಂದ ಅವರನ್ನು ಪರಾಜಯಗೊಳಿಸಿದರು. (138–139). ವಾದದಲ್ಲಿ ಪರಾಜಿತನಾದ ಒಬ್ಬ ನೀಚಕಾಪಾಲಿಕನು ಬುದ್ಧಿಗೆಟ್ಟು ಶ್ರೀಶಂಕರಯತಿಗಳನ್ನು ತೀರಿಸಿಬಿಡ ಬೇಕೆಂದು ಒಂದು ಘೋರಕರ್ಮವನ್ನು ಮಾಡಲು ಮನಸ್ಸಿನಲ್ಲಿ ಆಲೋಚಿಸಿದನು (140).

ಇನ್ನೊಂದು ದಿನ ಆತನು ತನ್ನ ವೇಷವನ್ನು ಮರೆಸಿಕೊಂಡು ಆಚಾರ್ಯರ ಬಳಿಗೆ ಬಂದು ವಿನಯೋಕ್ತಿಗಳಿಂದ ಮಾತಾಡುತ್ತ, ತಾನು ಭೈರವನ ಪ್ರೀತಿಗಾಗಿ ಒಂದು ಹೋಮವನ್ನು ಕೈಗೊಂಡಿರುವುದಾಗಿ ತಿಳಿಸಿದನು. ಆಮೇಲೆ ಹೋಮದ ಸಂಪೂರ್ತಿಗೆ ಒಬ್ಬ ಮಹಾಪುರುಷನ

ಅಂಗೀಚಕಾರ ಭಗವಾನ್ ವೈರಾಗ್ಯಸ್ಯ ಮಹಾನಿಧಿಃ ।
ದೇಹೇಽಭಿಮಾನಃ ಕಸ್ತಸ್ಯ ಯಸ್ಯೇದಂ ಕತೃಣಂ ಜಗತ್ ॥ 142

ಆತ್ಮಾರಾಮಸ್ಯ ವಿದುಷಃ ಶರೀರೇ ಕಾ ಭವೇತ್ ಸ್ಪೃಹಾ ।
ಪಯಃಪಾನೇನ ತೃಪ್ತಸ್ಯ ಕಾ ವಾಂಛಾ ಲವಣಾಂಭಸಿ ॥ 143

ಶ್ವಃ ಪ್ರಭಾತೇಽಹಮೇಕಾಕೀ ತಿಷ್ಠಾಮ್ಯತ್ರೈವ ಭೈರವ ।
ಮಮ ಶಿಷ್ಯೈರದೃಷ್ಟಸ್ತ್ವಂ ನಿಃಶಂಕಂ ಮೇ ಶಿರೋ ಹರ ॥ 144

ಇತ್ಯುಕ್ತೋ ಯೋಗಿವರ್ಯೇಣ ಭೈರವೋ ಭೈರವಸ್ವನಮ್ ।
ಹಸನ್ನಿಷ್ಟಸ್ಯ ಸಂಸಿದ್ಧಿಂ ಮನ್ವಾನೋ ದುರ್ಮತಿರ್ಯಯೌ ॥ 145

ಪರೇದ್ಯುಃ ಸರ್ವಶಿಷ್ಯೇಷು ಪ್ರಯಾತೇಷು ನದೀಂ ಪ್ರತಿ ।
ನಿರ್ವಾತದೀಪವದ್ಯೋಗೀ ಸಮಾಧಾವಚಲಃ ಸ್ಥಿತಃ ॥ 146

ನ್ಯಸ್ಯನ್ನಿತಸ್ತತೋ ದೃಷ್ಟಿಂ ನಿಃಶಬ್ದಂ ಖಡ್ಗಮುದ್ಧರನ್ ।
ಸಸರ್ಪ ಸರ್ಪವದ್ ಘೋರಃ ಖಲಃ ಕಾಪಾಲಿಕೋ ಗುರುಮ್ ॥ 147

ಶಿರಸ್ಸು ಬೇಕಾಗಿದೆಯೆಂದೂ, ಆಚಾರ್ಯರು ತಮ್ಮ ಶಿರಸ್ಸನ್ನು ಭೈರವಪ್ರೀತಿಗಾಗಿ ಕೊಡಬೇಕೆಂದೂ ಯಾಚಿಸಿದನು! (141). ವೈರಾಗ್ಯದ ಮಹಾನಿಧಿಯೇ ಆದ ಶ್ರೀಶಂಕರಯತಿಗಳು ಶಿರಸ್ಸನ್ನು ನೀಡಲು ಒಪ್ಪಿದರು. ಇಡೀ ಜಗತ್ತನ್ನೇ ಕಸದ ಕಡ್ಡಿಯೆಂದು ಭಾವಿಸಿದ ಅವರಿಗೆ ತಮ್ಮ ದೇಹದಲ್ಲಿ ಅಭಿಮಾನವಿರುತ್ತದೆಯೆ? ಹಾಲು ಕುಡಿದು ತೃಪ್ತನಾದವನಿಗೆ ಉಪ್ಪಿನ ನೀರಿನಲ್ಲಿ ಆಸೆಯೆ? (142–143). ಆಚಾರ್ಯರು ''ಭೈರವ, ನಾಳೆ ಪ್ರಾತಃಕಾಲದಲ್ಲಿ ನಾನು ಇದೇ ಸ್ಥಳದಲ್ಲಿ ಏಕಾಕಿಯಾಗಿರುವೆನು. ನನ್ನ ಶಿಷ್ಯರಿಗೆ ಕಾಣಿಸದ ಹಾಗೆ ಬಂದು ನನ್ನ ಶಿರಸ್ಸನ್ನು ಕತ್ತರಿಸಿಕೊಂಡು ಹೋಗು! ಶಂಕೆಯೇ ಬೇಡ'' ಎಂದರು (144). ಯೋಗೀಶ್ವರರಾದ ಆಚಾರ್ಯರು ಹೀಗೆ ನುಡಿಯಲಾಗಿ ದುಷ್ಟನಾದ ಭೈರವನು ತನ್ನ ಇಷ್ಟವು ಸಿದ್ಧಿಸಿತೆಂದು ತಿಳಿದು ಗಟ್ಟಿಯಾಗಿ ನಗುತ್ತ ಹೊರಟು ಹೋದನು (145). ಮಾರನೆಯ ದಿನ ಪ್ರಭಾತದಲ್ಲಿ ಶಿಷ್ಯರೆಲ್ಲರೂ ಪ್ರಾತಃಕೃತ್ಯಕ್ಕಾಗಿ ನದಿಗೆ ಹೋಗಿದ್ದರು. ಯೋಗಿಗಳಾದ ಆಚಾರ್ಯರು, ಗಾಳಿಬೀಸದ ಕಡೆ ಇರುವ ದೀಪದಂತೆ ಅಲ್ಲಾಡದೆ, ಸಮಾಧಿಯನ್ನೇರಿದರು (146). ಘೋರಕರ್ಮದ ಖಳನಾಯಕನಾದ ಆ ಕಾಪಾಲಿಕನು ಎಡಬಲಗಳನ್ನು ನೋಡುತ್ತ ಶಬ್ದವಾಗದಂತೆ ಖಡ್ಗವನ್ನು ಹಿರಿದು ಮೆಲ್ಲಗೆ ಸರ್ಪದಂತೆ ಗುರುವರೇಣ್ಯರ ಬಳಿಗೆ ನುಸುಳಿದನು (147). ದೈವವಶದಿಂದ ಆ ಹೊತ್ತಿಗೆ ಸರಿಯಾಗಿ ಪದ್ಮಪಾದರು ನದಿಯಿಂದ ಬರುತ್ತ ಭೈರವನನ್ನು ಕಂಡರು. ಒಡನೆಯೇ

ಪದ್ಮಪಾದಃ ಸಮಾಗಚ್ಛನ್ ದೈವಾತ್ತಂ ಪ್ರೇಕ್ಷ್ಯ ಸತ್ವರಮ್ ।
ನಾರಸಿಂಹೇಣ ಮಂತ್ರೇಣ ಸ್ತಂಭಯಾಮಾಸ ಭೈರವಮ್ ॥ 148

ಹಾಹಾಕಾರಸ್ತ್ವಭೂದುಚ್ಚೈಃ ಶಿಷ್ಯಾಶ್ಚ ತ್ವರಯಾಽಯಯುಃ ।
ಧಿಕ್ಕೃತೋ ಭೈರವಃ ಸರ್ವೈರ್ಲಜ್ಜಿತೋ ನಿರ್ಗತೋ ದ್ರುತಮ್ ॥ 149

ಶ್ರೀಮಚ್ಛಂಕರಯೋಗೀಂದ್ರೋ ಸಮಾಧೇರ್ವಿರತಃ ಶನೈಃ ।
ನರಸಿಂಹಸ್ತುತಿಂ ಚಕ್ರೇ ಕ್ಷಾಂತಃ ಶಾಂತಶ್ಚ ನಿರ್ಮಮಃ ॥ 150

ಶ್ರೀಶೈಲಾತ್ ಪ್ರಸ್ಥಿತೋ ಯೋಗೀ ಶಿಷ್ಯೈಃ ಪರಿವೃತಃ ಸಮೈಃ ।
ಗ್ರಾಮೀಣಾನ್ ಬೋಧಯನ್‌ಧರ್ಮಂಗೋಕರ್ಣಾಭಿಮುಖೋಯಯೌ ॥ 151

ಸ್ಥಾಪಯನ್ ವೈದಿಕಂ ಧರ್ಮಂ ಖ್ಯಾಪಯನ್ ಶಾಸ್ತ್ರಪದ್ಧತಿಮ್ ।
ಹಾಪಯನ್ ದುರ್ಮತಶ್ರದ್ಧಾಂ ಗಾಪಯನ್ ದೇವತಾಸ್ತುತಿಮ್ ॥ 152

ಪ್ರಾಪ್ಯ ಗೋಕರ್ಣಮಂಭೋಧೇಃ ಶೀತವಾತೇನ ಸೇವಿತಃ ।
ನಿನಾಯಾಹಾನಿ ಸಂತುಷ್ಟಃ ಸೇವಮಾನೋ ಮಹಾಬಲಮ್ ॥ 153

ನಾರಸಿಂಹಮಂತ್ರದಿಂದ ಭೈರವನು ಸ್ತಂಭೀಭೂತನಾಗಿ ನಿಲ್ಲುವಂತೆ ಮಾಡಿದರು (148) ದೊಡ್ಡ ಹಾಹಾಕಾರವೇ ಎದ್ದಿತು. ಶಿಷ್ಯರೆಲ್ಲರೂ ಬೇಗಬೇಗನೆ ಓಡಿ ಬಂದರು. ಎಲ್ಲರೂ ಭೈರವನನ್ನು ತರಾಟೆಗೆ ತೆಗೆದುಕೊಂಡು ಧಿಕ್ಕರಿಸಲಾಗಿ, ಭೈರವನು ಲಜ್ಜಿತನಾಗಿ ಬೇಗಬೇಗನೆ ತಪ್ಪಿಸಿಕೊಂಡು ಹೊರಟು ಹೋದನು. (149). ಇತ್ತಲಾಗಿ ಶ್ರೀಶಂಕರಯೋಗೀಂದ್ರರು ಸಮಾಧಿಯಿಂದ ಮೆಲ್ಲಗೆ ಬಾಹ್ಯಸ್ತಿತಿಗೆ ಬಂದರು. (ನಡೆದ ಸಂಗತಿಯನ್ನುಕೇಳಿ) ದೇಹದಲ್ಲಿ ಮಮತೆಯಿಲ್ಲದ ಆ ವೈರಾಗ್ಯ ಶಾಲಿಗಳು ಭೈರವನನ್ನು ಕ್ಷಮಿಸಿ ಶಾಂತರಾಗಿ ಶ್ರೀನರಸಿಂಹ ಸ್ವಾಮಿಯನ್ನು ಸ್ತುತಿಸಿದರು (150)

ಆ ಯೋಗೀಶ್ವರರು ಎಲ್ಲ ಶಿಷ್ಯರಿಂದಲೂ ಸಮೇತರಾಗಿ ಗೋಕರ್ಣಕ್ಕೆ ಅಭಿಮುಖವಾಗಿ ಹೊರಟರು. ದಾರಿಯಲ್ಲಿ ಸಿಗುವ ಹಳ್ಳಿಗಳಲ್ಲಿದ್ದ ಜನರಿಗೆ ಧರ್ಮಸ್ವರೂಪವನ್ನು ಬೋಧಿಸುತ್ತ ವೈದಿಕಧರ್ಮದ ವಿಶೇಷವನ್ನು ತಿಳಿಸಿ ಅದನ್ನು ಸ್ಥಾಪಿಸುತ್ತ, ಶಾಸ್ತ್ರಾಧ್ಯಯನದ ಪದ್ಧತಿಯನ್ನು ವಿಶದಗೊಳಿಸುತ್ತ, ದೇವತಾಸ್ತೋತ್ರಗಳನ್ನು ಹಳ್ಳಿಗರಿಂದ ಹಾಡಿಸುತ್ತಪ್ರಯಾಣ ಮಾಡಿದರು (151–152). ಆಚಾರ್ಯರು ಗೋಕರ್ಣಕ್ಷೇತ್ರವನ್ನು ಸೇರಿ ಸಮುದ್ರದ ಮೇಲೆ ಬೀಸುತ್ತ ಬರುವ ತಂಗಾಳಿಯಿಂದ ಸೇವಿತರಾಗಿ, ತಾವು ಮಹಾಬಲೇಶ್ವರನನ್ನು ಸೇವಿಸುತ್ತ ಸಂತೋಷ ದಿಂದ ಕೆಲವು ದಿನಗಳವರೆಗೆ ಅಲ್ಲಿ ಕಳೆದರು (153). ಅನಂತರ ಮೂಕಾಂಬಿಕಾಕ್ಷೇತ್ರವಾದ ಕೊಲ್ಲೂರಿಗೆ ನಿರ್ಗಮಿಸಿದರು. ಆ ಯೋಗೀಂದ್ರರು ಅರಣ್ಯಮಾರ್ಗದಲ್ಲಿ ಹೋಗುವಾಗ

ತತೋ ಮೂಕಾಂಬಿಕಾಕ್ಷೇತ್ರಂ ವನ್ಯೇನೈವ ಪಥಾ ಯಯೌ ।
ವರ್ಣಯನ್ನೈಶ್ವರೀಂ ಲೀಲಾಂ ವೀಕ್ಷ್ಯಾರಣ್ಯಸ್ಯ ವೈಭವಮ್ ॥ 154

ಮಾರ್ಗೇ ದದರ್ಶ ಯೋಗೀಂದ್ರೋ ದಂಪತೀ ಪುರತಃ ಶಿಶುಮ್ ।
ಮೃತಂ ನಿಧಾಯ ಕರುಣಂ ರುದಂತೌ ಬಂಧುಭಿರ್ವೃತೌ ॥ 155

ಕೋಮಲಂ ಹೃದಯಂ ತಸ್ಯ ದ್ರುತಂ ತೌ ಪಶ್ಯತೋ ಮುನೇಃ ।
ಸದಯಂ ತೇನ ಸಂಸ್ಪೃಷ್ಟೋ ಬಾಲಃ ಸಂಜೀವಿತೋಽಭವತ್ ॥ 156

ತಸ್ಮಿನ್ನುಜ್ಜೀವಿತೇ ಸರ್ವೈರ್ಹರ್ಷೋದ್ರೇಕೇಣ ಪೂಜಿತಃ ।
ತೇಷಾಂ ಹರ್ಷೇಣ ಹೃಷ್ಟೋಽಸೌ ಪ್ರಾಪ ಮೂಕಾಂಬಿಕಾಸ್ಥಲಮ್ ॥ 157

ಭೇರೀಮೃದಂಗ ನಿರ್ಹ್ರಾದೈರ್ಮೇಘ ಗರ್ಜಿತಡಂಬರೈಃ ।
ಪ್ರತಿಧ್ವನಿತಮಂಬಾಯಾ ವಿವೇಶ ಮುನಿರಾಲಯಮ್ ॥ 158

ಅಸ್ತೌಷೀದರ್ಥಗಂಭೀರೈರಂಬಿಕಾಂ ಬಂಧುರೈಃ ಪದೈಃ ।
ಚಿತ್ತಸ್ಯ ರಂಜನೀಂ ಶಂಭೋರ್ಮೂಕದಾನವಭಂಜನೀಮ್ ॥ 159

ವನವೈಭವವನ್ನು ಕಂಡು ತಲೆದೂಗಿ ಈಶ್ವರಲೀಲೆಯನ್ನು ವರ್ಣಿಸುತ್ತಿದ್ದರು (154). ದಾರಿಯಲ್ಲಿ ಇಬ್ಬರು ದಂಪತಿಗಳು ಸತ್ತುಹೋದ ಒಂದು ಮಗುವನ್ನು ಎದುರಿಗಿಟ್ಟುಕೊಂಡು ಗೋಳೋ ಎಂದು ಅಳುತ್ತಿದ್ದರು. ಸುತ್ತಲೂ ಅವರ ಬಂಧುಗಳಿದ್ದರು. ಕರುಣಾಜನಕವಾಗಿ ರೋದಿಸುತ್ತಿದ್ದ ಆ ದಂಪತಿಗಳನ್ನು ನೋಡಿ ಶ್ರೀಶಂಕರಯೋಗಿಗಳ ಮೃದು ಹೃದಯವು ಕರಗಿತು. ಕಾರುಣ್ಯದಿಂದ ಅವರು ಮೃತಬಾಲಕನನ್ನು ಮುಟ್ಟಲಾಗಿ ಆತನು ಜೀವಂತನಾದನು! (155–156). ಹುಡುಗನನ್ನು ಬದುಕಿಸಿದ್ದರಿಂದ ಆ ಜನರೆಲ್ಲರೂ ಹರ್ಷೋದ್ರೇಕದಿಂದ ಆಚಾರ್ಯರನ್ನು ಗೌರವಿಸಿ ಹೊಗಳಿದರು. ಅವರೆಲ್ಲರ ಹರ್ಷದಿಂದ ಹರ್ಷಿತರಾದ (ಹೊಗಳಿಕೆಯಿಂದಲ್ಲ) ಆಚಾರ್ಯರು ಮುಂದಕ್ಕೆ ಹೊರಟು ಶ್ರೇಷ್ಠವಾದ ಮೂಕಾಂಬಿಕಾ ಕ್ಷೇತ್ರವನ್ನು ತಲುಪಿದರು (157). ಮೇಘದ ಗರ್ಜನೆಗಳಂತಿದ್ದ ಭೇರೀಮೃದಂಗಗಳ ಧ್ವನಿಗಳಿಂದ ಗುಡುಗುತ್ತಿದ್ದ ಅಂಬಿಕಾದೇವಾಲಯವನ್ನು ಶ್ರೀಶಂಕರ ಮುನಿಗಳು ಪ್ರವೇಶಿಸಿದರು (158). ಪರಮೇಶ್ವರನ ಚಿತ್ತವನ್ನು ರಂಜಿಸುತ್ತಿರುವ ಮತ್ತು ಮೂಕದಾನವನನ್ನು ಭಂಜಿಸಿದ ಅಂಬಿಕೆಯನ್ನು ಗಂಭೀರಾರ್ಥಗಳುಳ್ಳ ಸುಂದರಪದಗಳಿರುವ ಪದ್ಯಗಳಿಂದ ಸ್ತೋತ್ರಮಾಡಿದರು (159). ದೇವಾಲಯದಲ್ಲಿದ್ದ ಮಹಾಜನರು ಆಚಾರ್ಯರನ್ನು ಪೂಜಿಸಿ ಗೌರವಿಸಿದರು. ವಿದ್ಯಾಪ್ರಭುಗಳಾದ ಶ್ರೀಶಂಕರಾಚಾರ್ಯರು ಶಂಭುವಿನ ಅರ್ಧಶರೀರವೆನಿಸಿದ ದೇವಿಯ

ತತ್ರತ್ಯೈರರ್ಚಿತಃ ಸದ್ಭಿರ್ದೇವ್ಯಾ ಮಾಹಾತ್ಮ್ಯಮುದ್ಗಿರನ್ ।
ಶಂಭೋರರ್ಧಶರೀರಸ್ಯ ತತ್ತ್ವಂ ಪ್ರಾಕಾಶಯತ್ ಪ್ರಭುಃ ॥ 160

ಶಿವಕ್ಷೇತ್ರಮಥ ಪ್ರಾಯಾದ್ ಗುರುಃ ಶ್ರೀಬಲಿನಾಮಕಮ್ ।
ಭವ್ಯಶಿಲ್ಪಕಲಾರಮ್ಯಂ ಪ್ರವಿವೇಶ ಶಿವಾಲಯಮ್ ॥ 161

ತುಷ್ಟಾವಾಶುಕೃತಶ್ಲೋಕೈರ್ಭಕ್ತಿಸಾರೈರ್ಮನೋರಮೈಃ ।
ಅಭಿಷಿಂಚನ್ನಿವೇಶಾನಂ ಗಂಗಾಜಲಸಮೈಃ ಶುಭೈಃ ॥ 162

ತತ್ರಾಗತ್ಯ ಬುಧಃ ಕಶ್ಚಿತ್ ಸಪುತ್ರಃ ಶಂಕರಂ ಗುರುಮ್ ।
ಪ್ರಣಮ್ಯೋವಾಚ ಭಗವನ್ ಬಾಲೋಽಯಂ ಕೃಪಯೇಕ್ಷ್ಯತಾಮ್ ॥ 163

ಉಪನೀತ್ಯಂತಸಂಸ್ಕಾರಾಃ ಕ್ರಮೇಣಾಸ್ಯ ಮಯಾ ಕೃತಾಃ ।
ಏಕಾಂತಪ್ರಿಯತಾಮಸ್ಯ ಜ್ಞಾತುಂ ನ ಪ್ರಭವಾಮ್ಯಹಮ್ ॥ 164

ಕ್ಷುತ್‌ಪಿಪಾಸೇ ನ ಜಾನೀತೇ ದತ್ತಂ ಕಿಂಚಿನ್ನಿಷೇವತೇ ।
ಶಾಸ್ತ್ರಮಿಚ್ಛತಿ ನಾಧ್ಯೇತುಂ ದ್ವಿತ್ರೈಃ ಶಬ್ದೈಸ್ತು ಭಾಷತೇ ॥ 165

ತತ್ತ್ವಾರ್ಥವನ್ನು ಅವರಿಗೆ ಬಿಡಿಸಿ ಹೇಳಿದರು (160).

ಆಮೇಲೆ ಶ್ರೀಶಂಕರಗುರುಗಳು ಶ್ರೀಬಲಿ'ಯೆಂಬ ಶಿವಕ್ಷೇತ್ರಕ್ಕೆ ಪ್ರಯಾಣ ಮಾಡಿದರು. ಭವ್ಯವಾದ ಶಿಲ್ಪಕಲೆಯಿಂದ ರಮ್ಯವಾದ ಶಿವದೇವಾಲಯವನ್ನು ಪ್ರವೇಶಿಸಿದರು. ಭಕ್ತಿಪ್ರಧಾನವಾಗಿ ಮನೋಹರವಾಗಿದ್ದ ಆಶು ಕವಿತೆಗಳಿಂದ ಶ್ರೀಶಂಕರರು ಶಿವನನ್ನು ಸ್ತುತಿಸುತ್ತಿರುವಾಗ, ಪವಿತ್ರವಾದ ಗಂಗಾಜಲದಿಂದ ಈಶ್ವರನಿಗೆ ಅಭಿಷೇಕ ಮಾಡುತ್ತಿರು ವರೋ ಎಂಬಂತೆ ಕಾಣಿಸಿತು (161–162). ಒಬ್ಬ ಪಂಡಿತನು ತನ್ನ ಮಗನೊಡನೆ ಬಂದು ಶ್ರೀಶಂಕರಗುರುಗಳಿಗೆ ನಮಸ್ಕರಿಸಿ ಇಂತೆಂದನು : ''ಮಹಾತ್ಮರೆ, ಈ ಹುಡುಗನನ್ನು ಕೃಪಾ ದೃಷ್ಟಿಯಿಂದ ನೋಡಿರಿ. ಉಪನಯನ ಪರ್ಯಂತವಾಗಿ ಎಲ್ಲ ಸಂಸ್ಕಾರಗಳನ್ನೂ ಈತನಿಗೆ ವಿಧಿ ವತ್ತಾಗಿ ಮಾಡಿದ್ದೇನೆ. ಇವನು ಏಕಾಂತದಲ್ಲಿ ಒಬ್ಬನೇ ಇರಲು ಇಷ್ಟಪಡುತ್ತಾನೆ. ಅದೇಕೆಂದು ತಿಳಿಯಲಾರದೆ ಹೋಗಿದ್ದೇನೆ! (163–164). ಹಸಿವು, ಬಾಯಾರಿಕೆಗಳೆಂಬುದೇ ಇವನಿಗೆ ತಿಳಿಯುವುದಿಲ್ಲ! ನಾವು ಆಹಾರವನ್ನು ತಂದುಕೊಟ್ಟರೆ ಸ್ವಲ್ಪ ಸೇವಿಸುತ್ತಾನೆ! ಶಾಸ್ತ್ರಾಧ್ಯಯನ ಮಾಡಲು ಇಚ್ಛೆ ಇಲ್ಲ. ಮಾತಾಡಿದರೆ ಎರಡು ಮೂರು ಶಬ್ದಗಳು; ಅಷ್ಟೆ. ಕುರುಡನಂತೆ, ಜಡನಂತೆ, ಮೂಕನಂತೆ ಇವನ ವರ್ತನೆ'' ಎಂದು ಹೇಳಿದನು. ಆಚಾರ್ಯರು ಆ ಬಾಲಕನನ್ನು

---

1. ಶಿವಳ್ಳಿ

ಅಂಧವಜ್ಜಡವಚ್ಚೈವ ಮೂಕವಚ್ಚಾಸ್ಯ ವರ್ತನಮ್ ।
ಇತ್ಯೇವಮುಕ್ತೋ ಗುರುರಾಟ್ ಬಾಲಕಂ ತಮುವೈಕ್ಷತ ॥ 166

ಕಸ್ತ್ವಂ ಭೋ ಜಡತಾ ಕೈಷೇತ್ಯನ್ವಯುಂಕ್ತ ಯತೀಶ್ವರಃ ।
ಬಾಲಕಸ್ತ್ವಂಜಲಿಂ ಬದ್ಧ್ವಾ ತಮುವಾಚ ನಿರರ್ಗಲಮ್ ॥ 167

ಅಹಮಸ್ಮಿ ಪರಂ ಬ್ರಹ್ಮ ಕ್ಷುತ್‌ಪಿಪಾಸೇ ನ ಮೇ ಕ್ವಚಿತ್ ।
ಚೈತನ್ಯೈಕಸ್ವರೂಪಸ್ಯ ಜಡತಾ ನ ಕದಾಚನ ॥ 168

ಅಂಧತಾ ಮೂಕತಾ ವಾಪಿ ನಿರ್ವಿಶೇಷೇ ಕಥಂ ಭವೇತ್ ।
ಸ್ವಪ್ನತುಲ್ಯೇ ಜಗತ್ಯಸ್ಮಿನ್ ವ್ಯವಹಾರೇಣ ಕಿಂ ಫಲಮ್ ॥ 169

ಇತ್ಯುಕ್ತ್ವಾ ದಂಡವದ್ ಭೂಮೌ ಪ್ರಣನಾಮ ಗುರೋಃ ಪುರಃ ।
ಪಿತಾ ಚಾನ್ಯೇ ಚ ತಚ್ಛ್ರುತ್ವಾ ನಿಮಗ್ನಾ ವಿಸ್ಮಯಾಂಬುಧೌ॥ 170

ಶಂಕರಃ ಸಸ್ಮಿತಸ್ತಸ್ಯ ಪಿತರಂ ಪ್ರತ್ಯಭಾಷತ ।
ವೇತ್ತ್ಯಯಂ ಪರಮಂ ತತ್ತ್ವಂ ಹಸ್ತಸ್ಥಾಮಲಕಂ ಯಥಾ॥ 171

ಪ್ರಾರಬ್ಧಕರ್ಮಶೇಷೇಣ ಪ್ರಾಪ್ತೋ ಮಾನುಷ್ಯಕಂ ಪುನಃ ।
ಅನೇನ ನೋಪಯೋಗಸ್ತೇ ವಿದ್ವನ್ನಸ್ತಿ ಕುಟುಂಬಕೇ ॥ 172

ಗಮನಿಸಿ ನೋಡಿದರು (165–166). ಅನಂತರ ''ಎಲೈ, ಯಾರು ನೀನು? ಏಕೆ ಈ ಜಡತೆ?'' ಎಂದು ಕೇಳಲು, ಆ ಬಾಲಕನು ಕೈ ಮುಗಿದುಕೊಂಡು ಆಚಾರ್ಯರನ್ನು ಕುರಿತು ನಿರರ್ಗಳವಾಗಿ ನುಡಿದನು (167): ''ನಾನು ಪರಬ್ರಹ್ಮವಾಗಿದ್ದೇನೆ! ಹಸಿವು ಬಾಯಾರಿಕೆಗಳು ನನಗೆ ಇಲ್ಲವೇ ಇಲ್ಲ. ಚೈತನ್ಯೈಕಸ್ವರೂಪನಿಗೆ ಎಂದಿಗೂ ಜಡತ್ವ ಬರುವುದಿಲ್ಲ. ನಿರ್ವಿಶೇಷ ಬ್ರಹ್ಮವಸ್ತುವಿಗೆ ಕುರುಡುತನವಾಗಲಿ, ಮೂಕತೆಯಾಗಲಿ ಹೇಗೆ ಬಂದೀತು? ಸ್ವಪ್ನತುಲ್ಯವಾದ ಈ ಮಿಥ್ಯಾಜಗತ್ತಿನಲ್ಲಿ ವ್ಯವಹಾರದಿಂದ ಫಲವಾದರೂ ಏನು?'' ಎಂದು ಹೇಳಿ ಶ್ರೀಶಂಕರಗುರುಗಳಿಗೆ ನೆಲದ ಮೇಲೆ ದಂಡವತ್ ಸಾಷ್ಟಾಂಗ ಪ್ರಣಾಮ ಮಾಡಿದನು! ಆತನ ತಂದೆಯೂ ಅಲ್ಲಿ ನೆರೆದಿದ್ದವರೂ ಆಶ್ಚರ್ಯಸಮುದ್ರದಲ್ಲಿ ಮುಳುಗಿ ಹೋದರು! (168–170).

ಆಚಾರ್ಯರು ಮುಗುಳ್ನಗೆ ಬೀರುತ್ತ ಆ ಬಾಲಕನ ತಂದೆಯನ್ನು ಕುರಿತು ಇಂತೆಂದರು: ''ಅಯ್ಯಾ–ವಿದ್ವದುತ್ತಮನೇ, ವೇದಾಂತದ ಪರಮಸತ್ಯವನ್ನು ಅಂಗೈನೆಲ್ಲಿಕಾಯಿಯಂತೆ ಈತನು ತಿಳಿದಿದ್ದಾನೆ (171). ಯಾವುದೋ ಪ್ರಾರಬ್ಧಕರ್ಮವು ಉಳಿದದ್ದರಿಂದ ಮತ್ತೆ ಮನುಷ್ಯ ಜನ್ಮ ಬಂದಿದೆ. ನೀನು ಪಂಡಿತನಾಗಿದ್ದೀಯೆ. ಈತನಿಂದ ನಿನ್ನ ಕುಟುಂಬಕ್ಕೆ ಯಾವ ಪ್ರಯೋಜನವೂ ಇಲ್ಲವೆಂದು ತಿಳಿ (172). ನಿನಗೆ ಒಪ್ಪಿಗೆಯಾದರೆ ಈತನು ನನ್ನ ಜೊತೆಗೆ ಬರಲಿ. ಹೇ ವಿಪ್ರ,

ಅನುಗಚ್ಛತು ಮಾಮೇಷಃ ಯದಿ ತ್ವಮನುಮನ್ಯಸೇ ।
ಜ್ಞಾನಿನಾನೇನ ಪುತ್ರೇಣ ಕೃತಾರ್ಥಂ ತ್ವತ್ಕುಲಂ ದ್ವಿಜ ॥ 173

ಏವಮುಕ್ತಃ ಸ ಪುತ್ರಸ್ಯ ಮುಖಂ ಪ್ರೈಕ್ಷತ ಚಿಂತಯಾ ।
ಗಚ್ಛಾಮೀತೀಂಗಿತಂ ದತ್ವಾ ಸ ಬಾಲಃ ಪ್ರಾಣಮದ್ಗುರುಮ್ ॥ 174

ಹಸ್ತಾಮಲಕನಾಮ್ನಾಸೌ ಗುರುಣಾ ಕರುಣಾತ್ಮನಾ ।
ಸಂಪ್ರಾಪ್ತಾನುಗ್ರಹೋ ನೀತಃ ಪಿತಾ ತ್ವಶ್ರುಮುಖೋಽಭವತ್ ॥ 175

ಸುರೇಶ್ವರಾದಿಭಿಃ ಶಿಷ್ಯೈರ್ಯಯೌ ಶ್ರೀಶಂಕರೋ ಗುರುಃ ।
ಶೃಂಗೇರೀಂ ತತ್ರ ತೇನ ಶ್ರೀಶಾರದಾ ಸುಪ್ರತಿಷ್ಠಿತಾ ॥ 176

ದೇಶಿಕೇಂದ್ರಸ್ಯ ಶಿಷ್ಯೋಽಭೂದ್ ಗಿರಿರ್ನಾಮ ಗುಣಾಧಿಕಃ ।
ಏಕಭಕ್ತಿಃ ಸಿಷೇವೇ ತಂ ಸದ್ಗುರುಂ ಸತತೋತ್ಥಿತಃ ॥ 177

ಕ್ಷಾಲಯಿಷ್ಯನ್ ಗುರೋರ್ವಸ್ತ್ರಂ ಪ್ರಾಯಾತ್ತುಂಗಾತರಂಗಿಣೀಮ್ ।
ಪಾಠಕಾಲೇ ಚ ಸಂಪ್ರಾಪ್ತೇ ಕಿಂಚಿದೇಷ ವ್ಯಲಂಬತ ॥ 178

ಜ್ಞಾನಿಯಾದ ಈ ಪುತ್ರನನ್ನು ಪಡೆದದ್ದರಿಂದ ನಿನ್ನ ವಂಶವು ಧನ್ಯ ವಾಯಿತು'' ಎಂದರು (173). ಆಗ ಬ್ರಾಹ್ಮಣನು ಚಿಂತಾಕ್ರಾಂತನಾಗಿ ತನ್ನ ಮಗನ ಮುಖ ವನ್ನು ನೋಡಿದನು. ಬಾಲಕನು ''ನಾನು ಇವರೊಂದಿಗೆ ಹೋಗುವೆನು'' ಎಂಬುದನ್ನು ಇಂಗಿತದಿಂದ ತಂದೆಗೆ ತಿಳಿಸಿ, ಗುರುಗಳಿಗೆ ಮತ್ತೆ ನಮಸ್ಕರಿಸಿದನು (174). ಕರುಣಾತ್ಮರಾದ ಆಚಾರ್ಯರು ಆತನಿಗೆ ''ಹಸ್ತಾಮಲಕ'' ಎಂಬ ಅನ್ವರ್ಥನಾಮವನ್ನಿತ್ತು ಅನುಗ್ರಹಿಸಿ ತಮ್ಮೊಡನೆ ಕರೆದುಕೊಂಡು ಹೊರಟರು. ಆ ತಂದೆಯ ಮುಖದಲ್ಲಿ ಕಣ್ಣೀರು ಹರಿಯಿತು (175). ಅಲ್ಲಿಂದ ಶ್ರೀಶಂಕರಾಚಾರ್ಯರು ಸುರೇಶ್ವರಾದಿಶಿಷ್ಯರೊಡನ ಶೃಂಗೇರಿಗೆ ಹೋದರು. ಅಲ್ಲಿ ಶ್ರೀಶಾರದಾದೇವಿಯ ಮೂರ್ತಿಯನ್ನು ವೈಭವದಿಂದ ಪ್ರತಿಷ್ಠಾಪಿಸಿದರು (176). ಆ ದೇಶಿಕೇಂದ್ರರಿಗೆ ಗಿರಿ ಎಂಬ ಗುಣಶಾಲಿಯಾದ ಶಿಷ್ಯನೊಬ್ಬನಿದ್ದನು. ಅವನು ತನ್ನ ಸದ್ಗುರುಗಳಲ್ಲಿ ಗಾಢವಾದ ಭಕ್ತಿಯನ್ನಿರಿಸಿ, ಸತತವೂ ಜಾಗರೂಕನಾಗಿ ಗುರುಸೇವೆಯನ್ನು ಮಾಡುತ್ತಿದ್ದನು. ಒಂದು ದಿನ ಗುರುಗಳ ವಸ್ತ್ರಗಳನ್ನು ತೊಳೆಯುವುದಕ್ಕಾಗಿ ಅವನು ತುಂಗಾನದಿಗೆ ಹೋದಾಗ, ಶಿಷ್ಯರಿಗೆ ಪಾಠಹೇಳುವ ಸಮಯವು ಬಂದಿತು. ಗಿರಿಯು ಬರುವುದು ಸ್ವಲ್ಪ ತಡವಾಯಿತು (177–178). ಶಾಂತಿಪಾಠವನ್ನು ಉಳಿದ ಶಿಷ್ಯರು ಆರಂಭಿಸಬೇಕೆಂದಿರುವಾಗ, ದಯಾನಿಧಿಗಳಾದ ಶ್ರೀಶಂಕರಾಚಾರ್ಯರು 'ಹೊಳೆಯಿಂದ ಗಿರಿಯೂ ಬರಲಿ' ಎಂದರು. ಆಗ ಪದ್ಮಪಾದನು ನಗುತ್ತ ಬದಿಯಲ್ಲಿದ್ದ ಗೋಡೆಯನ್ನು

ಆರಿಪ್ಸಿತೇ ಶಾಂತಿಪಾಠೇ ಗುರುಃ ಶ್ರೀಶಂಕರೋಽಬ್ರವೀತ್ ।
ಆಗಚ್ಛತು ಗಿರಿಃ ಸೋಽಪಿ ನದ್ಯಾ ಇತಿ ಕೃಪಾನಿಧಿಃ ॥ 179

ಪದ್ಮಪಾದಸ್ತದಾ ಸ್ಮಿತ್ವಾ ತಿರ್ಯಕ್ ಕುಡ್ಯಮಲೋಕತ ।
ಮಂದಬುದ್ಧಿರ್ಗಿರಿಸ್ತಸ್ಯ ವ್ಯರ್ಥಮಧ್ಯಯನಂ ತ್ವಿತಿ ॥ 180

ತಸ್ಯೇಂಗಿತಂ ಗುರುರ್ಜ್ಞಾತ್ವಾ ಶಮಯಂಸ್ತದಹಂಕೃತಿಮ್ ।
ಅನುಜಗ್ರಾಹ ವಿದ್ಯಾಭಿರ್ಗಿರಿಂ ಯೋಗಬಲಾತ್ ಪ್ರಭುಃ ॥ 181

ಯೋಗಸಂಕ್ರಾಂತವಿಜ್ಞಾನಃ ಸ ಗಿರಿಸ್ತೇಜಸಾ ಜ್ವಲನ್ ।
ಕ್ಷಾಲಿತಂ ವಸ್ತ್ರಮಾದಾಯ ಪ್ರಾಪ್ತಃ ಶಂಕರಸಂನಿಧಿಮ್ ॥ 182

ತುಂಗಾಭಂಗಸಮೈಃ ಪದ್ಯೈರ್ನಿರರ್ಗಲವಿನಿರ್ಗತೈಃ ।
ಸರ್ವಶಾಸ್ತ್ರಾರ್ಥಗಂಭೀರೈಃ ಕೀರ್ತಯನ್ ಬ್ರಹ್ಮ ಶಾಶ್ವತಮ್ ॥ 183

ಸುಭಗೈಸ್ತೋಟಕೈರ್ವೃತ್ತೈರ್ಲಲಿತಾಕ್ಷರಗುಂಫಿತೈಃ ।
ಪ್ರಶಂಸನ್ ಗುರುಕಾರುಣ್ಯಂ ಧನ್ಯತಾಮಾತ್ಮನೋ ಬ್ರುವನ್ ॥ 184

ರಮಮಾಣಃ ಪರಾನಂದೇ ಕ್ರಮಮಾಣಃ ಶನೈಃ ಶನೈಃ ।
ಈಕ್ಷಮಾಣೋ ಗುರುಂ ಭಕ್ತ್ಯಾ ವವಂದೇ ತಂ ದಯಾನಿಧಿಮ್ ॥ 185

ಅಡ್ಡಲಾಗಿ ನೋಡಿದನು. 'ಗಿರಿಯು ಗೋಡೆ ಇದ್ದಂತೆ ಮಂದಬುದ್ಧಿಯವನು. ಅವನಿಗೆ ಪಾಠ ಹೇಳುವುದು ವ್ಯರ್ಥ' ಎಂಬುದು ಪದ್ಮಪಾದನ ಇಂಗಿತ (179–180).

ಗುರುಗಳಿಗೆ ಆತನ ಇಂಗಿತವೇನೆಂಬುದು ತಿಳಿಯಿತು. ಪದ್ಮಪಾದನ ಅಹಂಕಾರವನ್ನು ಅಡಗಿಸಬೇಕೆಂದುಕೊಂಡು, ಆ ಮಹಾತ್ಮರು ತಮ್ಮ ಯೋಗಸಾಮರ್ಥ್ಯದಿಂದ ಎಲ್ಲ ಶಾಸ್ತ್ರಪಾಂಡಿತ್ಯವನ್ನೂ ಗಿರಿಗೆ ಅನುಗ್ರಹಿಸಿ ಹರಸಿದರು (181). ಗುರುಗಳ ಯೋಗಶಕ್ತಿಯಿಂದ ಎಲ್ಲ ಶಾಸ್ತ್ರಪಾಂಡಿತ್ಯವೂ ಒಡನೆಯೇ ಗಿರಿಯಲ್ಲಿ ಸಂಕ್ರಾಂತವಾಗಲು, ಆತನು ಒಂದು ಅಪೂರ್ವತೇಜಸ್ಸಿನಿಂದ ಶೋಭಿಸಿದನು. ಒಗೆದಿದ್ದ ವಸ್ತ್ರಗಳನ್ನು ಹೊತ್ತುಕೊಂಡು ಗುರುಗಳ ಸಂನಿಧಿಗೆ ಬಂದನು (182). ಬರುವಾಗ ತುಂಗಾತರಂಗಳಂತೆ ನಿರರ್ಗಳವಾಗಿ ಹೊರಡುವ, ಲಲಿತಾಕ್ಷರ ಗುಂಫಿತಗಳಾದ ಶ್ಲೋಕಗಳಿಂದ ಶಾಶ್ವತವಾದ ಬ್ರಹ್ಮವಸ್ತುವನ್ನು ವರ್ಣಿಸುತ್ತಿದ್ದನು. ಸುಂದರವಾದ ತೋಟಕ ವೃತ್ತಗಳಿಂದ ಶ್ರೀಶಂಕರಗುರುಗಳ ಕಾರುಣ್ಯಾತಿಶಯವನ್ನೂ ಅವರಿಂದ ತಾನು ಧನ್ಯನಾದೆನೆಂಬುದನ್ನೂ ಕೀರ್ತಿಸುತ್ತಿದ್ದನು. (183–184). ಗಿರಿಯು ಪರಮಾನಂದ ದಲ್ಲಿ ಮುಳುಗಿ, ಮೆಲ್ಲಮೆಲ್ಲನೆ ಹೆಜ್ಜೆಯಿಡುತ್ತ, ಗುರುಗಳನ್ನೇ ನೋಡುತ್ತ ಬಂದು ದಯಾನಿಧಿಗಳಾದ ಆಚಾರ್ಯರಿಗೆ ಭಕ್ತಿಪೂರ್ವಕವಾಗಿ ನಮಸ್ಕರಿಸಿದನು (185).

ತದದ್ಭುತಮಸಂಭಾವ್ಯಂ ಗಿರೇಃ ಕರ್ಮ ವಿನೂತನಮ್ ।
ಸತೀರ್ಥ್ಯಾ ವೀಕ್ಷ್ಯ ತೇ ಸರ್ವೇ ಬಭೂವುರ್ಮೂಕವಿಸ್ಮಿತಾಃ ॥ 186

ಸಂಪ್ರೀತಸ್ತೋಟಕೈರ್ವೃತ್ತೈಃ ಶ್ರೀಮಚ್ಛಂಕರದೇಶಿಕಃ ।
ಆಜುಹಾವ ಪ್ರಿಯಂ ಶಿಷ್ಯಂ ತೋಟಕೇತ್ಯಾಖ್ಯಯಾ ಗಿರಿಮ್ ॥ 187

ಪದ್ಮಪಾದಾದಯಃ ಶಿಷ್ಯಾ ಆಚಾರ್ಯಪ್ರೇರಿತಾ ಬುಧಾಃ ।
ಪ್ರಣಿನ್ಯುಃ ಕಾಂಶ್ಚನ ಗ್ರಂಥಾನ್ ವೇದಾಂತಾರ್ಥಪ್ರಕಾಶಕಾನ್ ॥ 188

ತೈತ್ತಿರೀಯಸ್ಯ ಭಾಷ್ಯಸ್ಯ ಬೃಹದಾರಣ್ಯಕಸ್ಯ ಚ ।
ಪ್ರಶಸ್ತಂ ವಾರ್ತಿಕಂ ಚಕ್ರೇ ಪಂಡಿತೇಂದ್ರಃ ಸುರೇಶ್ವರಃ ॥ 189

ತಥಾ ನೈಷ್ಕರ್ಮ್ಯಸಿದ್ಧಿಂ ಚ ತತ್ಪ್ರಣೀತಾಂ ಯತೀಶ್ವರಃ ।
ಜಹರ್ಷ ವೀಕ್ಷ್ಯ ವಿದ್ವದ್ಭಿರ್ಲಾಲನೀಯಾಂ ಸ್ವಮೂರ್ಧಸು ॥ 190

ತತಃ ಶ್ರೀಭಗವತ್ಪಾದೋ ಜನನ್ಯಾ ಅಂತಿಮಾಂ ದಶಾಮ್ ।
ದಿವ್ಯೇನ ಚಕ್ಷುಷಾ ಜ್ಞಾತ್ವಾ ಪ್ರತಸ್ಥೇ ಕಾಲಟಿಂ ದ್ರುತಮ್ ॥ 191

ಗಿರಿಯು ನಡೆಸಿದ ಅದ್ಭುತವೂ ಊಹಾತೀತವು ಆದ ವಿನೂತನ ಕೃತ್ಯವನ್ನು ನೋಡಿ, ಸತೀರ್ಥ್ಯರಾದ ಇತರ ಎಲ್ಲ ಶಿಷ್ಯರೂ ಮೂಕವಿಸ್ಮಿತರಾದರು! ಗಿರಿಯು ಹೇಳಿದ ತೋಟಕ ವೃತ್ತಗಳಿಂದ ಸಂಪ್ರೀತರಾದ ಶ್ರೀಶಂಕರದೇಶಿಕರು ಆ ಪ್ರಿಯಶಿಷ್ಯನನ್ನು 'ತೋಟಕ' ಎಂದು ಕರೆದು ಆ ಹೆಸರನ್ನೇ ಇಟ್ಟರು! (186–187). ಅನಂತರ ಪದ್ಮಪಾದನೇ ಮೊದಲಾದ ಪಂಡಿತರಾದ ಶಿಷ್ಯರು ಆಚಾರ್ಯರ ಆಜ್ಞೆಯಂತೆ ಕೆಲವು ವೇದಾಂತ ಗ್ರಂಥಗಳನ್ನು ರಚಿಸಿದರು. ಪಂಡಿತೇಂದ್ರರಾದ ಸುರೇಶ್ವರಾಚಾರ್ಯರು ತೈತ್ತಿರೀಯಕ ಮತ್ತು ಬೃಹದಾರಣ್ಯಕಗಳೆಂಬ ಉಪನಿಷತ್ತುಗಳ ಮೇಲೆ ಆಚಾರ್ಯರು ಬರೆದಿದ್ದ ಭಾಷ್ಯಗಳಿಗೆ ಪ್ರಶಂಸನೀಯವಾದ ವಾರ್ತಿಕಗಳನ್ನು ರಚಿಸಿದರು (188–189). ಅವಲ್ಲದೆ ನೈಷ್ಕರ್ಮ್ಯಸಿದ್ಧಿಯೆಂಬ ಒಂದು ಸ್ವತಂತ್ರಗ್ರಂಥವನ್ನೂ ಸುರೇಶ್ವರಾಚಾರ್ಯರು ಬರೆದರು. ವಿದ್ವಾಂಸರು ತಮ್ಮ ತಲೆಗಳ ಮೇಲಿಟ್ಟುಕೊಂಡು ಲಾಲಿಸಬೇಕಾದ ಆ ಗ್ರಂಥವನ್ನು ನೋಡಿ ಶ್ರೀಶಂಕರಯತೀಶ್ವರರಿಗೆ ಪರಮಾನಂದವಾಯಿತು (190).

ಹೀಗಿರಲು ಶ್ರೀಭಗವತ್ಪಾದರು ತಮ್ಮ ಜನನಿಯಾದ ಆರ್ಯಾಂಬೆಗೆ ಅಂತ್ಯದಶೆ ಪ್ರಾಪ್ತವಾಗಿದೆಯೆಂಬುದನ್ನು ದಿವ್ಯದೃಷ್ಟಿಯಿಂದರಿತು ಕೂಡಲೆ ಏಕಾಕಿಯಾಗಿ ಕಾಲಟಿಗೆ ಹೋದರು (191). ವಯಸ್ಸಾದ್ದರಿಂದ ಆರ್ಯಾಂಬೆಯ ಶರೀರವು ಜೀರ್ಣವಾಗಿತ್ತು

ಆರ್ಯಾಂಬಾ ವಯಸಾ ಜೀರ್ಣಾ ಮೃತ್ಯುಶಯ್ಯಾಮಧಿಶ್ರಿತಾ ।
ಆನಂದಾಶ್ರು ವಿಮುಂಚಂತೀ ಪ್ರಿಯಪುತ್ರಮವೈಕ್ಷತ ॥ 192

ಆಚಾರ್ಯೋ ಜನನೀಹಸ್ತೇ ನ್ಯಸ್ಯ ಹಸ್ತಂ ಕ್ಷಣಂ ಸ್ಥಿತಃ ।
ಕಿಂಚಿತ್ ಸಂಭಾಷ್ಯ ಸಾ ದೇಹಂ ವ್ಯಸೃಜತ್ ಕರ್ಮಸಂಕ್ಷಯಾತ್ ॥ 193

ಅದೃಷ್ಟ್ವಾ ಕಮಪಿ ಪ್ರಾಪ್ತಂ ದಾಯಾದಂ ಶಂಕರೋ ಯತಿಃ ।
ಮಾತ್ರಾನುಭೂತಕಷ್ಟಾನ್ಯಪ್ಯನುಚಿಂತ್ಯ ಶುಶೋಚ ಸಃ ॥ 194

ಜನನ್ಯಾ ಅಂತ್ಯಸಂಸ್ಕಾರಂ ಕರ್ತುಂ ತೇನಾರ್ಥಿತಾ ಅಪಿ ।
ಅಂಗೀಚಕ್ರುರ್ನ ದಾಯಾದಾ ವಿವೇಕವಿಧುರಾಃ ಸಮೇ ॥ 195

ಗತ್ಯಭಾವಾತ್ತು ಸಂಸ್ಕಾರಂ ಸ್ವಯಂ ಕರ್ತುಮಿಯೇಷ ಸಃ ।
ಅಗ್ನಿಮಪ್ಯದದುರ್ನಾಮೀ ಅಹೋ ಮೌರ್ಖ್ಯಮಯಂತ್ರಿತಮ್ ॥ 196

ಪಾಣಿಂಧಮೋಽಗ್ನಿಮುತ್ಪಾದ್ಯ ಕ್ರೋಧಾದ್ಯೋಗೀಶ್ವರೋ ಗುರುಃ ।
ದದಾಹ ಜನನೀದೇಹಂ ವಿಧಿವನ್ಮಂತ್ರಪೂರ್ವಕಮ್ ॥ 197

ಮೃತ್ಯುಶಯ್ಯೆಯಲ್ಲಿ ಮಲಗಿದ್ದ ಆ ವೃದ್ಧೆಯು ತನ್ನ ಪ್ರಿಯಪುತ್ರನು ಬಂದನೆಂದು ಆನಂದಬಾಷ್ಪವನ್ನು ಸುರಿಸುತ್ತ ಶ್ರೀಶಂಕರರನ್ನೇ ನೋಡುತ್ತಿದ್ದಳು. ಆಚಾರ್ಯರು ಜನನಿಯ ಕೈಯಲ್ಲಿ ತಮ್ಮ ಕೈಯನ್ನಿಟ್ಟು ಸ್ವಲ್ಪ ಹೊತ್ತು ಹಾಗೆಯೇ ಇದ್ದರು. ಆರ್ಯಾಂಬೆಯು ಪುತ್ರನೊಡನೆ ಮಾತಾಡುತ್ತಿರುವಾಗ, ಕರ್ಮವು ಕ್ಷಯಿಸಿದ್ದರಿಂದ ದೇಹವನ್ನು ಬಿಟ್ಟಳು (192–193). ಆ ಸಮಯದಲ್ಲಿಯೂ ಅಲ್ಲಿಗೆ ಯಾವ ದಾಯಾದಿಯೂ ಸುಳಿಯದಿರುವುದನ್ನು ಕಂಡು, ಶ್ರೀಶಂಕರಯತಿಗಳು ''ಆಹಾ! ನನ್ನ ತಾಯಿಯು ಬಹಳ ಕಷ್ಟಗಳನ್ನು ಅನುಭವಿಸಿರಬೇಕು'' ಎಂದುಕೊಂಡು ಶೋಕಿಸಿದರು (194). ಆಮೇಲೆ ತಾವೇ ಪಕ್ಕದ ಮನೆಗಳಿಗೆ ಹೋಗಿ ತಮ್ಮ ತಾಯಿಯ ಅಂತ್ಯಸಂಸ್ಕಾರವನ್ನು ಮಾಡಬೇಕೆಂದು ದಾಯಾದಿಬಂಧುಗಳನ್ನು ಕೇಳಿಕೊಂಡರು. ವಿವೇಕಶೂನ್ಯರಾದ ಅವರಲ್ಲಿ ಯಾರೂ ಅಂತ್ಯಸಂಸ್ಕಾರ ಮಾಡಲು ಒಪ್ಪಲಿಲ್ಲ! (195) ಆಗ ಮಾಡುವುದೇನು? ಗತ್ಯಂತರವಿಲ್ಲದ್ದರಿಂದ ಶ್ರೀಶಂಕರರು ತಾವೇ ತಮ್ಮ ತಾಯಿಗೆ ಅಂತ್ಯಸಂಸ್ಕಾರ ಮಾಡಬೇಕೆಂದು ಉದ್ದೇಶಿಸಿದರು. ದಹನ ಸಂಸ್ಕಾರಕ್ಕೆ ಬೆಂಕಿಯನ್ನೂ ಆ ಜನರು ಕೊಡದೆ ಹೋದರು. ಅಬ್ಬಾ! ಮೂರ್ಖತನಕ್ಕೆ ಮೇರೆಯೇ ಇಲ್ಲದೆ ಹೋಯಿತು! (196). ಆಗ ಯೋಗಿಶ್ರೇಷ್ಠರಾದ ಆಚಾರ್ಯರು ಕ್ರೋಧದಿಂದ ತಮ್ಮ ಅಂಗೈಗಳನ್ನು ತೀಡಿ ಅಗ್ನಿಯನ್ನುತ್ಪಾದಿಸಿ ಶಾಸ್ತ್ರವಿಧಿಯಂತೆ ಮಂತ್ರಪೂರ್ವಕವಾಗಿ ತಮ್ಮ ಜನನಿಯ ದೇಹಕ್ಕೆ ಅಗ್ನಿಸಂಸ್ಕಾರವನ್ನು ಮಾಡಿದರು (197). ಇವೆಲ್ಲ ಕಾರಣಗಳಿಂದ ಉದ್ವಿಗ್ನರಾದ ಆ

ಶಶಾಪ ಮುನಿರುದ್ವಿಗ್ನೋ ಗ್ರಾಮಸ್ಥಾನ್ ಬ್ರಾಹ್ಮಣಬ್ರುವಾನ್ ।
"ಶ್ರೌತಕರ್ಮಾಣ್ಯಕುರ್ವಾಣಾ ವೇದಬಾಹ್ಯಾ ಭವಿಷ್ಯಥ" ॥ 198

ಅಥ ನಿಷ್ಕ್ರಮ್ಯ ಯೋಗೀಂದ್ರೋ ಗ್ರಾಮಾತ್ ಕೇರಲಭೂಮಿಷು ।
ವಿಜಹಾರೈಕಕೋ ಬ್ರಹ್ಮ ಧ್ಯಾಯನ್ ಶಿಷ್ಯನಿರೀಕ್ಷಯಾ॥ 199

ಸುರೇಶ್ವರಃ ಪದ್ಮಪಾದೋ ಹಸ್ತಾಮಲಕತೋಟಕೌ ।
ಚತ್ವಾರ ಇವ ವೇದಾಸ್ತೇ ತುಷ್ಟುವುಃ ಪ್ರಾಪ್ಯ ಶಂಕರಮ್ ॥ 200

ವೇದಾಂಗೋಪಾಂಗಸದೃಶಾಃ ಯತಿನೋಽನ್ಯೇ ತಪಸ್ವಿನಃ ।
ಅನ್ವಿಷ್ಯಂತಃ ಸಮಾಜಗ್ಮುಃ ಸೇವಿತುಂ ತಂ ಜಗದ್ಗುರುಮ್ ॥ 201

ಆಜ್ಞಾಂ ಚ ಸ್ವಗುರೋಃ ಸ್ಮೃತ್ವಾ ಪ್ರಾಪ್ತಕಾಲಾಂ ಯತೀಶ್ವರಃ ।
ಪ್ರತಸ್ಥೇ ವೈದಿಕಂ ಧರ್ಮಂ ಪ್ರತಿಷ್ಠಾಪಯಿತುಂ ಪುನಃ ॥ 202

ಆದೌ ರಾಮೇಶ್ವರಂ ಗತ್ವಾ ಸ್ತುತ್ವಾ ವಿದ್ಯೇಶ್ವರಂ ಶಿವಮ್ ।
ಪೂರ್ವಂ ಕೇನಾಪ್ಯನಾರಬ್ಧಂ ಕರ್ಮ ಪ್ರಾರಭತಾತ್ಮವಾನ್ ॥ 203

ಮಹಾತ್ಮರು ಕಾಲಟಿಗ್ರಾಮವಾಸಿಗಳಾದ ಆ ನೀಚಬ್ರಾಹ್ಮಣರನ್ನು ನೋಡಿ "ಎಲೈ, ಶ್ರುತಿವಿಹಿತಕರ್ಮಗಳನ್ನು ಆಚರಿಸದೆ ವೇದಬಾಹ್ಯರಾಗಿರಿ!" ಎಂದು ಶಪಿಸಿದರು (198). ಅನಂತರ ಆ ಯೋಗೀಂದ್ರರು ಕಾಲಟಿಗ್ರಾಮದಿಂದ ನಿಷ್ಕ್ರಮಿಸಿ, ತಮ್ಮ ಶಿಷ್ಯರನ್ನು ಪ್ರತೀಕ್ಷಿಸುತ್ತ ಪರಬ್ರಹ್ಮವನ್ನು ಧ್ಯಾನಿಸುತ್ತ ಏಕಾಕಿಗಳಾಗಿ ಕೇರಳ ದೇಶದಲ್ಲಿ ಸಂಚರಿಸುತ್ತಿದ್ದರು (199). ಆಗ ನಾಲ್ಕು ವೇದಗಳೋ ಎಂಬಂತೆ ವಿರಾಜಿಸುತ್ತಿದ್ದ ಸುರೇಶ್ವರಾಚಾರ್ಯ, ಪದ್ಮಪಾದಾಚಾರ್ಯ, ಹಸ್ತಾಮಲಕಾಚಾರ್ಯ ಮತ್ತು ತೋಟಕಾಚಾರ್ಯರೆಂಬ ನಾಲ್ವರು ಶಿಷ್ಯರು ಅವರ ಬಳಿಗೆ ಬಂದರು. ಆ ಶಿಷ್ಯರನ್ನು ಕಂಡು ಶ್ರೀಶಂಕರರಿಗೆ ಸಂತೋಷವಾಯಿತು (200).

ವೇದಗಳ ಅಂಗಗಳಂತೆಯೂ ಉಪಾಂಗಗಳಂತೆಯೂ ಇದ್ದ ತಪಸ್ವಿಗಳಾದ ಇತರ ಯತಿಗಳೂ ಆಚಾರ್ಯರನ್ನು ಅನ್ವೇಷಿಸುತ್ತ ಆ ಜಗದ್ಗುರುಗಳನ್ನು ಸೇವಿಸುವುದಕ್ಕಾಗಿ ಬಂದು ಸೇರಿದರು (201). ಅನಂತರ ತಮ್ಮ ಗುರುಗಳಾದ ಶ್ರೀಗೋವಿಂದಭಗವತ್ಪಾದರ ಆಜ್ಞೆಯನ್ನು ಪೂರ್ತಿಗೊಳಿಸಲು ಸಮಯವೀಗ ಪ್ರಾಪ್ತವಾಯಿತೆಂದು ತಿಳಿದು, ಶ್ರೀಶಂಕರ ಭಗವತ್ಪಾದರು ವೈದಿಕಧರ್ಮವನ್ನು ಭರತಖಂಡದಲ್ಲಿ ಪುನಃ ಪ್ರತಿಷ್ಠಾಪಿಸಬೇಕೆಂದು ನಿಶ್ಚಯಿಸಿ ಶಿಷ್ಯರೊಡನೆ ಹೊರಟರು (202). ಮೊದಲು ರಾಮೇಶ್ವರಕ್ಷೇತ್ರಕ್ಕೆ ಹೋಗಿ ಸರ್ವವಿದ್ಯೇಶ್ವರನಾದ ಶಿವನ ದರ್ಶನ ಮಾಡಿ ಸ್ತುತಿಸಿದರು. ಆಮೇಲೆ ಧೀರರಾದ ಆ ಮಹಾಪುರುಷರು ಹಿಂದ ಯಾರೂ ನಡಸದಿದ್ದ ದಿಗ್ವಿಜಯಕಾರ್ಯವನ್ನು ಪ್ರಾರಂಭಿಸಿದರು (203). ಆದಿಯಲ್ಲಿ ಕೇರಳ ದೇಶದ

ಕೇರಲಂ ಚಾಥ ಗೋಕರ್ಣಂ ಕರ್ಣಾಟಂ ದ್ರಾವಿಡಂ ತಥಾ ।
ಚಿತ್ವಾಂಧ್ರಂ ಚ ಮಹಾರಾಷ್ಟ್ರಂ ಪ್ರವಿವೇಶ ಸ ಘೂರ್ಜರಮ್ ॥ 204

ದಕ್ಷಿಣಾಹಿ ಹಿಮಾದ್ರೇರಪ್ಯುತ್ತರಾಹಿ ಚ ವಾರಿಧೇಃ ।
ಸರ್ವದೇಶಾನ್ ಪ್ರವಿಶ್ಯಾಸೌ ಜಿಗಾಯ ಪ್ರತಿವಾದಿನಃ ॥ 205

ಚಾರ್ವಾಕಾನ್ ಬೌದ್ಧಜೈನಾಂಶ್ಚ ಸಾಂಖ್ಯಾನ್ ವೈಶೇಷಿಕಾಂಸ್ತಥಾ ।
ಯೋಗಿನೋ ಜೈಮಿನೀಯಾಂಶ್ಚ ಪರಾಜಿಗ್ಯೇ ಜಗದ್ಗುರುಃ ॥ 206

ಸರ್ವತ್ರ ಜನತಾಂ ದೃಷ್ಟ್ವಾ ಗುರುರ್ಲಲಿತಯಾ ಗಿರಾ ।
ಪ್ರೋವಾಚ ಸುಖಬೋಧಾರ್ಥಂ ಸರ್ವೇಷಾಂ ಹಿತಕಾಮ್ಯಯಾ ॥ 207

ನಾಹಂ ಪ್ರವರ್ತಯೇ ನೂತ್ನಂ ಧರ್ಮಂ ಸ್ವೇನ ಪ್ರಕಲ್ಪಿತಮ್ ।
ಋಷಿಭಿರ್ದರ್ಶಿತೋ ಮಾರ್ಗೋ ಜ್ಞಾಪ್ಯತೇಽದ್ಯ ಪುರಾತನೈಃ ॥ 208

ವೇದಾಃ ಪ್ರಮಾಣಂ ಸರ್ವಸ್ಯ ಶ್ರೇಯಃಪ್ರೇಯೋಽನುಗಾಮಿನಃ ।
ಇಹಾಮುತ್ರ ಸುಖಂ ತಸ್ಯ ವಿನಿಪಾತೋ ನ ಜಾತುಚಿತ್ ॥ 209

ವಿದ್ವಾಂಸರನ್ನು ಜಯಿಸಿ, ಗೋಕರ್ಣಕ್ಕೆ ಹೋಗಿ, ಕರ್ನಾಟಕದಲ್ಲಿ ಸುತ್ತಾಡಿ, ತಮಿಳು ನಾಡನ್ನು ಹೊಕ್ಕು ಆಂಧ್ರದೇಶದಲ್ಲಿ ಸಂಚರಿಸಿ, ಮಹಾರಾಷ್ಟ್ರವನ್ನು ಸೇರಿ ಅದ್ವಯಬ್ರಹ್ಮವಾದವನ್ನು ವಿರೋಧಿಸುವ ಸಮಸ್ತ ಪಂಡಿತರನ್ನೂ ಜಯಿಸಿ ಗುಜರಾತನ್ನು ಪ್ರವೇಶಿಸಿದರು (204). ವಿವರದಿಂದೇನು? ಹಿಮಾಲಯಪರ್ವತದ ದಕ್ಷಿಣ ದಿಕ್ಕಿನಲ್ಲಿ ಮಹಾಸಾಗರದ ಉತ್ತರ ದಿಕ್ಕಿನಲ್ಲಿ ಇದ್ದ ಸಕಲದೇಶಗಳಿಗೂ ಹೋಗಿ ಪ್ರತಿವಾದಿಗಳಾದ ಸಮಸ್ತ ವಿದ್ವಾಂಸರನ್ನು ಆಚಾರ್ಯರು ಜಯಿಸಿದರು (205). ಚಾರ್ವಾಕರು, ಬೌದ್ಧರು, ಜೈನರು, ಸಾಂಖ್ಯರು, ತಾರ್ಕಿಕರಾದ ವೈಶೇಷಿಕರು, ಪಾತಂಜಲಯೋಗಿಗಳು, ಮೀಮಾಂಸಕರಾದ ಜೈಮಿನೀಯರು ಇತ್ಯಾದಿ ಪ್ರತಿವಾದಿಗಳೆಲ್ಲರನ್ನೂ ಆ ಜಗದ್ಗುರುಗಳು ವಾದದಲ್ಲಿ ಪರಾಭವಗೊಳಿಸಿದರು (206). ಅವರು ಹೋದೆಡೆಯಲ್ಲಿ ಸರ್ವತ್ರ ಜನಸಮೂಹವು ಸೇರುತ್ತಿತ್ತು. ಅವರೆಲ್ಲರಿಗೂ ಸುಖವಾಗಿ ಅರ್ಥವಾಗಲೆಂದು ಆಚಾರ್ಯರು ಸರಳಭಾಷೆಯಲ್ಲಿ ಪ್ರವಚನ ಮಾಡುತ್ತಿದ್ದರು. ಯಾವ ಭೇದವೂ ಇಲ್ಲದ ಸರ್ವಜನರಿಗೂ ಶ್ರೇಯಸ್ಸಾಗಲೆಂಬುದು ಅವರ ಉದ್ದೇಶವಾಗಿತ್ತು (207). ಅವರು ಕೊಡುತ್ತಿದ್ದ ಸಾರ್ವಜನಿಕೋಪನ್ಯಾಸಗಳ ಸಾರವಿದು: ''ನಾನು ಬೋಧಿಸು ವುದು ನನ್ನಿಂದ ಕಲ್ಪಿತವಾದದ್ದಲ್ಲ. ನಮ್ಮ ಪುರಾತನ ಋಷಿಗಳು ಯಾವ ಮಾರ್ಗವನ್ನು ತೋರಿಸಿ ಕೊಟ್ಟಿದ್ದರೋ ಅದನ್ನೀಗ ನಿಮ್ಮ ಸ್ಮರಣಗೆ ತರುತ್ತಿದ್ದೇನೆ (208). ಶ್ರೇಯಸ್ಸನ್ನೂ ಪ್ರೇಯಸ್ಸನ್ನೂ ಬಯಸತಕ್ಕ ಸರ್ವರಿಗೂ ವೇದಗಳೇ ಪ್ರಮಾಣಗ್ರಂಥಗಳು. ವೇದವು ತೋರಿಸಿಕೊಟ್ಟ ಮಾರ್ಗದಲ್ಲಿ

ಏಕಂ ಬ್ರಹ್ಮ ಪರಂ ಸತ್ಯಂ ದ್ವಿತೀಯಂ ನಾಸ್ತಿ ಕಿಂಚನ ।
ಹರಿಃ ಶಕ್ತಿಃ ಶಿವಶ್ಚೇತಿ ಬ್ರಹ್ಮಣೋ ರೂಪಕಲ್ಪನಾ ॥ 210

ಅನುಮೋದಾಮಹೇ ಸರ್ವಂ ಮತಮಾಸ್ತಿಕ್ಯಭೂಷಿತಮ್ ।
ನ ಕಿಂಚಿತ್ ಪ್ರತಿಷೇಧಾಮಃ ಸರ್ವೋಽಪ್ಯಾತ್ಮೇತಿ ಹೇತುನಾ ॥ 211

ಕರ್ಮ ಚೋಪಾಸನಾ ಭಕ್ತಿಸ್ತ್ರಯಂ ಪರಮಪಾವನಮ್ ।
ಇಷ್ಯತೇ ಚಿತ್ತಶುದ್ಧ್ಯರ್ಥಂ ತತೋ ಜ್ಞಾನಂ ಪ್ರಜಾಯತೇ ॥ 212

ವಿದ್ಯಾಯಾಮಧಿಕಾರೋಽಸ್ತಿ ಸರ್ವೇಷಾಂ ನಾತ್ರ ಸಂಶಯಃ ।
ಧರ್ಮಶಾಸ್ತ್ರಾನುಸಾರೇಣ ಪ್ರಾಪ್ತಿಮಾರ್ಗಸ್ತು ಭಿದ್ಯತೇ ॥ 213

ಪರಮಾರ್ಥೇಽಪಿ ಚಾದ್ವೈತೇ ಸಂಸಾರೋ ದ್ವೈತಪೂರ್ವಕಃ ।
ಚಾತುರ್ವರ್ಣ್ಯಂ ತತೋ ರಕ್ಷ್ಯಂ ವ್ಯವಹಾರಾನುವರ್ತಿನಾ ॥ 214

ಹೋಗತಕ್ಕವನಿಗೆ ಇಹದಲ್ಲಿಯೂ ಸುಖವುಂಟು; ಪರದಲ್ಲಿಯೂ ಉಂಟು. ಅವನಿಗೆಂದಿಗೂ ಕೇಡು ಸಂಭವಿಸುವುದಿಲ್ಲ (209). ಒಂದೇ ಪರಬ್ರಹ್ಮವೇ ಪರಮಾರ್ಥದಲ್ಲಿ ಸತ್ಯವಾದದ್ದು. ಸತ್ಯವಾದ ಇನ್ನೊಂದು ವಸ್ತುವಿಲ್ಲ. ವಿಷ್ಣು, ಶಕ್ತಿದೇವತೆ, ಶಿವ–ಮುಂತಾದವ ರೆಲ್ಲರೂ ಬ್ರಹ್ಮವಸ್ತುವಿಗೆ ಕಲ್ಪಿಸಿಕೊಂಡ ರೂಪಭೇದಗಳು (210). ಲೋಕದಲ್ಲಿ ನಾನಾಮತಗಳಿವೆ. ಅವುಗಳಲ್ಲಿ ಆಸ್ತಿಕತೆಯಿಂದ ಕೂಡಿದ ಎಲ್ಲ ಮತಗಳನ್ನೂ ನಾವು ಒಪ್ಪುತ್ತೇವೆ. ಅವುಗಳಲ್ಲೊಂದನ್ನೂ ನಾವು ನಿರಾಕರಿಸುವುದಿಲ್ಲ–ದೂಷಿಸುವುದಿಲ್ಲ. ಸರ್ವವೂ ಬ್ರಹ್ಮನಾಗಿರುವಾಗ ಆ ದೇವತೆಗಳೆಲ್ಲರೂ ಒಬ್ಬ ಪರಮಾತ್ಮನೇ ಎಂಬುದು ಇದಕ್ಕೆ ಕಾರಣವಾಗಿದೆ (211). ಶಾಸ್ತ್ರವಿಹಿತವಾದ ಕರ್ಮ, ಧ್ಯಾನರೂಪವಾದ ಉಪಾಸನೆ, ಭಕ್ತಿ–ಈ ಮೂರು ಪರಮಪಾವನವಾದದ್ದು. ಚಿತ್ತಶುದ್ಧಿಗಾಗಿ ಇವು ಮೂರೂ ಅವಶ್ಯವಾಗಿ ಬೇಕು. ಚಿತ್ತಶುದ್ಧಿಯಾದ ಮೇಲೆ ಆತ್ಮಜ್ಞಾನವಾಗುತ್ತದೆ (212). ಸ್ತ್ರೀ, ಪುರುಷ, ಜಾತಿ–ಎಂಬ ಭೇದವಿಲ್ಲದೆ ಸರ್ವರಿಗೂ ವಿದ್ಯೆಯಲ್ಲಿ ಅಧಿಕಾರ ಉಂಟು. ಸಂಶಯವಿಲ್ಲ ಆದರೆ ವಿದ್ಯೆಯನ್ನು ಪಡೆಯುವ ಮಾರ್ಗವು ಧರ್ಮಶಾಸ್ತ್ರಾನುಸಾರವಾಗಿ ಬೇರೆ ಬೇರೆಯಾಗಬಹುದು (213). ಪರಮಾರ್ಥ ಸತ್ಯವಾದದ್ದು ಅದ್ವೈತಸಿದ್ಧಾಂತವೇ ಸರಿ. ಆದರೆ ಈ ಸಂಸಾರವು ದ್ವೈತ ಪೂರ್ವಕವಾಗಿ ದ್ವೈತದಿಂದಲೇ ನಡೆಯತಕ್ಕದ್ದು. ಆದ್ದರಿಂದ ಈ ಸಂಸಾರದ ವ್ಯವಹಾರದಲ್ಲಿರತಕ್ಕವರು ಚಾತುರ್ವರ್ಣ್ಯವನ್ನು ರಕ್ಷಿಸಿಕೊಳ್ಳಬೇಕು. (214). ಸಂಪ್ರದಾಯವಿದರಾದ ಪೂರ್ವಾಚಾರ್ಯರು ಈ ವೈದಿಕಧರ್ಮವೆಂಬ ಸರ್ವೋತ್ತಮವಾದ ಆಸ್ತಿಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಅದನ್ನೇ ನಿಮ್ಮೆಲ್ಲರ ಕ್ಷೇಮಾಭಿವೃದ್ಧಿ ಸುಖಗಳಿಗಾಗಿ

ಸಂಪ್ರದಾಯವಿದಾಚಾರ್ಯೈಃ ರಕ್ಷಿತಂ ಪರಮಂ ಧನಮ್ ।
ವಿನಿಯುಂಜೇ ಸುಖಾರ್ಥಂ ವೋ ಮದೀಯಂ ನಾಸ್ತಿ ಕಿಂಚನ ॥ 215

ಇತ್ಯಾದಿ ವಚನೈರ್ವಾಗ್ಮೀ ವಶೀಕೃತ್ಯಾಖಿಲಂ ಜಗತ್ ।
ವೈದಿಕಂ ಸ್ಥಾಪಯಾಮಾಸ ಸ್ವಧರ್ಮಂ ಕಿಮಿತೋಽದ್ಭುತಮ್ ॥ 216

ಪಂಚಾಯತನಪೂಜಾಂ ಚ ಪ್ರಾವರ್ತಯತ ಸ ಪ್ರಭುಃ ।
ಕರ್ಮಿಣಾಮೀಶ್ವರೈಕತ್ವಂ ಬೋಧಯನ್ ಭೇದದರ್ಶಿನಾಮ್ ॥ 217

ಇತ್ಥಂ ಸ ಭಾರತೇ ರಾಷ್ಟ್ರೇ ಚರಣಾಭ್ಯಾಮನಾರತಮ್ ।
ಚರಿತ್ವಾ ವೈದಿಕಂ ಧರ್ಮಂ ಸ್ಥಾಪಯಾಮಾಸ ಸುಸ್ಥಿರಮ್ ॥ 218

ಬಹೂನ್ ಪ್ರಕರಣ ಗ್ರಂಥಾನ್ ಪ್ರಣಿನಾಯ ಮಹಾಮನಾಃ ।
ಸುಖಬೋಧಾಯ ಶಾಸ್ತ್ರಸ್ಯ ತತ್ತ್ವಂ ವಿಜ್ಞಾತುಮಿಚ್ಛತಾಮ್ ॥ 219

ಭಕ್ತಿತತ್ತ್ವ ಪ್ರಧಾನಾನಿ ಸ್ತೋತ್ರಾಣಿ ಚ ಕವೀಶ್ವರಃ ।
ಗುಣಾಲಂಕಾರಶೋಭೀನಿ ಶ್ರವ್ಯೈರ್ಗ್ರಥಿತವಾನ್ ಪದೈಃ ॥ 220

ಹಂಚುತ್ತಿದ್ದೇನೆ. ನನ್ನದೆಂಬುದು ಇದರಲ್ಲಿ ಯಾವುದೂ ಇಲ್ಲ''. ಇವೇ ಮೊದಲಾದ ಮಾತುಗಳನ್ನಾಡಿ, ಮಹಾವಾಗ್ಮಿಗಳಾದ ಆಚಾರ್ಯರು ಸರ್ವಜನರನ್ನೂ ಒಲಿಸಿಕೊಂಡು ವೇದಸಂಮತವಾದ ಸ್ವಧರ್ಮವನ್ನು ಭಾರತದೇಶದಲ್ಲಿ ಸ್ಥಾಪಿಸಿದರು. ಇದಕ್ಕಿಂತಲೂ ಆಶ್ಚರ್ಯಕರವಾದ ಸಾಧನೆ ಇನ್ನಾವುದಿದ್ದೀತು? (216). ಆ ಮಹಾಪುರುಷರು ಶಿವ, ಗಣಪತಿ, ಸೂರ್ಯ, ಶಕ್ತಿದೇವತೆ, ವಿಷ್ಣು–ಎಂಬ ಐವರನ್ನು ಒಟ್ಟಿಗೆ ಪೂಜಿಸತಕ್ಕ ಪಂಚಾಯತನಪೂಜಾ ಪದ್ಧತಿಯನ್ನು ಪ್ರಚಾರಕ್ಕೆ ತಂದರು. (ದೇವರಲ್ಲಿ ತಾರತಮ್ಯವಿದೆಯೆಂದು ತಿಳಿದಿದ್ದ ಶೈವ, ಸೌರ ಮೊದಲಾದ) ಕರ್ಮಿಗಳಿಗೆ ಈಶ್ವರನೊಬ್ಬನೇ ಎಂದು ಬೋಧಿಸುವುದು ಇದರ ಉದ್ದೇಶವಾಗಿದೆ (217). ಈ ಪ್ರಕಾರವಾಗಿ ಶ್ರೀಶಂಕರಾಚಾರ್ಯರು ಭಾರತರಾಷ್ಟ್ರದಲ್ಲಿ ಹಗಲಿರುಳೂ ಪಾದಚಾರಿಗಳಾಗಿ ಸಂಚರಿಸಿ, ಸುಸ್ಥಿರವಾಗಿ ನಿಲ್ಲುವಂತೆ ವೈದಿಕಧರ್ಮವನ್ನು ಸ್ಥಾಪಿಸಿದರು (218) ಉದಾರಹೃದಯರಾದ ಆಚಾರ್ಯರು ವೇದಾಂತಶಾಸ್ತ್ರದ ಮುಖ್ಯ ಪ್ರಮೇಯವನ್ನು ತಿಳಿಯಲಿಚ್ಛಿಸುವ ಜನರಿಗೆ ಸುಖವಾಗಿ ಗೊತ್ತಾಗಲೆಂದು ಉಪದೇಶಸಾಹಸ್ರಿ, ವಿವೇಕಚೂಡಾಮಣಿ–ಮೊದಲಾದ ಬಹಳ ಪ್ರಕರಣಗ್ರಂಥಗಳನ್ನೂ ಬರೆದರು (219). ಅಲ್ಲದೆ ದೈವಭಕ್ತಿ, ವೇದಾಂತತತ್ತ್ವ–ಇವು ಪ್ರಧಾನವಾಗಿರುವ ನಾನಾ ದೇವತಾ ಸ್ತೋತ್ರ ಗಳನ್ನೂ ರಚಿಸಿದರು. ಆ ಕವಿಶ್ರೇಷ್ಠರು ರಚಿಸಿದ ಸ್ತೋತ್ರಗಳು ಶ್ರವ್ಯಪದಗಳಿಂದ ಗುಂಫಿತ ವಾಗಿ ಶಬ್ದಾರ್ಥಗಳ ಗುಣಗಳಿಂದಲೂ ಅಲಂಕಾರಗಳಿಂದಲೂ ಶೋಭಿಸುತ್ತಿವೆ (220).

ತತಃ ಕಾಶ್ಮೀರಕಾನ್ ಗತ್ವಾ ಪರಾಜಿತ್ಯಾಖಿಲಾನ್ ಬುಧಾನ್ ।
ಸರ್ವಜ್ಞಪೀಠಮಾರೂಢಃ ಸರ್ವಜ್ಞಃ ಶುಶುಭೇತರಾಮ್ ॥ 221

ಅಥ ಶಿಷ್ಯಾನ್ ಸಮುದ್ದಿಶ್ಯ ಪ್ರೋವಾಚ ಶುಭದರ್ಶನಃ ।
ಗುರುಭಿರ್ಮೇ ಯದಾಜ್ಞಪ್ತಂ ತತ್ಸರ್ವಂ ಸಾಧ್ವನುಷ್ಠಿತಮ್ ॥ 222

ಅಯಂ ಚ ವೈದಿಕೋ ಧರ್ಮೋ ಭಾರತೇ ತಿಷ್ಠತು ಸ್ಥಿರಮ್ ।
ಇತ್ಯಾಶಯೇನ ವಃ ಕಿಂಚಿದನುಶಾಸ್ಮಿ ಶುಭವ್ರತಾಃ ॥ 223

ಪ್ರಾಚ್ಯಾಮಯಾ ಶಾರದಾಪೀಠಂ ಶೃಂಗೇರ್ಯಾಂ ಸ್ಥಾಪಿತಂ ಖಲು ।
ಸುರೇಶ್ವರಃ ಪರಂ ಕಾರ್ಯಂ ತದಧಿಷ್ಠಾಯ ನಿರ್ವಹೇತ್ ॥ 224

ದ್ವಾರಕಾಯಾಂ ಬದರ್ಯಾಂ ಚ ಜಗನ್ನಾಥಪುರೇ ತಥಾ ।
ಸ್ಥಾಪನೀಯಾ ಮಠಾ ಏವಂ ಭಾರತೇ ದಿಕ್‌ಚತುಷ್ಟಯೇ ॥ 225

ಪದ್ಮಪಾದಸ್ತೋಟಕಶ್ಚ ಹಸ್ತಾಮಲಕ ಇತ್ಯಮೀ ।
ತ್ರಿಮೂರ್ತಯ ಇವೈತೇಷು ಪ್ರಕಾಶಂತಾಂ ಯಥಾಕ್ರಮಮ್ ॥ 226

ಅನಂತರ ಶ್ರೀಭಗವತ್ಪಾದರು ಕಾಶ್ಮೀರದೇಶಕ್ಕೆ ಹೋಗಿ ಅಲ್ಲಿ ನೆರೆದಿದ್ದ ಸಮಸ್ತ ವಿದ್ವಾಂಸರನ್ನೂ ಶಾಸ್ತ್ರಾರ್ಥವಾದಗಳಲ್ಲಿ ಸೋಲಿಸಿ, ಸರ್ವಜ್ಞ ಪೀಠವನ್ನೇರಿ ಸರ್ವಜ್ಞರೆಂಬ ವಿಖ್ಯಾತಿಯನ್ನು ಗಳಿಸಿ ವಿಶೇಷವಾಗಿ ಶೋಭಿಸಿದರು (221). ಅನಂತರ ಭವ್ಯಾಕೃತಿಯಿಂದ ಪ್ರಕಾಶಿಸುತ್ತಿದ್ದ ಆಚಾರ್ಯರು ತಮ್ಮ ಶಿಷ್ಯರನ್ನುದ್ದೇಶಿಸಿ ಈ ಪ್ರಕಾರವಾಗಿ ನುಡಿದರು: ''ಯತಿಧರ್ಮನಿರತರಾದ ಸಜ್ಜನರೆ, ನನ್ನ ಗುರುಗಳು ನನಗೆ ಯಾವ ಆಜ್ಞೆಯನ್ನು ಮಾಡಿದ್ದರೋ ಅದೆಲ್ಲವನ್ನೂ ವ್ಯವಸ್ಥಿತವಾಗಿ ಮಾಡಿದ್ದಾಯಿತು (222). ಈ ವೈದಿಕಧರ್ಮವು ನಮ್ಮ ಭರತ ಖಂಡದಲ್ಲಿ ಮುಂದೆಯೂ ಸ್ಥಿರವಾಗಿ ನಿಂತಿರಬೇಕು. ಈ ಆಶಯದಿಂದ, ಶುಭವ್ರತರಾದ ನಿಮಗೆ ಒಂದು ಆದೇಶವನ್ನೀಯಲು ಇಚ್ಛಿಸುತ್ತೇನೆ (223). ಹಿಂದೆ ನಾನು ಶೃಂಗೇರಿಯಲ್ಲಿ ಶ್ರೀಶಾರದಾ ಪೀಠವನ್ನು ಸ್ಥಾಪಿಸಿದ್ದೇನಷ್ಟೆ. ಸುರೇಶ್ವರಾಚಾರ್ಯನು ಆ ಪೀಠದ ಅಧಿಪತಿಯಾಗಿ ಮುಂದಿನ ಕಾರ್ಯಭಾರವನ್ನು ನಿರ್ವಹಿಸಬೇಕು (224). ಶೃಂಗೇರೀ ಪೀಠದಂತೆಯೇ ಭರತಖಂಡದ ನಾಲ್ಕು ದಿಕ್ಕುಗಳಲ್ಲಿ – ದ್ವಾರಕೆ, ಬದರೀ, ಜಗನ್ನಾಥಪುರಿಗಳಲ್ಲಿ– ಹೀಗೆಯೇ ಮಠಗಳನ್ನು ಸ್ಥಾಪಿಸತಕ್ಕದ್ದು (225). ದ್ವಾರಕೆಯಲ್ಲಿ ಪದ್ಮಪಾದನೂ ಬದರಿಯಲ್ಲಿ ತೋಟಕನೂ ಜಗನ್ನಾಥಪುರಿಯಲ್ಲಿ ಹಸ್ತಾಮಲಕನೂ ತ್ರಿಮೂರ್ತಿಗಳಂತೆ ಯಥಾಕ್ರಮದಲ್ಲಿ ಮಠಾಧಿಪತಿಗಳಾಗಿ ಪ್ರಕಾಶಿಸುತ್ತಿರಲಿ (226). ಇದೇ

ಯಥಾರ್ಹಮೇವಮನ್ಯತ್ರ ವ್ಯಾಖ್ಯಾನಾಧ್ಯಾಪನಾದಿಭಿಃ ।
ವೇದಾನಾಂ ರಕ್ಷಣೇ ಭೂಯಃ ಪ್ರಯತಧ್ವಂ ಸದಧ್ವನಿ ॥ 227

ಸಂಪ್ರದಾಯಃ ಸದಾ ಪಾಲ್ಯೋ ಗುರುಶಿಷ್ಯಕ್ರಮಾಗತಃ ।
ರಮಧ್ವಮದ್ವಯೇ ಸಚ್ಚಿದಾನಂದೇ ಪರಮಾತ್ಮನಿ ॥ 228

ಶುದ್ಧಚಿತ್ತೈಶ್ಚ ಯುಷ್ಮಾಭಿರ್ಬಹುಧಾ ಸೇವಿತೋಽಸ್ಮ್ಯಹಮ್ ।
ಮಂಗಲಂ ಕುರುತಾದ್ದೇವಃ ಸರ್ವೇಷಾಂ ಪ್ರಭುರದ್ವಯಃ ॥ 229

ಅಭಿಧಾಯೇತ್ಥಮಾಚಾರ್ಯೋ ವಿಸಸರ್ಜಾಖಿಲಾನ್ ಯತೀನ್ ।
ಬಾಷ್ಪಪೂರ್ಣಮುಖಾಃ ಶಿಷ್ಯಾ ನಿರ್ಜಗ್ಮುರ್ಗುರುಶಾಸನಾತ್ ॥ 230

ಅಥ ಶ್ರೀಶಂಕರಾಚಾರ್ಯೋ ಬದರೀಂ ಪ್ರಾಪ್ಯ ಕಾನಿಚಿತ್ ।
ದಿನಾನಿ ನ್ಯವಸತ್ತತ್ರ ಧ್ಯಾಯನ್ ನಾರಾಯಣಂ ವಿಭುಮ್ ॥ 231

ತತಃ ಕೇದಾರಮಾಚಾರ್ಯಃ ಪ್ರಯಯೌ ಸ ಯದೃಚ್ಛಯಾ ।
ಬ್ರಹ್ಮಾದಿದೇವತಾಯಾಚ್ಞಾಂ ಸಂಮಾನ್ಯ ಸ ಗುರೂತ್ತಮಃ ॥ 232

ರೀತಿಯಲ್ಲಿ ಅರ್ಹವಾದ ಇತರ ಸ್ಥಳಗಳಲ್ಲಿಯೂ ಪ್ರವಚನ, ಶಾಸ್ತ್ರಾಧ್ಯಾಪನಾದಿಗಳಿಂದ ವೇದಗಳ ರಕ್ಷಣೆಗಾಗಿ ಸನ್ಮಾರ್ಗದಲ್ಲಿ ವಿಶೇಷಪ್ರಯತ್ನ ಮಾಡಿರಿ (227). ಗುರುಶಿಷ್ಯಕ್ರಮದಿಂದ ಬಂದ ಸಂಪ್ರದಾಯವು ಬಹಳ ಮುಖ್ಯವಾದ್ದರಿಂದ ಅದನ್ನು ಸದಾ ಪಾಲಿಸಬೇಕು. ಹೀಗೆಮಾಡುತ್ತ ಯತಿಗಳೇ, ಅದ್ವಿತೀಯನೂ ಸಚ್ಚಿದಾನಂದನೂ ಆದ ಪರಮಾತ್ಮನನ್ನು ಧ್ಯಾನಿಸುತ್ತ ಪರಮಾನಂದವನ್ನು ಅನುಭವಿಸಿರಿ(228). ಶುದ್ಧಚಿತ್ತರಾದ ನೀವೆಲ್ಲರೂ ನನ್ನನ್ನು ಬಹುವಿಧದಲ್ಲಿ ಸೇವಿಸಿದ್ದೀರಿ. ಸರ್ವರಿಗೂ ಪ್ರಭುವಾಗಿ ಅದ್ವಿತೀಯನಾಗಿರುವ ಪರಮೇಶ್ವರನು ನಿಮ್ಮೆಲ್ಲರಿಗೂ ಮಂಗಳವನ್ನುಂಟು ಮಾಡಲಿ!'' ಎಂದು ನುಡಿದು ಶ್ರೀಶಂಕರ ಭಗವತ್ಪಾದರು ಎಲ್ಲ ಯತಿಗಳನ್ನೂ ಕಳಿಸಿಬಿಟ್ಟರು! ಆ ಶಿಷ್ಯರು ಕಣ್ಣೀರು ತುಂಬಿಕೊಂಡು ಗುರುಗಳ ಆಜ್ಞೆಯನ್ನು ಮೀರಲಾರದೆ ಅಲ್ಲಿಂದ ನಿಷ್ಕ್ರಮಿಸಿದರು (229–230).

ಆಮೇಲೆ ಆಚಾರ್ಯರು ಬದರಿಕಾಶ್ರಮಕ್ಕೆ ತೆರಳಿ ವಿಭುವಾದ ಶ್ರೀಮನ್ನಾರಾಯಣನನ್ನು ಧ್ಯಾನಿಸುತ್ತ ಕೆಲವು ದಿನಗಳವರೆಗೆ ಇದ್ದರು. ಅನಂತರ ತಮ್ಮ ಇಚ್ಛೆ ಬಂದಂತೆ ಕೇದಾರಕ್ಕೆ ಹೋದರು. ಅಲ್ಲಿ ಬ್ರಹ್ಮಾದಿದೇವತೆಗಳ ಪ್ರಾರ್ಥನೆಯನ್ನು ಮನ್ನಿಸಿ, ಗುರುಶ್ರೇಷ್ಠರಾದ ಶ್ರೀಶಂಕರಭಗವತ್ಪಾದರು ಪರಬ್ರಹ್ಮದಲ್ಲಿ ಏಕಾಗ್ರಚಿತ್ತರಾಗಿ ನಿರ್ವಿಕಲ್ಪಕ ಸಮಾಧಿಯನ್ನವಲಂಬಿಸಿ, ಮಾನವದೇಹವನ್ನು ವಿಸರ್ಜಿಸಿ, ಸ್ವಸ್ವರೂಪದಲ್ಲಿ ನಿಂತರು (231–233).

ಪರಂ ಸಮಾಧಿಮಾಸ್ಥಾಯ ಬ್ರಹ್ಮನಿರ್ವಿಷ್ಟಮಾನಸಃ ।
ದೇಹಂ ವಿಸೃಜ್ಯ ಭಗವಾನ್ ಸ್ವಸ್ವರೂಪೇ ವ್ಯವಸ್ಥಿತಃ ॥ 233

ಚರಿತ್ರಮೇತತ್ ಪ್ರಥಿತಂ ಜಗದ್ಗುರೋಃ
ವಹಿತ್ರಮಾಢ್ಯಂ ತರತಾಂ ಭವಾಂಬುಧಿಮ್ ।
ಪವಿತ್ರಮಂತ್ರಂ ಜನಚಿತ್ತಶೋಧಕಂ
ಪಠನ್ನವಾಪ್ನೋತಿ ಶಮಾದಿಸಂಪದಮ್ ॥ 234

★

ನಮಸ್ತೇ ಶಂಕರಾಚಾರ್ಯಭಗವತ್ಪಾದಮೂರ್ತಯೇ ।
ದಿಗಂತಾಕ್ರಾಂತಶುಭ್ರಶ್ರೀ ಚಂದ್ರಿಕಾಸ್ವಚ್ಛಕೀರ್ತಯೇ ॥ 235

ನಮೋಽಸ್ತು ಗುರವೇ ತುಭ್ಯಂ ಯೇನ ವೇದಾಃ ಸುರಕ್ಷಿತಾಃ ।
ಯೇನ ಭಾರತದೇಶೋಽಯಮೇಕರಾಷ್ಟ್ರೀಕೃತಃ ಸ್ವಯಮ್ ॥ 236

ಸೌಖ್ಯಾಯ ಸರ್ವಮರ್ತ್ಯಾನಾಂ ಸರ್ವಧರ್ಮಸಮನ್ವಯಃ ।
ಯದ್ಬೋಧಾಜ್ಜಾಯತೇ ತಸ್ಮೈ ನಮಸ್ತೇಽಸ್ತು ಜಗದ್ಗುರೋ ॥ 237

ನಮಃ ಶ್ರೀಗುರವೇ ತುಭ್ಯಂ ಯದೀಯಗ್ರಂಥಸೌರಭಮ್ ।
ಭೃಶಮಾಘ್ರಾಯ ಮೋದಂತೇ ವಿದ್ವಾಂಸೋ ವಿಶ್ವವರ್ತಿನಃ ॥ 238

ಇದು ಜಗದ್ಗುರುಗಳ ಪ್ರಸಿದ್ಧವಾದ ಪುಣ್ಯಚರಿತೆ. ಸಂಸಾರ ಸಾಗರವನ್ನು ದಾಟತಕ್ಕವರಿಗೆ ದೃಢವಾದ ನೌಕೆ. ಇದು ಮಾನವರ ಚಿತ್ತವನ್ನು ಶುದ್ಧಿಗೊಳಿಸುವ ಪವಿತ್ರ ಮಂತ್ರ. ಇದನ್ನು ಪಠಿಸತಕ್ಕವರು ಶಮದಮಾದಿ ಸಂಪತ್ತಿಯನ್ನು ಪಡೆದುಕೊಳ್ಳುವರು (234).

ಶ್ರೀಶಂಕರ ಭಗವತ್ಪಾದಾಚಾರ್ಯ ಸ್ವರೂಪರಾಗಿ ವಿರಾಜಿಸುವ ನಿಮಗೆ ನಮಸ್ಕಾರ. ಶುಭ್ರವಾದ ಬೆಳದಿಂಗಳಿನಂತೆ ಸ್ವಚ್ಛವಾದ ನಿಮ್ಮ ಕೀರ್ತಿಯು ಸಕಲ ದಿಗಂತಗಳವರೆಗೆ ಹರಡಿಕೊಂಡಿದೆ! (235). ವೇದಗಳನ್ನು ಸಂರಕ್ಷಿಸಿದ ಗುರುಗಳಾದ ನಿಮಗೆ ನಮಸ್ಕಾರ. ನಿಮ್ಮ ಪ್ರಯತ್ನದಿಂದ ಈ ಭಾರತದೇಶವು ತಾನಾಗಿ ಏಕರಾಷ್ಟ್ರವಾಗಿ ತಾನೇ ಕೂಡಿ ಕೊಂಡಿದೆ (236). ನಿಮ್ಮ ಬೋಧನೆಯಿಂದ ಸರ್ವಮಾನವರ ಸುಖಕ್ಕೆ ಕಾರಣವಾದ ಸರ್ವಧರ್ಮ ಸಮನ್ವಯವು ಆಗಿಬಿಡುತ್ತದೆ. ಅಂತಹ ಬೋಧನೆಯನ್ನು ನೀಡಿದ ಜಗದ್ಗುರುಗಳಾದ ನಿಮಗೆ ನಮಸ್ಕಾರ (237). ನಿಮ್ಮ ಗ್ರಂಥಗಳ ಸುಗಂಧವನ್ನು ಆಘ್ರಾಣಿಸಿ ವಿಶ್ವದಲ್ಲಿರುವ ವಿದ್ವಾಂಸರು ತುಂಬ ಸಂತೋಷಪಡುತ್ತಿದ್ದಾರೆ. ಅಂತಹ ಮಹಾತ್ಮರಾದ ನಿಮಗೆ ನಮಸ್ಕಾರ(238). ನಿಮ್ಮ ಮೂವತ್ತೆರಡನೆಯ ವರ್ಷವಯಸ್ಸಿನ ಒಳಗೆ ಇಷ್ಟು ಅಗಾಧವಾದ ಕಾರ್ಯವೈಭವವನ್ನು

ದ್ವಾತ್ರಿಂಶವತ್ಸರಾದರ್ವಾಗೀದೃಕ್ ತೇ ಕೃತಿವೈಭವಮ್ ।
ಸರ್ವಜ್ಞಃ ಶಂಕರೋಽಸಿ ತ್ವಾಂ ನಮಸ್ಕುರ್ಮೋ ಯಥಾಬಲಮ್ ॥ 239

★

ರಂಗನಾಥಾಭಿಧಃ ಕಶ್ಚಿತ್ ಪೀತ್ವಾ ಗುರುಕಥಾಮೃತಮ್ ।
ಆಚಾರ್ಯಚರ್ಯಾಮಾಶ್ಚರ್ಯಾಮಕ್ಷಯ್ಯಾಂ ತನ್ಮನಾ ಜಗೌ ॥ 240

— ಓಂ ತತ್ ಸತ್ —

★ ★ ★

ಮರೆಸಿಬಿಟ್ಟಿದ್ದೀರಿ. ಓ ಜಗದ್ಗುರುಗಳೆ, ನೀವು ಸರ್ವಜ್ಞನಾದ ಶ್ರೀಶಂಕರನೇ ಆಗಿದ್ದೀರಿ. ನಿಮಗೆ ಯಥಾಶಕ್ತಿಯಾಗಿ ಅಡ್ಡಬಿದ್ದು ನಮಸ್ಕರಿಸುತ್ತೇವೆ! (239). ರಂಗನಾಥನೆಂಬ ಹೆಸರುಳ್ಳವನೊಬ್ಬನು ಜಗದ್ಗುರುಗಳ ಕಥಾಮೃತವನ್ನು ಕುಡಿದು, ಎಂದಿಗೂ ಅಕ್ಷಯವಾಗಿ ನಿಲ್ಲುವ ಆಶ್ಚರ್ಯಕರವಾದ ಆಚಾರ್ಯರ ಈ ಕೃತಿಯನ್ನು ಅವರನ್ನೇ ಧ್ಯಾನಿಸುತ್ತ ಹಾಡಿದನು.

— ಓಂ ತತ್ ಸತ್ —

ಅನುಬಂಧ – ೧

ಪರಬ್ರಹ್ಮ

1. ಶ್ರುತ್ಯವಗಾಹ್ಯಮೇವೇದಮತಿಗಂಭೀರಂ ಬ್ರಹ್ಮ ನ ತರ್ಕಾವಗಾಹ್ಯಮ್ ॥

– ಸೂ. ಭಾ. 2–1–31

ಅತಿಗಂಭೀರವಾದ ಈ ಬ್ರಹ್ಮವು ಶ್ರುತಿಯಿಂದ ಮಾತ್ರ ಗೋಚರವಾಗುತ್ತದೆ. ಅದು ತರ್ಕಕ್ಕೆ ನಿಲುಕತಕ್ಕದ್ದಲ್ಲ.

2. ವಾಙ್ಮನಸಾತೀತಮವಿಷಯಾಂತಃಪಾತಿ ಪ್ರತ್ಯಗಾತ್ಮಭೂತಂ ನಿತ್ಯಶುದ್ಧಬುದ್ಧ–ಮುಕ್ತಸ್ವಭಾವಂ ಬ್ರಹ್ಮ ॥

– ಸೂ. ಭಾ. 3–2–22

ವಾಙ್ಮನಸ್ಸುಗಳಿಗೆ ನಿಲುಕದ, ಶಬ್ದಾದಿ ವಿಷಯಗಳಲ್ಲಿ ಸೇರದಿರುವ, ಪ್ರತ್ಯಗಾತ್ಮವಾಗಿ ನಿತ್ಯಶುದ್ಧಬುದ್ಧಮುಕ್ತಸ್ವಭಾವವುಳ್ಳದ್ದೇ ಬ್ರಹ್ಮ.

3. ನಿರ್ಗುಣಮಪಿ ಸದ್‌ಬ್ರಹ್ಮ ನಾಮರೂಪಗತೈರ್ಗುಣೈಃ ಸಗುಣಮುಪಾಸ–ನಾರ್ಥಂ ತತ್ರ ತತ್ರ ಉಪದಿಶ್ಯತೇ । ಸರ್ವಗತಸ್ಯಾಪಿ ಬ್ರಹ್ಮಣಃ ಉಪಲಬ್ಧ್ಯರ್ಥಂ ಸ್ಥಾನವಿಶೇಷೋ ನ ವಿರುಧ್ಯತೇ, ಶಾಲಗ್ರಾಮ ಇವ ವಿಷ್ಣೋಃ ॥

– ಸೂ. ಭಾ. 1–2–14

ಬ್ರಹ್ಮವು ನಿರ್ಗುಣವಾಗಿದ್ದರೂ ಸಹ ನಾಮರೂಪ ಸಂಬಂಧಿಗಳಾದ ಗುಣಗಳಿಂದ ಸಹಿತವಾಗಿ ಉಪಾಸನೆಗೋಸ್ಕರ ಅಲ್ಲಲ್ಲಿ ಉಪದಿಷ್ಟವಾಗಿರುತ್ತದೆ. ಬ್ರಹ್ಮವು ಸರ್ವತ್ರ ಇದ್ದರೂ ಸಹ ಉಪಾಸನೆಗೋಸ್ಕರ ವಿಗ್ರಹಾದಿ ಸ್ಥಾನವಿಶೇಷವನ್ನು ಹೇಳಿರುವುದು ವಿರುದ್ಧವಲ್ಲ. ಸಾಲಗ್ರಾಮದಲ್ಲಿ ವಿಷ್ಣುವನ್ನು ಉಪಾಸನೆ ಮಾಡಿದಂತೆ ವಿರೋಧವೇನೂ ಇಲ್ಲ.

ತರ್ಕ

4. ತಾರ್ಕಿಕೋ ಹಿ ಅನಾಗಮಜ್ಞಃ ಸ್ವಬುದ್ಧಿಪರಿಕಲ್ಪಿತಂ ಯತ್ಕಿಂಚಿದೇವ ವದತಿ ॥

– ಕಠ. 1–2–9

ತಾರ್ಕಿಕನು ವೇದಜ್ಞನಲ್ಲ ; ಅವನು ತನ್ನ ಬುದ್ಧಿಯಿಂದ ಕಲ್ಪಿಸಿ ಏನನ್ನಾದರೂ ಹೇಳಿಬಿಡುತ್ತಾನೆ !

5. ನ ಧರ್ಮಜಿಜ್ಞಾಸಾಯಾಮಿವ ಶ್ರುತ್ಯಾದಯ ಏವ ಪ್ರಮಾಣಂ ಬ್ರಹ್ಮಜಿಜ್ಞಾಸಾಯಾಮ್ ।

ಕಿಂತು ಶ್ರುತ್ಯಾದಯೋऽನುಭವಾದಯಶ್ಚ ಯಥಾಸಂಭವಮಿಹ ಪ್ರಮಾಣಮ್, ಅನುಭವಾವಸಾನತ್ವಾತ್ ಭೂತವಸ್ತುವಿಷಯತ್ವಾಚ್ಚ ಬ್ರಹ್ಮಜ್ಞಾನಸ್ಯ ॥

– ಸೂ. ಭಾ. 1–1–2

ಧರ್ಮಜಿಜ್ಞಾಸೆಯಲ್ಲಿ ಶ್ರುತಿಸ್ಮೃತಿಪುರಾಣಗಳು ಮಾತ್ರ ಪ್ರಮಾಣಗಳು. ಬ್ರಹ್ಮಜಿಜ್ಞಾಸೆಯಲ್ಲಿ ಹಾಗಲ್ಲ. ಇದರಲ್ಲಿ ಶ್ರುತ್ಯಾದಿಗಳೂ ಅನುಭವಾದಿಗಳೂ ಸಹ ಯಥಾಸಂಭವವಾಗಿ ಪ್ರಮಾಣವಾಗುತ್ತವೆ. ಏಕೆಂದರೆ, ಬ್ರಹ್ಮಜ್ಞಾನವು ಅನುಭವಕ್ಕೆ ಬರತಕ್ಕದ್ದಾಗಿದೆ ಮತ್ತು ಸತ್ಯವಾಗಿ ಈಗಲೇ ಇರತಕ್ಕ ವಸ್ತುವಿನ ವಿಷಯವಾಗಿದೆ. (ಧರ್ಮವು ಈಗ ಇರತಕ್ಕದ್ದಲ್ಲ; ಕೃತಿಯಿಂದ ಮುಂದೆ ಹುಟ್ಟತಕ್ಕದ್ದು)

ಟಿಪ್ಪಣಿ : ಅನುಭವಾದಿಗಳು = ಅನುಭವ, ತರ್ಕ, ದೃಷ್ಟಾಂತಗಳು.

ಶಾಸ್ತ್ರ

6. ಜ್ಞಾಪಕಂ ಹಿ ಶಾಸ್ತ್ರಂ ನ ತು ಕಾರಕಮಿತಿ ಸ್ಥಿತಿಃ ॥

– ಬೃಹ.ಭಾ. 1–4–10

ಶಾಸ್ತ್ರವು ಜ್ಞಾಪಕವೇ ಹೊರತು ಕಾರಕವಲ್ಲವೆಂಬುದು ವಸ್ತುಸ್ಥಿತಿಯಾಗಿರುತ್ತದೆ.

ಟಿಪ್ಪಣಿ :

ಪ್ರತ್ಯಕ್ಷ ಮತ್ತು ಅನುಮಾನಗಳಿಂದ ಗೊತ್ತಾಗದ ವಿಷಯವನ್ನು ಶಾಸ್ತ್ರವು ತಿಳಿಸಿಕೊಡುತ್ತದೆ. ಹೀಗೆ ಮಾಡಬೇಕು – ಎಂದು ಮಾಡಿಸುವುದು ಶಾಸ್ತ್ರದ ಕೆಲಸವಲ್ಲ. ಹೀಗೆ ಆಚರಿಸಿದರೆ ಇಂತಹ ಫಲ ಉಂಟು. ಹೀಗೆ ಆಚರಿಸಿದರೆ ಕೆಟ್ಟದಾಗುತ್ತದೆ – ಎಂದು ವಿಧಿನಿಷೇಧ ಶಾಸ್ತ್ರಗಳು ತಿಳಿಸಿಕೊಡುತ್ತವೆ. ಮಾಡುವುದು ಬಿಡುವುದು ಕರ್ತನ ಇಚ್ಛೆಗೆ ಸೇರಿದ್ದು.

7. ಅಸಂಪ್ರದಾಯವಿತ್ ಸರ್ವಶಾಸ್ತ್ರವಿದಪಿ ಮೂರ್ಖವದೇವ ಉಪೇಕ್ಷಣೀಯಃ॥

– ಗೀತಾಭಾಷ್ಯ 13–2

ಗುರುಶಿಷ್ಯ ಸಂಪ್ರದಾಯವನ್ನರಿಯದವನು ಸರ್ವಶಾಸ್ತ್ರಗಳನ್ನು ಬಲ್ಲವನಾಗಿದ್ದರೂ ಸಹ ಮೂರ್ಖನೆಂದು ಉಪೇಕ್ಷಿಸಬೇಕು.

ಟಿಪ್ಪಣಿ :

ಅನುಭವಿಗಳಾದ ಆಚಾರ್ಯರ ಉಪದೇಶಪರಂಪರೆಯಿಂದ ಬಂದದ್ದು ಸಂಪ್ರದಾಯ. ಅದಕ್ಕೆ ವಿರುದ್ಧವಾಗಿ ವಿದ್ವಾಂಸನು ಬೇರೆ ಅರ್ಥವನ್ನು ಸ್ವಬುದ್ಧಿಯಿಂದ ಕಲ್ಪಿಸಿ ಹೇಳಿದರೆ ಅದು ಗ್ರಾಹ್ಯವಲ್ಲ.

ವೇದ–ಉಪನಿಷತ್

8. ನ ಹಿ ಈದೃಶಸ್ಯ ಶಾಸ್ತ್ರಸ್ಯ ಋಗ್ವೇದಾದಿಲಕ್ಷಣಸ್ಯ ಸರ್ವಜ್ಞಗುಣಾನ್ವಿತಸ್ಯ ಸರ್ವಜ್ಞಾದನ್ಯತಃ ಸಂಭವೋಽಸ್ತಿ।

– ಸೂ. ಭಾ. 1–1–3.

ಋಗ್ವೇದಾದಿ ಶಾಸ್ತ್ರವು ಸರ್ವಾರ್ಥಪ್ರಕಾಶನ ಸಮರ್ಥವಾಗಿ ಸರ್ವಜ್ಞಗುಣಗಳಿಂದ ಕೂಡಿದೆ. ಇಂತಹ ವೇದವು ಸರ್ವಜ್ಞನಾದ ಈಶ್ವರನಿಂದಲ್ಲದೆ ಇನ್ನೊಬ್ಬನಿಂದ ಉತ್ಪನ್ನವಾಗಲಾರದು.

9. ಶ್ರುತಿಶ್ಚ ನಃ ಪ್ರಮಾಣಮತೀಂದ್ರಿಯಾರ್ಥವಿಜ್ಞಾನೋತ್ಪತ್ತೌ॥

– ಸೂ. ಭಾ. 2–3–1

ಇಂದ್ರಿಯಗೋಚರವಲ್ಲದ ವಸ್ತುವಿನ ಜ್ಞಾನಕ್ಕೆ ಶ್ರುತಿಯೇ ನಮಗೆ ಪ್ರಮಾಣವು.

ಜೀವ

10. ನ ಚ ವಿಜ್ಞಾನಾತ್ಮಾ ಪರಮಾತ್ಮನೋ ವಸ್ತ್ವಂತರಮ್ ॥

– ಬೃಹ.ಭಾ. 2–3–6

ವಿಜ್ಞಾನಾತ್ಮನಾದ ಜೀವನು ಪರಮಾತ್ಮನಿಗಿಂತ ಭಿನ್ನವಾದ ಇನ್ನೊಂದು ವಸ್ತುವಲ್ಲ.

11. ನ ಹಿ ಜೀವೋ ನಾಮ ಅತ್ಯಂತಭಿನ್ನೋ ಬ್ರಹ್ಮಣಃ। ಬುದ್ಧ್ಯಾದ್ಯುಪಾಧಿಕೃತಂ ತು ವಿಶೇಷಮಾಶ್ರಿತ್ಯ ಬ್ರಹ್ಮೈವ ಸನ್ ಜೀವಃ ಕರ್ತಾ ಭೋಕ್ತಾಚೇತ್ಯುಚ್ಯತೇ॥

– ಸೂ. ಭಾ. 1–1–37

ಜೀವನು ನಿಜವಾಗಿ ಬ್ರಹ್ಮಕ್ಕಿಂತ ಬೇರೆಯಾದವನಲ್ಲ. ಬುದ್ಧಿ, ಶರೀರ ಮುಂತಾದ ಉಪಾಧಿ ವಿಶೇಷಗಳನ್ನು ಹೊಂದಿ, ಸ್ವತಃ ಬ್ರಹ್ಮವೇ ಆಗಿದ್ದರೂ ಅದನ್ನು ಜೀವ, ಕರ್ತಾ, ಭೋಕ್ತಾ ಎಂದು ಕರೆಯುತ್ತಾರೆ.

ಈಶ್ವರ

12. ನಿತ್ಯನಿರತಿಶಯ ಜ್ಞಾನಶಕ್ತ್ಯುಪಾಧಿರಾತ್ಮಾ ಅಂತರ್ಯಾಮೀ ಈಶ್ವರ ಉಚ್ಯತೇ ॥

– ಬೃಹ. 3–8–12

ನಿತ್ಯವೂ ನಿರತಿಶಯವೂ ಆದ ಜ್ಞಾನಶಕ್ತಿಯೆಂಬ (ಅದಕ್ಕೆ ಕಾರಣವಾದ ಮಾಯಾಶಕ್ತಿಯೆಂಬ) ಉಪಾಧಿಯಿಂದ ಸಹಿತನಾದ ಆತ್ಮನು ಅಂತರ್ಯಾಮಿಯೆಂದೂ ಈಶ್ವರನೆಂದೂ ಉಕ್ತನಾಗಿದ್ದಾನೆ.

ಆತ್ಮ

13. ಆತ್ಮನಶ್ಚ ಪ್ರತ್ಯಾಖ್ಯಾತುಮಶಕ್ಯತ್ವಾತ್ ।
ಯ ಏವ ನಿರಾಕರ್ತಾ ತಸ್ಯೈವ ಆತ್ಮತ್ವಾತ್ ॥

ಸೂ. ಭಾ. 1–1–4

ಆತ್ಮನು ಇಲ್ಲವೆಂದು ನಿರಾಕರಿಸಲಾಗುವುದಿಲ್ಲ. ಏಕೆಂದರೆ, ಯಾವನು ಆತ್ಮನಿಲ್ಲವೆಂದು ನಿರಾಕರಿಸುತ್ತಾನೋ ಅವನೇ ಆತ್ಮನಾಗಿರುತ್ತಾನೆ.

14. ಜಾನನ್ನಜಾನಂಶ್ಚ ಸರ್ವೋ ಜಂತುಃ ಸದ್‌ಬ್ರಹ್ಮೈವ ॥

– ಛಾಂ. 8–3–3

ತಾನು ಬ್ರಹ್ಮವೆಂದು ತಿಳಿಯಲಿ, ತಿಳಿಯದಿರಲಿ, ಸರ್ವಪ್ರಾಣಿಯೂ ಬ್ರಹ್ಮವಾಗಿಯೇ ಇರುತ್ತದೆ.

15. ತಾಮಸೋ ಹಿ ಪ್ರತ್ಯಯಃ ಆವರಣಾತ್ಮಕತ್ವಾದವಿದ್ಯಾ, ವಿಪರೀತಗ್ರಾಹಕಃ, ಸಂಶಯೋತ್ಥಾಪಕಃ, ಅಗ್ರಹಣಾತ್ಮಕೋ ವಾ ॥

– ಗೀತಾ ಭಾಷ್ಯ. 13–2

ಅವಿದ್ಯೆಯೆಂಬುದು ತಾಮಸವಾದ ಜ್ಞಾನ. ಅದು ಮುಸುಕಿನಂತೆ ಸತ್ಯವನ್ನು ಮರೆಮಾಡಿ ವಸ್ತುವನ್ನು ವಿರುದ್ಧವಾಗಿ ಗ್ರಹಿಸುವಂತೆಯೋ ಸಂಶಯವನ್ನುಂಟು ಮಾಡುವಂತೆಯೋ ವಿಷಯವೇನನ್ನೂ ಗ್ರಹಿಸದಂತೆಯೋ ಮಾಡಿಬಿಡುತ್ತದೆ.

ಟಿಪ್ಪಣಿ :

ವಿರುದ್ಧಜ್ಞಾನ, ಸಂಶಯ, ಜ್ಞಾನಾಭಾವ – ಎಂಬಿವು ಅವಿದ್ಯೆಯ ಮೂರು ವಿಧಗಳು.

16. ಯದ್ರೂಪೇಣ ಯನ್ನಿಶ್ಚಿತಂ ತದ್ರೂಪಂ ನ ವ್ಯಭಿಚರತಿ ತತ್ ಸತ್ಯಮ್ ।
ಯದ್ರೂಪೇಣ ಯನ್ನಿಶ್ಚಿತಂ ತದ್ರೂಪಂ ವ್ಯಭಿಚರತ್ ಅನೃತಮಿತ್ಯುಚ್ಯತೇ।
ಅತೋ ವಿಕಾರೋಽನೃತಮ್ ॥

ತೈ. ಬ್ರ. 1

ಯಾವುದು ಯಾವ ಸ್ವರೂಪದ್ದೆಂದು ನಿಶ್ಚಿತವಾಗಿದೆಯೋ ಅದು ತನ್ನ ಸ್ವರೂಪವನ್ನು ಎಂದಿಗೂ ಬದಲಾಯಿಸದಿದ್ದರೆ ಅದು ಸತ್ಯ. ಯಾವುದು ತನ್ನ ನಿಶ್ಚಿತ ಸ್ವರೂಪವನ್ನು ಬದಲಾಯಿಸುವುದೋ ಅದು ಮಿಥ್ಯೆ. ಆದ್ದರಿಂದ ವಿಕಾರವೆಲ್ಲವೂ ಮಿಥ್ಯೆ. (ಜಗತ್ತಿನಲ್ಲಿ ಕಾಣುವ ಎಲ್ಲ ವಸ್ತುವೂ ತನ್ನ ಸ್ವರೂಪವನ್ನು ಕಾಲಾಂತರದಲ್ಲಿ ಬದಲಾಯಿಸುತ್ತದೆ. ಆದ್ದರಿಂದ ಜಗತ್ತು ವಿಕಾರ. ವಿಕಾರವಾದ್ದರಿಂದ ಮಿಥ್ಯೆ)

ಅಧಿಕಾರ

17. ವಿರಕ್ತಸ್ಯ ಹಿ ಸಂಸಾರಾತ್ ಭಗವತ್ತತ್ತ್ವ ಜ್ಞಾನೇ ಅಧಿಕಾರಃ ನಾನ್ಯಸ್ಯ॥

ಗೀತಾಭಾಷ್ಯ 15–1

ಸಂಸಾರದಲ್ಲಿ ವಿರಕ್ತನಾದವನಿಗೆ ಭಗವಂತನ ತತ್ತ್ವವನ್ನು ಅರಿತುಕೊಳ್ಳುವುದಕ್ಕೆ ಅಧಿಕಾರ ಬರುತ್ತದೆ. ವಿರಕ್ತನಲ್ಲದವನಿಗೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರವಿಲ್ಲ.

18. ಸರ್ವೇಷಾಂ ಚಾಧಿಕಾರೋ ವಿದ್ಯಾಯಾಮ್ ॥

– ತೈ. ಶೀಕ್ಷಾ. ಭಾ. 11

(ವಿರಕ್ತರಾದ) ಎಲ್ಲ ಜಾತಿಯವರಿಗೂ ಬ್ರಹ್ಮ ವಿದ್ಯೆಯಲ್ಲಿ ಅಧಿಕಾರ ಉಂಟು.

ಟಿಪ್ಪಣಿ : ವೈರಾಗ್ಯ, ಅರ್ಥಿತ್ವ, ತಿಳಿದುಕೊಳ್ಳುವ ಸಾಮರ್ಥ್ಯ – ಮುಂತಾದ ಯೋಗ್ಯತೆಗಳಿದ್ದವರೆಲ್ಲರೂ ವಿದ್ಯೆಯಲ್ಲಿ ಅಧಿಕಾರಿಗಳು. ಶೂದ್ರರಿಗೂ ಅಧಿಕಾರವಿದೆ. ಆದರೆ ಶೂದ್ರರಿಗೆ ವೇದಪೂರ್ವಕವಾಗಿ ಅಧಿಕಾರವಿಲ್ಲ. ಸ್ಮೃತಿ, ಪುರಾಣ ಮುಂತಾದ ಇತರ ಗ್ರಂಥಗಳಿಂದ ಅವರು ವಿದ್ಯಾವಂತರಾಗಬಹುದು. (ನೋಡಿ. ಸೂ. ಭಾ. 1–38).

ಕರ್ಮಾನುಷ್ಠಾನ

19. ಬ್ರಹ್ಮಕ್ಷತ್ರೇ ಪರಿಪಾಲಿತೇ ಜಗತ್ ಪರಿಪಾಲಯಿತುಮಲಮ್ ॥

– ಗೀತಾಭಾಷ್ಯ – 4–1

ಬ್ರಾಹ್ಮಣ್ಯ ಮತ್ತು ಕ್ಷತ್ರಿಯಧರ್ಮಗಳನ್ನು ಸರಿಯಾಗಿ ಪಾಲಿಸಿದರೆ, ಅವು ಜಗತ್ತನ್ನೇ ಪಾಲಿಸಲು ಸಮರ್ಥವಾಗುತ್ತವೆ.

20. ತಸ್ಯೈವ ನಿತ್ಯಕರ್ಮಾನುಷ್ಠಾನೇನ ವಿಶುದ್ಧಾಂತಃ ಕರಣಸ್ಯ ಆತ್ಮಜ್ಞಾನಾಭಿಮುಖಸ್ಯ ಕ್ರಮೇಣ ಜ್ಞಾನನಿಷ್ಠಾ ।.

– ಗೀತಾಭಾಷ್ಯ 18–10

ನಿತ್ಯಕರ್ಮಾನುಷ್ಠಾನದಿಂದ ಅಂತಃಕರಣವು ಪರಿಶುದ್ಧವಾಗಿ ಯಾವಾತನು ಆತ್ಮಾಭಿಮುಖನಾಗಿರುತ್ತಾನೋ ಅವನಿಗೆ ಕ್ರಮವಾಗಿ ಜ್ಞಾನನಿಷ್ಠೆಯುಂಟಾಗುತ್ತದೆ.

ಅನುಬಂಧ – ೨

ಕೆಲವು ದೇಶೀಯ ವಿದೇಶೀಯ ವಿದ್ವಾಂಸರ ಅಭಿಪ್ರಾಯಗಳು

About Adi Shankara Bhagavatpada

1. **Jawaharlal Nehru**
(Discovery of India, p. 190)

"Born in Malabar in the far south of India, he travelled incessantly all over India, meeting innumerable people arguing, debating, reasoning, covincing and filling them with a part of his own passion and tremendous vitality .... In a brief life of thirty-two years he did the work of many long lives and left such an impress of his powerful mind and rich personality on India that it is very evident to-day...."

2. **Padmabhushan Sri Baldev Upadhyaya**
(Professor, Banaras Hindu University and Varanaseeya Sampurnanand Sanskrit University. Director-Research Institute Varanasi, Sahityacharya, Eminent Scholar)

"When this holy land of Bharat was sinking in the quagmire of non-vedic sects, when the black monster of immorality, malpractices and misbehaviour encircled Bharat on all the four sides, when from one end to the other end the whole of Bharat fell into the clutches of lethargy and indolence, then happened the auspicious arrival of Acharya Shankara in this country. When the flame of religiosity was at the brink of extinction in front of the dust storm of vanity and was counting its final moments Acharya Shankara saved it from getting extinguished ....In the whole world Shankara is completely identified with unity, integrity and religiosity of

this vast and great country Bharat and for us, even today, the dignity of his profound scholarship and the importance of diligence is a great trust - a great achievement"

3 **Dr. Rajendra Prasad,**

(Former President of India, a Scholar)

"Swami Shankaracharya was that great religious reacher and reformer who took the world by storm with his dynamic personality subduing all opposition and difficulties. He covered the entire country from south to north.... and gave the ancient religion of the land founded by the Rishis, a new lease of life undertaking his self-imposed mission of resuscitating the Vedic Dharma...."

4. **Dr. S. Radhakrishnan,**

(Former President of India, and internationally renowned scholar and Philosopher)

He (Shankara) is a philosopher and a poet, a savant and a saint, a mystic and a religious reformer.... There have been few minds more universal than his"

5. **Margaret Noble**

(Sister Nivedita)

'....Western people can hardly imagine a personality like that of Shankaracharya. We contemplate with wonder and delight the devotion of Francis of Assisi, the intellect of Abelard, the virile force and freedom of Martin Luther and the political efficiency of Ignatius Loyala, but who could imagine all those united in one person?'

6. **Arthur Isenberg -**

'Adwaita Vedanta of Sankara provides a complete philosophical and conceptual frame work within which the findings of

advanced modern Physical Science can be placed without stress or tear .... Sankara's philosophy is assuredly worth studying; the appeal of which became far greater with Einstein's discovery that matter and energy are interchangeable.... we must realise that Sankara must for ever be numbered among the wisest sons, not of mother India alone, but of all mankind'.

7. **Rev. J. F. Pessein**

Great credit is due to Sankara and his school for having fought strenuously against the upholders of self existence of the material world and brought the whole universe under the sway of God to whom it owes not only its organisation but also its very being. Sankara understood that the independent existence of another being would imply limitation of God.

8. **Dr. Paul Deussen**

The system of the Vedanta, as founded on the Upanishads and Vedanta Sutras and accompanied by Sankara's commentaries on them - equal in rank to plato and Kant - is one of the most valuable products of genius of mankind in his researches of the eternal truth - philosophical conceptions unequalled in India or perhaps or anywhere also in the world.... Eternal philosophical truth has seldom found more decisive and striking expression than in the doctrine of the emancipating knowledge of the Atma ·

9. **Romain Rolland :**

The only religion that can have any hold on the intellectual people is the rationalistic religion of Adwaita.

10. E. W. F. Tomlin :

With Sankara we have to do with a philosopher of very different calibre; infact we have with one of the greatest of all philosophers, whose work ought to be better known in the occident than it is.

(Some of the opinions mentioned above are taken from the book Acharya Sri Sankara's Advent, edited by Sri. V. Raj Gopal Sharma with gratitude)

ವಿದ್ವಾನ್ ಎನ್. ರಂಗನಾಥಶರ್ಮರು ಕರ್ನಾಟಕ ರಾಜ್ಯದ ಸಂಸ್ಕೃತಜ್ಞರಲ್ಲಿ ಸುಪ್ರಸಿದ್ಧರು. ಕನ್ನಡ ಸಂಸ್ಕೃತಗಳೆರಡರಲ್ಲೂ ಇವರ ಬರವಣಿಗೆಯು ಅಪಾರವಾಗಿದೆ. ಶ್ರೀಮದ್ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದವು ಇವರ ಕೀರ್ತಿಯನ್ನು ಶಾಶ್ವತಗೊಳಿಸಿದೆ. ದಿವಂಗತ ಡಾಕ್ಟರ್ ಡಿ.ವಿ. ಗುಂಡಪ್ಪನವರು ಉತ್ತಮ ಕನ್ನಡಕ್ಕೆ ಉದಾಹರಣೆಯೆಂದರೆ ಶರ್ಮರ ಈ ಕನ್ನಡ ಅನುವಾದವೆಂದು ಅಭಿಪ್ರಾಯಪಟ್ಟಿದ್ದಾರೆ ಎಂದ ಮೇಲೆ ಇವರ ವಿದ್ವತ್ತಿಗೆ ಇನ್ನಾವ ಪ್ರಮಾಣಪತ್ರವೂ ಬೇಕಾಗಿಲ್ಲ.

ಶಿವಮೊಗ್ಗ ಜಿಲ್ಲೆಯ ಸೊರಬದ ಸಮೀಪದ ನಡಹಳ್ಳಿಯಲ್ಲಿ ಜನಿಸಿದ ಶರ್ಮರು ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಅಲಂಕಾರ-ವ್ಯಾಕರಣ-ವೇದಾಂತ ಶಾಸ್ತ್ರಗಳನ್ನು ಓದಿ ಅಲ್ಲಿಯೇ ವ್ಯಾಕರಣದ ಅಧ್ಯಾಪಕರಾಗಿ ನೇಮಕಗೊಂಡು ಪ್ರಾಧ್ಯಾಪಕರಾಗಿ ನಿವೃತ್ತಿ ಹೊಂದಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಹಳಗನ್ನಡ ಗ್ರಂಥ ಸಂಪಾದನ ಸಮಿತಿಗೆ ಅಧ್ಯಕ್ಷರಾಗಿ ಅನೇಕ ಗ್ರಂಥಗಳ ಪ್ರಕಟಣೆಗೆ ಕಾರಣಕರ್ತರಾದರು. ಐದನೆಯ ಅಖಿಲ ಕರ್ನಾಟಕ ಸಂಸ್ಕೃತ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದ ಇವರು ರಾಜ್ಯ ಹಾಗೂ ಕೇಂದ್ರ ಸರಕಾರಗಳಿಂದಲೂ ಅನೇಕ ಮಠಮಂದಿರ ಸಂಘಸಂಸ್ಥೆಗಳಿಂದಲೂ ಸನ್ಮಾನಿತರಾಗಿದ್ದಾರೆ. ಈಗ್ಗೆ ಕೆಲವು ವರ್ಷಗಳ ಹಿಂದೆ ಇವರ ಅಪಾರ ಶಿಷ್ಯರೂ ಅಭಿಮಾನಿಗಳೂ ಇವರಿಗೆ "**ರಂಗಾಭಿನಂದನ**" ಎಂಬ ಸಂಭಾವನಾ ಗ್ರಂಥವನ್ನು ಅರ್ಪಿಸಿದ್ದಾರೆ.

ಸಂದರ್ಭಸೂಕ್ತಿ, ಸೂಕ್ತಿ-ವ್ಯಾಪ್ತಿ, ಅಮರಕೋಷ, ಭಗವದ್ಗೀತೆ, ವಿಷ್ಣುಪುರಾಣ, ಭಾಗವತ, ವ್ಯಾಸತಾತ್ಪರ್ಯ ನಿರ್ಣಯ ಇತ್ಯಾದಿ ಮೂಲ ಹಾಗೂ ಅನುವಾದಗಳಲ್ಲದೇ ಕನ್ನಡ-ಸಂಸ್ಕೃತಗಳಲ್ಲಿ ಅಸಂಖ್ಯಾತ ಲೇಖನಗಳು ಇವರ ಲೇಖನಿಯಿಂದ ಹೊರಹೊಮ್ಮಿವೆ. ಏಕಚಕ್ರಮ್, ಬಾಹುಬಲಿ ವಿಜಯಮ್, ಸಂಸ್ಕೃತಂ ನಾಮ ದೈವೀ ವಾಕ್ ಇತ್ಯಾದಿಗಳು ಇವರ ಸಂಸ್ಕೃತ ಕೃತಿಗಳಲ್ಲಿ ಕೆಲವು.

ಶ್ರೀ ಶಂಕರಚರಿತಾಮೃತವು ಸರಳ ಸಂಸ್ಕೃತದಲ್ಲಿ ಸಂಕ್ಷಿಪ್ತ ರೂಪದಲ್ಲಿ ಶ್ರೀ ಶಂಕರಾಚಾರ್ಯರ ಜೀವನ ಸಾಧನೆಗಳನ್ನು ಸುಂದರವಾಗಿ ನಿರೂಪಿಸಿರುವ ವಿನೂತನ ಕಾವ್ಯರತ್ನವಾಗಿದೆ.

ಬೆಲೆ : ರೂ. 30/-

ಉದಯ ಪ್ರಕಾಶನ

984, 11ನೇ 'ಎ' ಮುಖ್ಯರಸ್ತೆ, 3ನೇ ವಿಭಾಗ, ರಾಜಾಜಿನಗರ
ಬೆಂಗಳೂರು - 560 010 ದೂರವಾಣಿ : 2338 9143